ಗೌರಿ ಲಂಕೇಶರ

ಲಂಕೇಶ್

ಡಿಸೆಂಬರ್ 27, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಜೋದನೆ










ಕುದುರೆ ರೇಸು ರೌಡಿ-ಗನ್ನು!

ಮೂಲ್ಕಿ ರಫೀಕ್‌ಗೆ ಕಾದಿದೆ ಎನ್‌ಕೌಂಟರ್!



ಮಾರ್ಗದರ್ಶಿ ಚಿಟ್ ಫಂಡ್ ಮುಳುಗಿತಾ?

ಡಾ. ಪೋಲಂಕಿ ರಾಮಮೂರ್ತಿಯವರ

ಸೀತಾಯಣ

ಧಾರಾವಾಹಿ ಪ್ರಾರಂಭ



ಬೆಂಗಳೂರು ಗ್ರಾಮಾಂತರ ಜಿ.ಪಂ

ಸಿಎಂ ನೆರಳಲ್ಲಿ ಕಂಪ್ಯೂಟರ್ ಹಗರಣ



ಕರ್ನಾಟಕದ ಹೊಸ ಕೃಷಿ ನೀತಿ:


ಬೇವು ಬಿತ್ತಿ ಮಾವು ಬೆಳೆಯಲಾದೀತೆ..?

ಚಾಮುಂಡಿ ಎಲೆಕ್ಷನ್ನಿನಲ್ಲಿ ಸೋತು ಸುಸ್ತಾಗಿರುವ ಬಿಜೆಪಿ-ಜೆಡಿಎಸ್ ಸರ್ಕಾರ ಕಳೆದ ವಾರ ಹೊಸ ಕೃಷಿ ನೀತಿಯೊಂದನ್ನು ಪ್ರಕಟಿಸಿದೆ. ಹಾಗೂ ಅದನ್ನು ದೇಶದಲ್ಲೇ ಅಪ್ರತಿಮವಾದ ಯೋಜನೆಯೆಂದು ಪರಸ್ಪರರ ಬೆನ್ನು ತಟ್ಟಿಕೊಂಡಿದೆ. ಈ ಹೊಸ ಕೃಷಿ ನೀತಿಯಿಂದ ಕೃಷಿಯ ಅಭಿವೃದ್ಧಿ ದರ ಬರುವ ವರ್ಷದಲ್ಲಿ ಶೇ.4.5ಕ್ಕೆ ಏರುತ್ತದಂತೆ. ಈಗ ಅದು ಶೇ.2.5ರಷ್ಟರಲ್ಲೇ ಇದೆ. ಅಷ್ಟು ಮಾತ್ರವಲ್ಲದೆ ಈ ನೀತಿಯಿಂದಾಗಿ ರೈತರು ಆತ್ಮಹತ್ಯೆಗಳನ್ನು ಮಾಡಿಕೊಳ್ಳುವುದೂ ನಿಲ್ಲುತ್ತದಂತೆ..ಹಾಗಾದರೆ ಈ ಯೋಜನೆಯಲ್ಲಿ ಅಂಥಾ ಪವಾಡವೇನಿದೆ?

ಈ ಸರ್ಕಾರ ಮಂಡಿಸಿದ ಮೊದಲ ಬಜೆಟ್ಟಿನಂತೆ ಈ ಯೋಜನೆಯಲ್ಲಿ ಮುಂದಿಟ್ಟಿರುವ ಹಲವಾರು ಪ್ರಸ್ತಾಪಗಳಲ್ಲಿ ಅತ್ಯಂತ ಪ್ರಮುಖವಾದದ್ದು ಸಮಸ್ಯೆಗಳನ್ನು ಅಧ್ಯಯನ ಮಾಡಲು ಸಮಿತಿಗಳನ್ನು ನೇಮಕ ಮಾಡುವುದೇ ಆಗಿದೆ. ಅಲ್ಲದೆ ಈಗ ಈ ಸರ್ಕಾರದಲ್ಲಿ ಬಣ್ಣದ ಮಾತಿನಲ್ಲಿ ನಿಸ್ಸೀಮರಾಗಿರುವ ಬಿಜೆಪಿಗಳೂ ಇರುವುದರಿಂದ ಕೃಷಿ ಇಲಾಖೆಯ ಹೆಸರನ್ನು ಕೂಡಲೇ ಬದಲಾಯಿಸಿ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯೆಂದು ಮಾಡುತ್ತಾರಂತೆ! ಪ್ರಾಯಶಃ ಈ ಪ್ರಸ್ತಾಪ ಮಾತ್ರ ಕೂಡಲೇ ಜಾರಿಗೆ ಬರಬಹುದು. ಅಲ್ಲದೆ ಪ್ರತಿ ರೈತನ ಮನೆ ಬಾಗಿಲಿಗೆ ರೈತ ಮಿತ್ರ ಪುಸ್ತಿಕೆ, ಸಲಹೆಗಳನ್ನು ತಲುಪಿಸುತ್ತಾರಂತೆ. ಜೊತೆಗೆ ಈಗಾಗಲೇ ಸರ್ಕಾರ ರೈತರಿಗೆ ಏನು ಸಾಲ ಕೊಡುತ್ತಿತ್ತೊ ಅದನ್ನೇ ಮುಂದುವರೆಸುವ ಪ್ರಸ್ತಾಪವಿದೆ...! ಇದಲ್ಲದೆ ಕೇಂದ್ರ ಸರ್ಕಾರವೂ ಸಹ ರೈತರಿಗೆ ಶೇ.4ರ ಬಡ್ಡಿದರದಲ್ಲಿ ಸಾಲ ಕೊಡಬೇಕೆಂಬ ಬೇಡಿಕೆಯ ಪುನರುಚ್ಚಾರವಿದೆ. ಆದರೆ ಅಸಲಿ ವಿಷಯವೇನೆಂದರೆ ರೈತ ಮಾಡಿಕೊಳ್ಳುತ್ತಿರುವ ಸಾಲದಲ್ಲಿ ಕೇಂದ್ರೀಯ ಬ್ಯಾಂಕುಗಳ ಮೂಲಕ ಪಡೆದುಕೊಳ್ಳುವ ಸಾಲ ಕೇವಲ ಶೇ.25ರಷ್ಟು ಮಾತ್ರ. ಉಳಿದ ಶೇ.75ರಷ್ಟು ಸಾಲವನ್ನು ಚಕ್ರಬಡ್ಡಿ ,ರಕ್ತ ಹೀರುವ ಬಡ್ಡಿ ಲೆಕ್ಕದಲ್ಲಿ ಸುತ್ತಮುತ್ತಲಿನ ಲೇವಾದೇವಿಗಾರರಿಂದಲೇ ಪಡೆಯುತ್ತಾನೆ. ಇವು ನಿಲ್ಲಬೇಕೆಂದರೆ ಪಡೆದುಕೊಳ್ಳದಿರುವ ಸಾಲದ ಮೇಲಿನ ಬಡ್ಡಿ ಕಡಿಮೆ ಮಾಡುವ ಗಿಮ್ಮಿಕ್ಕಿಗಿಂತ ಈ ಲೇವಾದೇವಿಗಾರರ ಶೋಷಣೆಯನ್ನು ನಿಲ್ಲಿಸುವ ಮತ್ತು ವ್ಯವಸ್ಥಿತ ಸಾಲದ ಹರಹನ್ನು ಹೆಚ್ಚಿಸುವ ಯೋಜನೆಯನ್ನು ಹಾಕಬೇಕಿತ್ತು. ಅದೇ ರೀತಿ ರೈತ ಬೆಳೆದ ಬೆಳೆಯನ್ನು ಸಂಗ್ರಹಿಸಿಡುವ ಸ್ಟೋರೇಜ್ ಸೆಂಟರ್‌ಗಳನ್ನು ಪ್ರಾರಂಭಿಸುವ ಪ್ರಸ್ತಾಪವಿದೆ. ಇದು



ಕೇವಲ ಪ್ರಸ್ತಾಪದ ಹಂತದಲ್ಲೇ ಇರುವುದು ಒಂದಾದರೆ ರೈತನಿಗೆ ಬೇಕಿದ್ದ ಬೆಳೆಗೆ ಲಾಭದಾಯಕ ಬೆಲೆಯನ್ನು ಕೊಡುವ ಪ್ರಸ್ತಾಪವೇ ಈ ಯೋಜನೆಯಲ್ಲಿಲ್ಲ! ಇನ್ನು ಪ್ರಧಾನವಾಗಿ ಅಂದರೆ ಕೃಷಿಗಿಂತ ಹೆಚ್ಚಾಗಿ ಕೃಷಿಯೇತರ ಕಾರ್ಯಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹ ಕೊಡುವುದಾಗಿ ಒಂದು ಪುಕ್ಕಟೆ ಘೋಷಣೆ ಇದೆ. ಅದರರ್ಥ ಇನ್ನು ಮುಂದೆ ಹೆಚ್ಚಿನ ರೈತರು ಕೃಷಿಯಲ್ಲದ ಚಟುವಟಿಕೆಗಳಲ್ಲಿ ನಿರತರಾಗುತ್ತಾರೆ, ಅಂದರೆ ಕೃಷಿಯಿಂದ ಹೊರಬರುತ್ತಾರೆ ಎಂದೇ ಅರ್ಥವಲ್ಲವೇ?



- ಶಿವಸುಂದರ್-

ಅದೇ ರೀತಿ ಈ ನೀತಿಯಲ್ಲಿ ಮಣ್ಣಿನ ಗುಣಮಟ್ಟ ರಕ್ಷಣೆಯನ್ನು ಮಾಡಲು ಹೆಚ್ಚಿನ ಗಮನವಹಿಸುವ ಆಶಯವನ್ನು ಪ್ರಕಟಿಸಲಾಗಿದೆ. ಈಗ ಮಣ್ಣಿನ ಗುಣಮಟ್ಟವನ್ನು ಹಾಳು ಮಾಡುತ್ತಿರುವುದು ಯಾವುದು? ಹಸಿರು ಕ್ರಾಂತಿಯ ಹೆಸರಲ್ಲಿ ಹೇರಲಾಗಿರುವ ಹೈಬ್ರೀಡ್ ಬೀಜ, ರಾಸಾಯನಿಕ ಗೊಬ್ಬರ, ಅಪಾಯಕಾರಿ ಕ್ರಿಮಿನಾಶಕ, ಮತ್ತು ಅತ್ಯಧಿಕ ನೀರಿನ ಬಳಕೆ. ಇವುಗಳನ್ನು ಆಧರಿಸಿ ನಡೆದಿರುವ ಉತ್ಪಾದನಾ ಪದ್ಧತಿ ಬದಲಾಗದೆ ಮಣ್ಣಿನ ಗುಣಮಟ್ಟವನ್ನು ಹೇಗೆ ಕಾಪಾಡಿಕೊಳ್ಳಲು ಸಾಧ್ಯ? ಇದೇ ಸರ್ಕಾರ ಒಂದೆಡೆ ಈ ಬಗೆಯ ಕೃಷಿಯನ್ನೇ ಪ್ರೋತ್ಸಾಹಿಸುತ್ತಾ ಮಣ್ಣಿನ ಗುಣಮಟ್ಟವನ್ನು ಹೇಗೆ ರಕ್ಷಿಸಿಕೊಳ್ಳಲು ಸಾಧ್ಯ?

ಇದೆಲ್ಲಕ್ಕಿಂತ ಮುಖ್ಯವಾಗಿ ಈ ನೀತಿಯಲ್ಲಿ ಇಡಿ ಕರ್ನಾಟಕವನ್ನು ಹತ್ತು ವಲಯಗಳನ್ನಾಗಿ ವಿಭಜಿಸಿ ವಲಯವಾರು ನಿಗದಿತ ಬೆಳೆ ಉತ್ಪಾದನೆ ಮಾಡುವಂತೆ ಮಾಡುವ ಅಪಾಯಕಾರಿ ಪ್ರಸ್ತಾಪವಿದೆ. ಇದು ವಿಶ್ವ ಬ್ಯಾಂಕ್ ಮತ್ತು ಎಡಿಬಿಗಳು ಎರಡು ವರ್ಷಗಳ ಕೆಳಗೆ ಸಲ್ಲಿಸಿದ್ದ ಪ್ರಸ್ತಾಪವೇ ಆಗಿದ್ದು ಕರ್ನಾಟಕವನ್ನು ಕೃಷಿ ರಫ್ತು ವಲಯವನ್ನಾಗಿ ಮಾಡಿಕೊಳ್ಳುವ ಹುನ್ನಾರವಿದೆ. ಇದಕ್ಕಾಗಿಯೇ ರಿಲಯನ್ಸ್‌ನಂತ ಬೃಹತ್ ಉದ್ಯಮಿಗಳು ಸಾವಿರಾರು ಎಕರೆ ವಶಪಡಿಸಿಕೊಳ್ಳಲು ಬರುತ್ತಿವೆ. ಈ ಹೊಸ ನೀತಿ ಅದಕ್ಕೆ ಪೂರಕ ವಾತಾವರಣವನ್ನಷ್ಟೇ ಒದಗಿಸುತ್ತಿದೆ.

ಇದಲ್ಲದೆ ಪ್ರಯೋಗಾಲಯದಲ್ಲಿ ಕಂಡುಹಿಡಿಯುವ ವೈಜ್ಞಾನಿಕ ಅವಿಷ್ಕಾರದ ಲಾಭವನ್ನು ನೇರವಾಗಿ ರೈತರ ಮನೆ ಬಾಗಿಲಿಗೆ ತಲುಪಿಸುವ ಯೋಜನೆಯೂ ಸರ್ಕಾರಕ್ಕಿದೆಯಂತೆ. ವಾಸ್ತವಾಗಿ ಈ ತಥಾಕಥಿತ ವೈಜ್ಞಾನಿಕತೆಯೇ ಮಣ್ಣಿನ ಗುಣಮಟ್ಟವನ್ನು ಕಡಿಮೆ ಮಾಡಿರುವುದು ಮತ್ತು ನೀರು ಇನ್ನಿತ್ಯಾದಿ ಸಂಪನ್ಮೂಲಗಳು ರೈತರ ಕೈ ತಪ್ಪುವಂತೆ ಮಾಡಿರುವುದು. ಈ ವೈಜ್ಞಾನಿಕ ಅವಿಷ್ಕಾರಗಳು ಜನರಿಂದ ಎಷ್ಟು ದೂರವಿದ್ದರೆ ಅಷ್ಟು ರೈತರಿಗೆ ಲಾಭ.

ಇವೆಲ್ಲ ಅಲ್ಲದೆ ಬಜೆಟ್ಟಿನ ಶೇ. 10 ರಷ್ಟನ್ನು ಕೃಷಿಗೆಂದೇ ತೆಗೆದಿರಸಬೇಕೆಂಬ ನೀತಿ ಸರ್ಕಾರದ್ದು ಎಂದು ಹೇಳಿಕೊಳ್ಳಲಾಗಿದೆ.ಇದು ಪ್ರತಿ ವರ್ಷ ಹೇಳುವ ಮಾತೇ ಆದರೂ ಅಸಲಿ ಸಮಸ್ಯೆ ಎಷ್ಟು ದುಡ್ಡು ಕೃಷಿಗೆ ಬಂತೆಂಬುದಲ್ಲ, ಬದಲಿಗೆ ಬಂದ ದುಡ್ಡು ಕೃಷಿಯಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಹೋಗುತ್ತದೋ ಅಥವಾ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಣ್ಣ ರೈತರ ಕೃಷಿಗೆ ಬೆಂಬಲವಾಗಿ ಬರುತ್ತದೋ ಎಂಬುದು...

ಒಂದೆಡೆ ಸರ್ಕಾರದ ಎಲ್ಲಾ ನೀತಿಗಳು ಸಣ್ಣ ರೈತರನ್ನು ಕೃಷಿಯಿಂದ ಒಕ್ಕಲೆಬ್ಬಿಸಿ ಕಾರ್ಪೋರೇಟ್ ಕೃಷಿಯನ್ನೇ ಜಾರಿಗೆ ತರುತ್ತಿರುವಾಗ ಈ ನೀತಿ ಮಾತ್ರ ಅದಕ್ಕಿಂತ ಹೇಗೆ ಭಿನ್ನವಾಗಿರಲು ಸಾಧ್ಯ..!

ಬೇವು ಬಿತ್ತಿ ಮಾವು ಬೆಳೆಯಲಾದೀತೆ?

No Comments


"ಇದೇ ತಿಂಗಳು ನಡೆಯಲಿರುವ ಜೆಡಿ(ಎಸ್) ಸಭೆಯಲ್ಲಿ ದೇವೇಗೌಡರನ್ನು ಗಂಟುಮೂಟೆ ಸಮೇತ ಕಿತ್ತೊಗೆಯುತ್ತೇವೆ"

-ವೀರೇಂದ್ರ ಕುಮಾರ (ಜೆಡಿಎಸ್‌ನ ಕೇಂ ಸಮಿತಿ ಸದ



"ರಾಜಕೀಯದಲ್ಲಿ ಯಾರೂ ಶಾಶ್ವತ ಶತ್ರುಗಳು ಅಲ್ಲ-ಶಾಶ್ವತ ಮಿತ್ರರೂ ಅಲ್ಲ"

-ಹೆಚ್.ಡಿ.ಕುಮಾರಸ್ವಾಮಿ



"ನಾನು ತಪ್ಪು ಮಾಡಿದ್ದೇನೆ..ಹಿರಿಯರ ಮಾತು ಕೇಳಿದ್ದಿದ್ದರೆ ನನಗೆ ಈ ಗತಿ ಬರುತ್ತಿರಲಿಲ್ಲ"

-ಪಿ.ಜಿ.ಆರ್.ಸಿಂಧ್ಯ

"ಕನಿಷ್ಟ ಮೂರು ಮಕ್ಕಳನ್ನಾದರೂ ಹೆತ್ತು ಈ ದೇಶ ಮುಸ್ಲಿಂ ರಾಷ್ಟ್ರವಾಗುವುದನ್ನು ತಪ್ಪಿಸಿ"

-ಸುದರ್ಶನ, ಆರೆಸ್ಸೆಸ್ ಸರಸಂ ಚಾಲ



"ನೆಹ್ರೂ ಮನೆತನ ದೇಶಕ್ಕಾಗಿ ತ್ಯಾಗ ಮಾಡಿದರೆ ಗೌಡರು ಮನೆತನಕ್ಕಾಗಿ ದೇಶವನ್ನೇ ತ್ಯಾಗ ಮಾಡುತ್ತಾರೆ"

-ಸಿದ್ದರಾಮಯ್ಯ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ಪಶ್ಚಿಮ ಬಂಗಾಳದಲ್ಲಿ ಜನರೇ ಸ್ವಯಂಪ್ರೇರಿತರಾಗಿ ಬಂದ್ ಮಾಡುತ್ತಾರೆ"

-ಸಿ.ಪಿ.ಎಂ.ಪಕ್ಷದ ವಕ್ತಾರ

"ಮುಷ್ಕರದಿಂದ ಕರ್ನಾಟಕಕ್ಕೆ ಸಾವಿರ ಕೋಟಿ ನಷ

-ಒಂದು ಇಂಗ್ಲೀಷ್ ಪತ್ರಿಕೆಯ ವರ

"ಬೆಂಗಳೂರು-ಹಾಸನ-ಮಂಗಳೂರು ರೈಲು ಜನವರಿ ಅಂತ್ಯದಿಂದ ಆರಂಭ"

-ಸರ್ಕಾರದ ಹೇಳಿಕೆ



"ಈಗಲೇ ಕಾಂಗ್ರೆಸ್ ಸೇರುವ ಆತುರದ ನಿರ್ಧಾರ ಕೈಗೊಳ್ಳಲಾರೆ"

-ಶ್ರೀನಿವಾಸ ಪ್ರಸಾದ


ವಾರದ ವಿವೇಕದ ನುಡಿ

"ಪ್ರಾಥಮಿಕ ಶಿಕ್ಷಣದಲ್ಲಿ ಎಷ್ಟನೇ ತರಗತಿಯಿಂದ ಇಂಗ್ಲೀಷ್ ಕಲಿಸಬೇಕೆಂಬ ವಿಷಯವನ್ನು ತಜ್ಞರ ವಿವೇಚನೆಗೆ ಬಿಟ್ಟುಬಿಡಿ"

-ರಾಷ್ಟ್ರಕವಿ ಜಿ.ಎಸ್.ಶಿವರುದ್ರ

ಮುಷ್ಕರಗಳಿಂದ ಬಾಧೆಗೊಳಗಾಗುವ "ಸಾರ್ವಜನಿಕ" ಯಾರು?

ಮೊನ್ನೆ ಡಿಸೆಂಬರ್ 14ರಂದು ದೇಶದ ಹಲವಾರು ಕಾರ್ಮಿಕ ಸಂಘಟನೆಗಳು ಮುಷ್ಕರಕ್ಕೆ ಕರೆಕೊಟ್ಟಿದ್ದವು. ಕಾರಣ ಕೇವಲ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳುವುದು ಮಾತ್ರವಾಗಿರಲಿಲ್ಲ, ಬೆಲೆ ಏರಿಕೆ, ಖಾಸಗೀಕರಣದಂತ ಈ ದೇಶದ ಜನತೆಯ ಶೇ.80ರಷ್ಟು ಜನತೆಯ ಬದುಕಿನ ಸಮಸ್ಯೆಗಳನ್ನು ಮುಂದಿಟ್ಟುಕೊಂಡೇ ಮುಷ್ಕರಕ್ಕೆ ಕರೆ ನೀಡಿದ್ದರು. ಅದು ಎಷ್ಟರ ಮಟ್ಟಿಗೆ ಯಶಸ್ವಿಯಾಯಿತೆಂಬುದು ಕರೆ ನೀಡಿದ ಸಂಘಟನೆಗಳು ಎಷ್ಟು ಜನರೊಂದಿಗೆ ಕೆಲಸ ಮಾಡುತ್ತಿವೆ ಎಂಬುದನ್ನು ಸೂಚಿಸುತ್ತವೆ. ಈಗ ವಿಷಯ ಅದಲ್ಲ, ಕಾರ್ಪೋರೇಟ್ ಪರವಾಗಿರುವ ಪತ್ರಿಕೆಗಳು ಈ ಮುಷ್ಕರವನು ಹೇಗೆ ವರದಿ ಮಾಡುತ್ತವೆ ಮತ್ತು ಅದರ ಹಿಂದಿನ ತಿಳವಳಿಕೆ ಏನು?



ಯಥಾ ಪ್ರಕಾರ 15 ನೇ ತಾರೀಕಿನ ಪೇಪರ್‌ನಲ್ಲಿ ಮುಷ್ಕರದಿಂದ ಸಾರ್ವಜನಿಕರಿಗೆ ಸಿಕ್ಕಾಪಟ್ಟೆ ತೊಂದರೆತಾಯಿತೆಂಬ ವರದಿ. ಈ ಹಿಂದೆ ಬ್ಯಾಂಕ್ ನೌಕರರು ಮುಷ್ಕರ ಮಾಡಿದ್ದಾಗಲೂ ಅದರಿಂದ ಸಾರ್ವಜನಿಕರಿಗೆ ಅನ್ಯಾಯವಾಯಿತೆಂಬ ವರದಿ... ಮತ್ತೊಮ್ಮೆ ಸಾರಿಗೆ ನೌಕರರು ಮುಷ್ಕರ ಮಾಡಿದರೂ ಸಾರ್ವಜನಿಕರಿಗೆ ತೊದರೆಯಾಯಿತೆಂಬ ವರದಿ... ರೈತರು ನಗರದಲ್ಲಿ ಮೆರವಣಿಗೆ ತೆಗೆದರೂ ಅದರಿಂದ ಸಾರ್ವಜನಿಕರಿಗೆ ತೊಂದರೆ..


ಹಾಗಿದ್ದಲ್ಲಿ ಕಾರ್ಮಿಕನೂ ಅಲ್ಲದ, ನೌಕರನೂ ಅಲ್ಲದ, ರೈತನೂ ಅಲ್ಲದ ಈ ಸಾರ್ವಜನಿಕ ಯಾರು? ಅದು ನಗರದ ಸಂಪನ್ನ ವರ್ಗ ಮಾತ್ರ. ಈ ದೇಶದ ಸಾರ್ವಜನಿಕರು ಅವರೇ ಎಂದಾದರೆ ನಾವೆಲ್ಲಾ ಯಾರು? ಸರ್ಕಾರ ಈ "ಸಾರ್ವಜನಿಕ"ರಿಗಾಗಿಯೇ ಕೆಲಸ ಮಾಡುತ್ತದೆ ಎಂಬುದು ನಿಜವಾದರೂ ಆಗ ನಾವು ಈ ದೇಶದ ನಾಗರೀಕರೇ ಅಲ್ಲ ಎಂತಾಗುವುದಿಲ್ಲವೇ? ಈ ಪತ್ರಿಕೆಗಳು ನಮ್ಮನ್ನು ಈ ದೇಶದ ನಾಗರೀಕರೂ ಅಲ್ಲವೆಂದು ಬಿತ್ತರಿಸುತ್ತಿಲ್ಲವೇ?

ಸ್ವತಂತ್ರ್ಯ ಮಾಧ್ಯಮ ಮತ್ತು ತಟಸ್ಥ ನ್ಯಾಯಾಂಗದ ಕುರಿತು....

"ಬಿಡಜನತೆಯ ಬಗ್ಗೆ ಮತ್ತು ಅವರ ಕಾಳಜಿಯ ಬಗ್ಗೆ ಮಾಧ್ಯಮಗಳಿಗಿರುವ ಪೂರ್ವಾಗ್ರಹಗಳು ಅವು ಬಡಜನತೆಯ ಪ್ರತಿಭಟನೆಗಳನ್ನು ವರದಿ ಮಾಡುವಾಗ ಸ್ಪಷ್ಟವಾಗಿ ಅಭಿವ್ಯಕ್ತಗೊಳ್ಳುತ್ತವೆ. ಅಂತಹ ಪ್ರತಿಭಟನೆಗಳು ಪತ್ರಿಕೆಯ ಯಾವುದೋ ಮೂಲೆಯಲ್ಲಿ ಒಂದು ಸಣ್ಣ ಬಾಕ್ಸ್ ಐಟಂ ಆಗಿ ಪರಿವರ್ತನೆಗೊಂಡಿರುತ್ತದೆ. ಮತ್ತು ಅದರಲ್ಲಿ ಅವರ ಬೇಡಿಕೆಗಳ ಬದಲು ಈ ಪ್ರತಿಭಟನೆಯಿಂದ ಹೇಗೆ ಟ್ರಾಫಿಕ್ ಜಾಮ್ ಉಂಟಾಗಿ ಸಾರ್ವಜನಿಕರು ಹೇಗೆ ಕಷ್ಟಪಡಬೇಕಾಯಿತು ಎಂಬ ವರದಿಗಳಿರುತ್ತವೆ. ಸಾರ್ವಜನಿಕ ಪ್ರತಿಭಟನೆಗಳನ್ನು ಕಾನೂನು ಪಾಲಕ ವ್ಯವಸ್ಥೆ ನಗರದ ದೂರದ ಮೂಲೆಗೆ ಸೀಮಿತಗೊಳಿಸುತ್ತಿರುವುದು ಮತ್ತು ಮಾಧ್ಯಮಗಳು ಇಂತಹ ಪ್ರತಿಭಟನೆಗಳನ್ನು ಒಂದು ಸಾರ್ವಜನಿಕ ಪೀಡೆ ಎಂದು ಪರಿಗಣಿಸುತ್ತಿರುವುದು ಈ ದೇಶದಲ್ಲಿ ಪ್ರಜಾತಂತ್ರ ದಿನೇ ದಿನೇ ಕ್ಷಯಿಸುತ್ತಿದೆ ಎಂಬುದಕ್ಕೆ ಒಂದು ಉದಾಹರಣೆಯಾಗಿದೆ."


-ರಾಜೇಂದ್ರ ಕೆ. ಸೈಲ್
ಮಾನವ ಹಕ್ಕು ಕಾರ್ಯದರ್ಶಿ, PUCL ಅಧ್ಯಕ್ಷ

"80ರ ದಶಕದಲ್ಲಿ ಬಡಜನತೆಗೆ ಪರಿಹಾರದ ಆಶಾಕಿರಣ ನೀಡಬಲ್ಲವೆಂಬ ಭರವಸೆ ನೀಡಿದ್ದ ಕೋರ್ಟುಗಳು 90ರ ದಶಕದಲ್ಲಿ ಹೆಚ್ಚು ಕಡಿಮೆ ಬಡವರ ವಿರೋಧಿಯೇ ಆಗಿಬಿಟ್ಟವೆ. ಜಾಗತೀಕರಣದ-ಖಾಸಗೀಕರಣದ ಪ್ರಚಾರ ಶಕ್ತಿಗಳು ನ್ಯಾಯಾಲಯಗಳನ್ನು ತೀವ್ರವಾಗಿ ಪ್ರಭಾವಿಸಿವೆ. ಉದಾಹರಣೆಗೆ ದೆಹಲಿಯಲ್ಲಿ ಇತ್ತೀಚೆಗೆ ನಡೆದ ಸ್ಲಂ ಡಿಮಾಲಿಷನ್ ಬಗ್ಗೆ NAPM ದಾಖಲಿಸಿದ ಅಹವಾಲನ್ನು ಕೋರ್ಟು ಪರಿಗಣನೆಗೇ ತೆಗೆದುಕೊಳ್ಳಲಿಲ್ಲ, ಆದರೆ ದೆಹಲಿಯ ಶ್ರೀಮಂತರು ನೀಡಿದ ದೂರನ್ನು ಕೂಡಲೇ ಪರಿಗಣಿಸಿ ಸ್ಲಂಗಳಲ್ಲಿ ದಶಕಗಳಿಂದ ವಾಸವಾಗಿದ್ದ ಸಹಸ್ರಾರು ಜನರನ್ನು ಎತ್ತಂಗಡಿ ಮಾಡಿಸಿತು. ಮತ್ತೊಂದು ಉದಾರಣೆಯೆಂದರೆ "ಎಲ್ಲಾ ಕಾರ್ಮಿಕ ಕಾನೂನುಗಳನ್ನು ಸರ್ಕಾರ ಅನುಸರಿಸುತ್ತಿರುವ ಉದಾರೀಕರಣ ನೀತಿಯ ಭಾಗವಾಗಿ ವ್ಯಾಖ್ಯಾನ ಮಾಡಬೇಕೆಂದು" ಸುಪ್ರೀಂ ಕೋರ್ಟ್ ಒಂದು ನೀತಿಯನ್ನೇ ಮಾಡಿಬಿಟ್ಟಿರುವುದು. ಆದ್ದರಿಂದಲೇ ನ್ಯಾಯಾಲಯಗಳು ಶ್ರೀಮಂತರ ಹಕ್ಕುಗಳನ್ನು ಖಾತರಿಪಡಿಸುವ ಸಾಧನವೇ ಹೊರತು ಬಡವರ ಬದುಕನ್ನು ರಕ್ಷಿಸುವ ರಕ್ಷಕನಲ್ಲವೆಂದು ಬಡಜನತೆ ಸಹಜವಾಗಿಯೇ ಭಾವಿಸುವಂತಾಗಿದೆ."



ಪ್ರಶಾಂತ್ ಭೂಷಣ್. (ಸುಪ್ರೀಂ ಕೋರ್ಟಿನ ಹಿರಿಯ ವಕೀಲ)

'ಹಣ ಬಂದರೆ ಹೆಣವೂ ಬಾಯಿ ಬಿಡುತ್ತೆ' ಎನ್ನುವುದು ಗಾದೆಯಾಯ್ತು. ಹಣವೇ ಸರ್ವಸ್ವವಲ್ಲ; ಆದರೂ ಸರಳ ಜೀವನಕ್ಕೂ ಹಣದ ಅವಶ್ಯಕತೆ ಇದ್ದೇ ಇದೆ.



ಸ್ವೀಡನ್‌ನ ಗಾದೆಯೊಂದು ಹೇಳುತ್ತದೆ: 'ಹಣ ಮಾತನಾಡುವಾಗ ಪ್ರಪಂಚ ಮೌನವಾಗಿರುತ್ತದೆ....'

ನಮ್ಮ ಓದುಗ ಬಸವರಾಜ್ ಬೆಸ್ತರ್ ಕಳಿಸಿರುವ ಹಣದ ವ್ಯಾಮೋಹ ಮತ್ತು ಅದರ ಫಲಿತಾಂಶಗಳ ಕುರಿತ ಸೂಕ್ತಿಗಳನ್ನು ನೀಡಿದ್ದೇವೆ... ಇದಕ್ಕೇನೂ ನೀವು *extra* ಹಣ ನೀಡಬೇಕಿಲ್ಲ, ಓದಿ ನೋಡಿ.

-ಮ

ರಷ್ಯಾ ಎಂಬ ದುರಂತದ ನಾಡು...

ಇವತ್ತು ನಾವೆಲ್ಲ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದಿಂದಾಗುತ್ತಿರುವ ಪರಿಣಾಮಗಳ ಬಗ್ಗೆ ಚರ್ಚಿಸುತ್ತಿದ್ದೇವೆ. ಆದರೆ ಸಮಾಜವಾದಿ ಭಾರತ ಕ್ಕಿಂತಲೂ ಒಂದು ದಶಕದ ಮುನ್ನ ಉದಾರೀಕರಣದ ಹಾದಿಯನ್ನು ಹಿಡಿದ ಕಮ್ಯುನಿಸ್ಟ್ ರಷ್ಯಾ ಈಗ ಹೇಗಿದೆ ಎಂದು ನೋಡಿದರೆ ನಮ್ಮ ದೇಶಕ್ಕೆ ಕಾದಿರುವ ಆಪತ್ತು ಅರ್ಥವಾಗುತ್ತದೆ.

ಮಾಜಿ ಕಮ್ಯುನಿಸ್ಟ್, ಹಾಲಿ ಪ್ರಜಾಪ್ರಭುತ್ವದ 'ದಾರಿ'ಯಲ್ಲಿರುವ ರಷ್ಯಾದಲ್ಲಿ ಇವತ್ತು ಏನಾಗುತ್ತಿದೆ ಎಂದರೆ ಒಂದೆಡೆ ಅಪಾರ ಹಸಿವು, ಬಡತನ, ನಿರುದ್ಯೋಗ ತಾಂಡವವಾಡುತ್ತಿದ್ದರೆ, ಇನ್ನೊಂದೆಡೆ ಸಂಘಟಿತ ಮಾಫಿಯಾಗಳು, ದೇಶದ ಸಂಪತ್ತನ್ನು ಲೂಟಿ ಹೊಡೆಯುತ್ತಿರುವ ಖಾಸಗಿ ಕಂಪನಿಗಳು, ಸ್ವಹಿತಾಸಕ್ತಿ ರಾಜಕಾರಣದಲ್ಲಿ ತೊಡಗಿರುವ ನಾಯಕರು ರಾರಾಜಿಸುತ್ತಿದ್ದಾರೆ.

ಇವೆರಡರ ಮಧ್ಯೆ ನಿಜವಾದ ಪ್ರಜಾಪ್ರಭುತ್ವ ಇರಲಿ, ಮಾನವಹಕ್ಕುಗಳು, ವಾಕ್ ಸ್ವಾತಂತ್ರ್ಯ, ಸಮಾನತೆ ಎಂಬುದೆಲ್ಲ ನಾಪತ್ತೆಯಾಗುತ್ತಿವೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಬಹುದಾದರೆ, ಕಠಿಣ ಕಮ್ಯುನಿಸ್ಟ್ ರಷ್ಯಾಗಿಂತ ಕಠೋರವಾದ 'ಪ್ರಜಾಪ್ರಭುತ್ವ' ಇಂದು ರಷ್ಯಾದಲ್ಲಿ ಅಸ್ತಿತ್ವದಲ್ಲಿದೆ.

ಈ ಜಾಗತೀಕರಣದ ಪ್ರಜಾಪ್ರಭುತ್ವ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದಕ್ಕೆ, ಮೊನ್ನೆ ಹತ್ಯೆಯಾಗಿರುವ ಅಲೆಕ್ಸಾಂಡರ್ ಲಿಟ್ವಿನೆಂಕೊ ಎಂಬಾತನೇ ಸಾಕ್ಷಿ.



ಲಿಟ್ವಿನೊ

ಇದ್ದಕ್ಕಿದ್ದಂತೆ ಅಸ್ವಸ್ಥರಾಗಿ ಲಂಡನ್ನಿನಲ್ಲಿ ಆಸ್ಪತ್ರೆ ಸೇರಿದ ಲಿಟ್ವಿನೆಂಕೊರವರು ಸ್ವತಃ ರಷ್ಯಾ ದೇಶದ ಪ್ರಜೆ ಮಾತ್ರವಲ್ಲ, ಆ ದೇಶದ ಗುಪ್ತ ದಳವಾದ ಕೆಜಿಬಿಯಲ್ಲಿ ಹಿರಿಯ ಅಧಿಕಾರಿ ಆಗಿದ್ದವರು. ಸರ್ಕಾರದ ಆದೇಶಗಳನ್ನು ಪಾಲಿಸುತ್ತಾ ಮಾಫಿಯಾದವರ ಕಾರ್ಯಾಚರಣೆ, ಭಯೋತ್ಪಾದಕರ ಚಲನೆ ಮೇಲೆಲ್ಲ ಕಣ್ಣಿಟ್ಟು ಕೆಲಸ ಮಾಡಿದವರು.


ಆದರೆ 80 ರ ದಶಕದಲ್ಲಿ ಗೋರ್ಬಚೊವ್ ಪ್ರಾರಂಭಿಸಿದ ಪೆರೆಸ್ಟ್ರಾಯ್ಕಾ (ಉದಾರೀಕರಣ) ಮತ್ತು ಗ್ಲಾಸ್‌ನಾಸ್ಟ್ (ಪುನರ್ ನಿರ್ಮಾಣ) ಎಂಬ ಆರ್ಥಿಕ ನೀತಿಗಳು, 90 ರ ದಶಕದಲ್ಲಿ ಯೆಲ್ಟ್ಸಿನ್‌ರ ನೇತೃತ್ವದಲ್ಲಿ ಯಾವ ಮಟ್ಟಕ್ಕೆ ಹೋಯಿತೆಂದರೆ, ಅಲ್ಲಿನ ಕೈಗಾರಿಕೆಗಳು ನೈಸರ್ಗಿಕ ಸಂಪತ್ತು ಎಲ್ಲವೂ ರಾಜಕೀಯ ನಾಯಕರ ಆಪ್ತ ಬಳಗದವರ ವಶವಾಯಿತು. ಕೃಷಿ ಅರ್ಧಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕುಸಿಯಿತು. ಊಟ, ಉದ್ಯೋಗವಿಲ್ಲದೆ ಜನ ಕಂಗಾಲಾದರು. ಹೊಸದಾಗಿ ಜನಿಸಿದ ಮಕ್ಕಳು ಹುಟ್ಟಿ ಹಲವೇ ದಿನಗಳಲ್ಲಿ ಕಣ್ಣು ಮುಚ್ಚುತ್ತಿದ್ದರೆ, ಅದೆಷ್ಟೋ ಜನ ಆತ್ಮಹತ್ಯೆಗೆ ಶರಣಾದರು. ಇದೆಲ್ಲದರ ಮಧ್ಯೆ, ಇದ್ದಕ್ಕಿದ್ದಂತೆ ಶ್ರೀಮಂತರಾದವರು ತಮ್ಮ ಅಕ್ರಮ ಗಳಿಕೆಯನ್ನು ಕಾಪಾಡಲು ತಮಗೆ ಬೇಕಾದ ರಾಜಕಾರಣಿಗಳನ್ನು ಬೆಳೆಸಲಾರಂಭಿಸಿದರು, ತಮ್ಮ ರಕ್ಷಣೆಗೆ ಮಾಫಿಯಾ ಗುಂಪುಗಳನ್ನು ಕಟ್ಟಲಾರಂಭಿಸಿದರು. ರಷ್ಯಾದಲ್ಲಿ ಕಮ್ಯೂನಿಸಂ ಹೋಗಿ ಪ್ರಜಾತಂತ್ರ ಬಂತೆಂದು ಅಮೆರಿಕ ಸಂಭ್ರಮಿಸುತ್ತಿತ್ತು.

ಆದರೆ ವಾಸ್ತವವಾಗಿ ಅಲ್ಲಿ ಪ್ರಜಾತಂತ್ರ ಬಂದಿರಲಿಲ್ಲ, ಬದಲಾಗಿ ಪಾಳೆಗಾರಿಕೆ ಪದ್ಧತಿ ಮತ್ತೆ ನಿರ್ಮಾಣವಾಗಿತ್ತು. ಅದಕ್ಕೆ ಕಳಶವಿಟ್ಟಂತೆ ಪ್ರಜಾತಾಂತ್ರಿಕವಾಗಿ ಗೆದ್ದಿದ್ದ ಸಂಸತ್ತನ್ನೇ ಟ್ಯಾಂಕುಗಳನ್ನು ಕಳುಹಿಸಿ ಉರುಳಿಸಿದ್ದ ಯೆಲ್ಟ್ಸಿನ್.

ಈ ಪಾಳೆಗಾರಿಕೆಯ ಕೂಸು ರಷ್ಯಾದ ಇವತ್ತಿನ ಅಧ್ಯಕ್ಷ ಪುಟಿನ್. ಅಧಿಕಾರಕ್ಕೆ ಬಂದ ಕೂಡಲೇ ಪುಟಿನ್ ಮಾಡಿದ ಮೊದಲ ಕೆಲಸ ಯೆಲ್ಟ್ಸಿನ್ ಮತ್ತಾತನ ವಂಶದವರು ಅಕ್ರಮವಾಗಿ ಗಳಿಸಿದ್ದ ಆಸ್ತಿಯ ಬಗ್ಗೆ ವಿಚಾರಣೆ ನಡೆಯದಂತೆ ಕಾನೂನಿನ ರಕ್ಷಣೆ ನೀಡಿದ್ದು.

ಹೀಗೆ ಬದಲಾದ ರಷ್ಯಾದಲ್ಲಿ ದಿನ ಬೆಳಗಾಗುವುದರೊಳಗೆ ಅಕ್ರಮವಾಗಿ ಕೋಟ್ಯಾಧಿಪತಿ ಆದವರಲ್ಲಿ ಬೋರಿಸ್ ಬೆರೆಜೋವಿಸ್ಕಿ ಎಂಬಾತನೂ ಇದ್ದ. ಆದರೆ ಈತನಿಗೂ ಅಧಿಕಾರದಲ್ಲಿದ್ದ ಪುಟಿನ್‌ನ ಕಿಚನ್ ಕ್ಯಾಬಿನೆಟ್‌ಗೂ ಅದ್ಯಾಕೋ ಸರಿ ಬರಲಿಲ್ಲ. ಆಗ ಬೆರೆಜೋವಿಸ್ಕಿ ವಶದಲ್ಲಿದ್ದ ಹಲವು ಕಂಪನಿಗಳನ್ನು ಪುಟಿನ್‌ಗೆ ಬೇಕಾದವರಿಗೆ ನೀಡಬೇಕೆಂದು ಒತ್ತಡ ತರಲಾಯಿತು. ಅದಕ್ಕೆ ಆತ ಒಪ್ಪದಿದ್ದಾಗ ಆತನನ್ನು ಮುಗಿಸಲೆಂದು ಕೆಜಿಬಿಯಲ್ಲಿ ಅಧಿಕಾರಿಯಾಗಿದ್ದ ಮೊನ್ನೆ ತೀರಿಕೊಂಡ ಲಿಟ್ವಿನೆಂಕೊಗೆ ಆದೇಶ ನೀಡಲಾಗಿತ್ತು, ಕುಬೇರರನ್ನು ಮತ್ತು ಮಾಫಿಯಾದವರನ್ನು ಕಂಡಿದ್ದ ಲಿಟ್ವಿನೊಂಕೊಗೆ ಸರ್ಕಾರದ ಈ 'ಸುಪಾರಿ' ಕಂಡು ಅಚ್ಚರಿ ಆಯಿತು. ಆಗ ಆತ ಸಿಡಿದೆದ್ದ. ಬೆರೆ ಜೊವಿಸ್ಕಿಯವರ ಕೊಲೆ ಸಂಚಿನ ಹಿಂದೆ ಪುಟಿನ್‌ರವರ ಆಪ್ತರ ಕೈವಾಡವಿದೆ ಎಂದು ಸಾರ್ವಜನಿಕವಾಗಿ ಸಾರಿದ ಲಿಟ್ವಿನೆಂಕೊ ಆ ಮೂಲಕ ಸರ್ಕಾರದ ಭ್ರಷ್ಟತನವನ್ನು ಹೊರಗೆಡವಲು ನೋಡಿದ.

ಆದರೆ ಆತನಿಗೆ ಸಿಕ್ಕಿದ್ದು ಜೈಲು ಶಿಕ್ಷೆ. ಇದರಿಂದ ಲಿಟ್ವಿನೆಂಕೊ ಧೃತಿಗೆಡಲಿಲ್ಲ, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಚೆಚನ್ಯಾದ ಮೇಲೆ ರಷ್ಯಾ ನಡೆಸುತ್ತಿರುವ ದೌರ್ಜನ್ಯಗಳ ಬಗ್ಗೆ ಮಾತನಾಡಲಾರಂಭಿಸಿದ. ಚೆಚನ್ಯಾದ ಸ್ವಾತಂತ್ರ್ಯ ಸಂಗ್ರಾಮವನ್ನು ಹತ್ತಿಕ್ಕಲು ಯಾವುದೇ ನೆಪ ಸಿಗದಿದ್ದಾಗ ಹೇಗೆ ಕೆಜಿಬಿ ರಷ್ಯನ್ನರನ್ನೇ ಕೊಂದು ಅದನ್ನು ಚೆಚನ್ಯಾದ ಹೋರಾಟಗಾರ ಮೇಲೆ ಆರೋಪಿಸಿತ್ತು ಎಂದು ಹೇಳಿದ. ಇದೆಲ್ಲಾ ತಲೆಕೆಟ್ಟವನೊಬ್ಬನ ಮಾತಾಗಿರಲಿಲ್ಲ, ಏಕೆಂದರೆ ಲಿಟ್ವಿನೆಂಕೊ ಮಾಡಿದ್ದ ಆರೋಪವನ್ನು ತನಿಖೆ ಮಾಡುತ್ತಿದ್ದ ಪತ್ರಕರ್ತನೊಬ್ಬ ವಿಮಾನ ಅಪಘಾತದಲ್ಲಿ ಸತ್ತ. ಆನಂತರ ಅದೇ ಜಾಡನ್ನು ಹಿಡಿದು ವಿಚಾರಣೆ ನಡೆಸುತ್ತಿದ್ದ ಸಮಿತಿಯ ಉಪಾಧ್ಯಕ್ಷ ಕೂಡ ನಿಗೂಢವಾಗಿ ಕೊಲೆ ಆದ. ಸ್ವತಃ ಲಿಟ್ವಿನೆಂಕೊ ಮತ್ತೆ ಜೈಲು ಪಾಲಾದ.


ಪುಟಿನ್

ಇದೆಲ್ಲ ನಡೆಯುತ್ತಿದ್ದಾಗ ರಷ್ಯಾದ ಪರಿಸ್ಥಿತಿ ಹೇಗಿತ್ತೆಂದರೆ, ಅಲ್ಲಿ ಯಾರೂ ಸರ್ಕಾರವನ್ನು, ಸೈನ್ಯವನ್ನು, ಉದ್ಯಮಿಗಳನ್ನು, ಮಾಫಿಯಾಗಳನ್ನು ಪ್ರಶ್ನಿಸುವಂತೆಯೇ ಇರಲಿಲ್ಲ, ಹಾಗೆ ಪ್ರಶ್ನಿಸಿದವರು ಕೊಲೆ ಆಗುವುದು ಗ್ಯಾರಂಟಿಯಾಗಿತ್ತು, ಇಂತಹ ರಾಜಕೀಯ ಪರಿಸ್ಥಿತಿಯಲ್ಲಿ ತನಗೆ ಉಳಿಗಾಲವಿಲ್ಲ ಎಂದು ನಿರ್ಧರಿಸಿದ ಲಿಟ್ವಿನೆಂಕೊ ನಕಲಿ ಪಾಸ್‌ಪೋರ್ಟ್ ಪಡೆದು ಇಂಗ್ಲೆಂಡಿಗೆ ಹಾರಿ ಹೋದ. ಅಲ್ಲಿಂದ ರಷ್ಯಾ ಸರ್ಕಾರದ ಅಕ್ರಮಗಳ ವಿರುದ್ಧದ ಪ್ರಚಾರದಲ್ಲಿ ಜನರನ್ನು ಸಂಘಟಿಸುವುದರಲ್ಲಿ ತೊಡಗಿದ. ಪುಟಿನ್ ಮತ್ತು ಕೆಜಿಬಿಯ ಕರಾಳ ಕೃತ್ಯಗಳ ಬಗ್ಗೆ ಪುಸ್ತಕಗಳನ್ನು ಬರೆದ. ರಷ್ಯಾದಲ್ಲೇ ಇದ್ದು ಜೀವ ಬೆದರಿಕೆ ಎದುರಿಸುತ್ತಿರುವವರನ್ನು ಎಚ್ಚರಿಸಲು ಪ್ರಯತ್ನಿಸುತ್ತಿದ್ದ.

ಅಂತಹವರಲ್ಲಿ ಅನ್ನಾ ಪೊಲಿಟ್ಕೊವ್‌ಸ್ಕಾಯ ಒಬ್ಬಳು. ಈಕೆ ಎಂಥ ದಿಟ್ಟ ಪತ್ರಕರ್ತೆ ಎಂದರೆ ಚೆಚನ್ಯಾದ ಸಮುದಾಯದ ಮೇಲೆ ರಷ್ಯಾದ ಸೈನ್ಯ ನಡೆಸುತ್ತಿರುವ ಅಮಾನುಷ ದೌರ್ಜನ್ಯವನ್ನು ಖಂಡಿಸುತ್ತಾ ಬಂದಳು. ಮಾಸ್ಕೊ ನಗರದಲ್ಲಿನ ಚಿತ್ರಮಂದಿರ ಒಂದರ ಮೇಲೆ ಚೆಚನ್ಯಾದ ಹೋರಾಟಗಾರರು ಮುತ್ತಿಗೆ ಹಾಕಿ ಸ್ವಾತಂತ್ರ್ಯ ಕೊಡಬೇಕೆಂದಾಗ, ಪುಟಿನ್‌ರವರ ಸೈನಿಕರು ಆ ಚಿತ್ರಮಂದಿರದ ಮೇಲೆ ದಾಳಿ ಮಾಡಿ 49 ಹೋರಾಟಗಾರರನ್ನು, 130 ಜನ ಸಾಮಾನ್ಯರನ್ನು ಕೊಂದು ಹಾಕಿದ್ದ ಘಟನೆ ನಿಮಗೆ ನೆನಪಿರಬಹುದು. ಆ ಪ್ರಕರಣ ಹಿಂದೆ ಇದ್ದ ಶಕ್ತಿಗಳು ಯಾವುದೆಂದೂ, ಸೈನ್ಯ ನಡೆಸಿದ ದಾಳಿಯ ಅಕ್ರಮವನ್ನು ತನಿಖೆಗೆ ಒಳಪಡಿಸಬೇಕು ಎಂದೂ ಪೊಲಿಟ್ಕೊವ್‌ಸ್ಕಾಯ ಒತ್ತಾಯ ಮಾಡಿದ್ದಳು. ಮಾನವ ಹಕ್ಕುಗಳನ್ನು ಎತ್ತಿ ಹಿಡಿದಿದ್ದಕ್ಕೆ, ವಾಕ್ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದಿದ್ದಕ್ಕೆ ಪೊಲಿಟ್ಕೊವ್‌ಸ್ಕಾಯ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಳು; ಪತ್ರಿಕಾ ಧರ್ಮಕ್ಕೆ ಸಂಕೇತವಾಗಿದ್ದಳು.


ಅನ್ನಾ

ಆದರೆ ರಷ್ಯಾದಲ್ಲಿ ಈಗಾಗಲೇ ಇಪ್ಪತ್ತಕ್ಕೂ ಹೆಚ್ಚು ಪತ್ರಕರ್ತರು ಕೊಲೆ ಆಗಿವೆಯಲ್ಲದೆ ಈಕೆಗೂ ಜೀವ ಬೆದರಿಕೆ ಇತ್ತು, ಇದೇ ಅಕ್ಟೋಬರ್ ತಿಂಗಳಲ್ಲಿ ಪೊಲಿಟ್ಕೊವ್‌ಸ್ಕಾಯಳನ್ನು ಮಾಸ್ಕೋದಲ್ಲಿನ ಆಕೆಯ ಮನೆಯ ಮುಂದೆಯೇ ಬರ್ಬರವಾಗಿ ಕೊಂದು ಹಾಕಲಾಯಿತು. ಆಕೆಯನ್ನು ಕೊಂದವರು ಯಾರು? ಈ ಪ್ರಶ್ನೆಗೆ ಉತ್ತರ ಸಿಗುವುದು ಅಸಾಧ್ಯ, ಯಾಕೆಂದರೆ ಅದನ್ನ ತನಿಖೆ ಮಾಡುವ ಗೋಜಿಗೇ ಅಲ್ಲಿನ ಪೊಲೀಸರು ಇನ್ನೂ ಕೈಹಾಕಿಲ್ಲ.

ಈಗ ಲಿಟ್ವಿನೆಂಕೊಗೂ ಅದೇ ಆಗಿದೆ. ಆದರೆ

ಕಂಡಹಾಗೆ



ರಷ್ಯಾದಲ್ಲಿದ್ದ ಪೊಲಿಟ್ಕೊವ್‌ಸ್ಕಾಯಳನ್ನು ಗುಂಡಿಕ್ಕಿ ಕೊಂದಿದ್ದರೆ, ಲಂಡನ್‌ನಲ್ಲಿದ್ದ ಲಿಟ್ವಿನೆಂಕೊನನ್ನು ಕೊಲ್ಲಲು ದೊಡ್ಡ ಷಡ್ಯಂತ್ರವನ್ನೇ ರೂಪಿಸಲಾಗಿತ್ತು, ಅದು ಎಷ್ಟು ದೊಡ್ಡ ಸಂಚೆಂದು ಲಿಟ್ವಿನೆಂಕೊ ಸತ್ತ ನಾಲ್ಕು ವಾರಗಳ ನಂತರ ನಿಧಾನವಾಗಿ ತೆರೆದುಕೊಳ್ಳಲಾರಂಭಿಸಿದೆ.

ಅವತ್ತು ನವೆಂಬರ್ ಒಂದನೇ ತಾರೀಖು. ಪೊಲಿಟ್ಕೊವ್‌ಸ್ಕಾಯಳ ಕೊಲೆಯ ಬಗ್ಗೆ ಮಾಹಿತಿ ನೀಡುತ್ತೇನೆಂದ ಒಬ್ಬರನ್ನು ಲಿಟ್ವಿನೆಂಕೊ ಭೇಟಿ ಆದರು. ಆನಂತರ ರಷ್ಯಾದ ಉದ್ಯಮಿ ಮತ್ತು ಕೆಜಿಬಿಯ ಏಜೆಂಟ್ ಒಬ್ಬನನ್ನು ಭೇಟಿ ಆದರು. ಅವತ್ತು ಮನೆಗೆ ಹಿಂದಿರುಗಿದ ನಂತರ ಲಿಟ್ವಿನೆಂಕೊ ತೀವ್ರವಾಗಿ ಅಸ್ವಸ್ಥರಾದರು. ಕೂಡಲೇ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಸಾವಿನ ದವಡೆಯಲ್ಲಿದ್ದ ಲಿಟ್ವಿನೆಂಕೊ ತನ್ನ ಈ ಸ್ಥಿತಿಗೆ ರಷ್ಯಾ ಸರ್ಕಾರ ಮತ್ತು ಪುಟಿನ್‌ರವರೇ ಕಾರಣ ಎಂದು ಹೇಳಿದ. ಮೂರು ವಾರಗಳ ಕಾಲ ಸಾವಿನೊಂದಿಗೆ ಸೆಣಸಾಡಿದ ಲಿಟ್ವಿನೆಂಕೊ ಕೊನೆಗೂ ಸೋತರು. ಆದರೆ ಸಾಯುವ ಮುನ್ನ ಚೆಚನ್ಯಾದ ಸ್ವಾತಂತ್ರ್ಯ ಸಂಗ್ರಾಮದೊಂದಿಗೆ ತನ್ನ ಬೆಂಬಲವನ್ನು ಸೂಚಿಸಲು ಇಸ್ಲಾಮ್ ಧರ್ಮಕ್ಕೆ ಮತಾಂತರಗೊಂಡರು.

ಲಿಟ್ವಿನೆಂಕೊರವರ ಅನಾರೋಗ್ಯಕ್ಕೆ ಕಾರಣ ಏನು ಎಂದು ಗೊತ್ತಾಗಿದ್ದೇ ಅವರು ಸತ್ತ ನಂತರ. ಮರಣೋತ್ತರ ಪರೀಕ್ಷೆಯಲ್ಲಿ ಗೊತ್ತಾಗಿರುವುದೇನೆಂದರೆ ಅವರಿಗೆ ಪೊಲೋನಿಯಂ 210 ಎಂಬ ಅಣುಸ್ಥಾವರದಲ್ಲಿ ಸಿಗುವ ವಿಷವನ್ನು ನೀಡಲಾಗಿತ್ತು ಎಂಬುದು. ಈ ವಿಷ ಅಪರೂಪ ಮಾತ್ರವಲ್ಲ, ಇದು ಸಾಮಾನ್ಯರಿಗೆ ಸಿಗುವುದು ಅಸಾಧ್ಯ. ಅಷ್ಟೇ ಅಲ್ಲ, ಲಿಟ್ವಿನೆಂಕೊರವರ ದೇಹದಲ್ಲಿದ್ದ ಪೊಲೋನಿಯಂ ಬಂದದ್ದು ರಷ್ಯಾದ ಅಣುಸ್ಥಾವರದಿಂದ ಎಂದೂ, ಅದನ್ನು ತಂದಿದ್ದು ಅವರನ್ನು ಭೇಟಿಯಾದ ಕೆ.ಜಿ.ಬಿ ಏಜಂಟ್ ಎಂದೂ ಈಗ ಸಾಬೀತಾಗಿದೆ. ಪೊಲೊನಿಯಂನ ಕುರುಹುಗಳು ಆತ ಮಾಸ್ಕೊದಿಂದ ಲಂಡನ್ನಿಗೆ ಬಂದ ವಿಮಾನದಲ್ಲೂ ಪತ್ತೆಯಾಗಿದೆ ಅಲ್ಲದೆ, ಸ್ವತಃ ಆತನೇ ಅದರ ರೇಡಿಯೇಷನ್‌ಗೆ ಈಡಾಗಿ ಆಸ್ಪತ್ರೆ ಸೇರಿದ್ದಾನೆ.

ಅಂದಹಾಗೆ, ಅಪರೂಪವಾದ, ಸುಲಭವಾಗಿ ಪಡೆಯಲಾಗದಂತಹ ಪೊಲೊನಿಯಂ ಎಂಬ ವಿಷ ಕೆ.ಜಿ.ಬಿ. ಏಜೆಂಟನಿಗೆ ಅಣು ಸ್ಥಾವರವೊಂದರಿಂದ ಲಭಿಸುತ್ತದೆ ಎಂದರೆ ಆತನಿಗೆ ರಷ್ಯಾ ಸರ್ಕಾರದಲ್ಲಿ ಹಿರಿಯ ಸ್ಥಾನದಲ್ಲಿರುವವರ ನೆರವಿತ್ತು ಎಂದೇ ಅರ್ಥವಲ್ಲವೇ?

ಪುಟಿನ್‌ರವರು ಮಾಸ್ಕೋ ಚಿತ್ರಮಂದಿರದ ಮೇಲೆ ನಡೆದ ದಾಳಿಯ ನಂತರ "ನಮ್ಮ ದ್ರೋಹಿಗಳು ಎಲ್ಲೇ ಇದ್ದರೂ ಅವರನ್ನು ಮುಗಿಸುತ್ತೇನೆ. ಆತ ಕಕ್ಕಸು ಮನೆಯಲ್ಲಿ ಅಡಗಿದ್ದರೂ ಸಹ ಆ ಕಕ್ಕಸು ಮನೆಯಲ್ಲೇ ಅವನನ್ನು ಕೊಂದು ಹಾಕುತ್ತೇವೆ" ಎಂದಿದ್ದರು. ಅವರ ಇಂತಹ ಸೇಡಿಗೆ ಇವತ್ತು ಲಿಟ್ವಿನೆಂಕೊ ಕೂಡ ಬಲಿಯಾಗಿದ್ದಾನೆ ಎಂದು ತರ್ಕಿಸಲಾಗಿದೆ.

ಹಣ ಹೊಂದಿರುವವರು, ಪಾಳೇಗಾರಿಕೆ ಪ್ರವೃತ್ತಿಯವರು, ಉದ್ಯಮಪತಿಗಳ ಗೆಳೆಯರು, ಮಾಫಿಯಾಗಳನ್ನು ಪ್ರೋತ್ಸಾಹಿಸುವವರು, ಪ್ರಜಾಪ್ರಭುತ್ವ ಎಂದರೆ ತಮ್ಮ ಸ್ವಾರ್ಥ ಸಾಧನೆ ಎಂದು ನಂಬಿರುವವರು... ಇವರೆಲ್ಲ ಸೇರಿ ಇವತ್ತು ರಷ್ಯಾದಲ್ಲಿ ಅಧಿಕಾರ ಹಿಡಿದಿರುವುದರಿಂದ ಪೊಲಿಟ್ಕೊವ್‌ಸ್ಕಾಯ ಎಂಬ ಪತ್ರಕರ್ತೆ ಗುಂಡುಗಳಿಗೆ ಬಲಿಯಾಗುತ್ತಾಳೆ, ಲಿಟ್ವಿನೆಂಕೊ ಎಂಬ ಬಂಡಾಯಗಾರ ಪೊಲೊನಿಯಂ ಎಂಬ ವಿಷಕ್ಕೆ ಸಾಯುತ್ತಾನೆ. ಪುಟಿನ್ ಮತ್ತಾತನ ಸಂಗಡಿಗರು ಅಧಿಕಾರದಲ್ಲಿ ಮುಂದುವರೆಯುತ್ತಾರೆ.

ನಾಳೆ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಎಂಬ ನೀತಿಗಳಿಂದಾಗಿ ಇಲ್ಲೂ ಇದೆಲ್ಲ ಪುನರಾವರ್ತನೆ ಆದರೆ ಏನೂ ಅಚ್ಚರಿ ಇಲ್ಲ.

-ಗೌರಿ ಲಂಕೇಶ್

ಗಣ್ಯರು ಮಾಡುವ ಕೊಲೆಗಳು

ಇನ್‌ಫೋಸಿಸ್ ಎಂಬ ಸಾಫ್ಟ್‌ವೇರ್ ಕಂಪನಿಯ ಸ್ಟಾಕ್ ಬೆಲೆ ಕನಿಷ್ಠ ಐದು ಪಾಯಿಂಟ್ ಹೆಚ್ಚಾದರೂ ಅದನ್ನು ಕೊಂಡಾಡುವ ನಮ್ಮ ಮಾಧ್ಯಮದವರು ಅದೇ ಇನ್‌ಫೋಸಿಸ್ ಕಂಪನಿ ನಿರ್ಮಿಸುತ್ತಿರುವ ಹೊಸ ಕಟ್ಟಡದಲ್ಲಿ ಐವರು ಕೂಲಿ ಕಾರ್ಮಿಕರು ಸತ್ತರೆ, ಐದು ಸಾಲುಗಳ ವರದಿ ಮಾಡಿ ತೆಪ್ಪಗಾಗಿವೆ.

ಇದೇ ಡಿಸೆಂಬರ್ 13 ನೇ ತಾರೀಖು ಇನ್‌ಫೋಸಿಸ್ ಎಂಬ 'ಅಮರಾವತಿ'ಯಲ್ಲಿ ಸೆಂಟ್ರಿಂಗ್ ಕುಸಿದು ಐದು ಜನ ಸತ್ತರು. ಮೂರು ಜನ ಈಗಲೂ ICUನಲ್ಲಿದ್ದಾರೆ. ಅವರಲ್ಲಿ ಒಬ್ಬರಿಗೆ ತುರ್ತಾಗಿ ಸ್ಪೈನಲ್ ಕಾರ್ಡ್ ಆಪರೇಷನ್ ಆಗಬೇಕಿದೆ.

ಅದೊಂದು ಅಪಘಾತ ನಿಜ. ಆದರೆ ಇಂತಹ ಅಪಘಾತಗಳು ಸಂಭವಿಸುವುದು ಕ್ರಿಮಿನಲ್ ನೆಗ್ಲಿಜೆನ್ಸ್‌ನಿಂದ ಎಂಬುದೂ ಅಷ್ಟೇ ನಿಜ. ಆದರೆ ನಮ್ಮ ವ್ಯವಸ್ಥೆಯಲ್ಲಿ ಕುಬೇರರನ್ನು ಎಂದೂ ಕ್ರಿಮಿನಲ್‌ಗಳೆಂದು ಪರಿಗಣಿಸುವುದಿಲ್ಲ, ಅದರಲ್ಲೂ ಸರ್ಕಾರದಿಂದ ಸೌಲಭ್ಯಗಳನ್ನು ಪಡೆಯುತ್ತಾ ಸರ್ಕಾರವನ್ನೇ ಬ್ಲಾಕ್‌ಮೇಲ್ ಮಾಡುವ ಇನ್‌ಫೋಸಿಸ್ ಧಣಿಗಳು ಈ ವ್ಯವಸ್ಥೆಯಲ್ಲಿ ಹೇಗೆ ಕ್ರಿಮಿನಲ್‌ಗಳಾಗುತ್ತಾರೆ?!

ಈ ಅಪಘಾತದಲ್ಲಿ ಐದು ಜನ ಸತ್ತರೂ ಇನ್‌ಫೋಸಿಸ್ ಧಣಿಗಳ ಪ್ರತಿಕ್ರಿಯೆ ಹೇಗಿತ್ತು? "ಇದು ಶೋಭಾ ಡೆವಲಪರ್ಸ್‌ನ ಜವಾಬ್ದಾರಿ, ನಮ್ಮದಲ್ಲ" ಎಂದು ನಂದನ್ ನಿಲೇಕಣಿ ಕೈ ತೊಳೆದುಕೊಂಡರೆ, "ರಾಷ್ಟ್ರಪತಿ" ಆಗುವ ಕನಸಿನಲ್ಲಿರುವ; ಬೆಂಗಳೂರಿನ ರಸ್ತೆಗಳ ಬಗ್ಗೆ ಸದಾ ಕಿಡಿಕಾರುವ ನಾರಾಯಣಮೂರ್ತಿ ತನ್ನ ಮೌನದಿಂದಲೇ ತಾನೆಂತಹ 'ನರಭಕ್ಷಕ' ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾನೆ. ಶೋಭಾ ಡೆವಲಪರ್ಸ್‌ನವರೂ ಸತ್ತವರಿಗೆ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು, ಈವರೆಗೆ ಆಸ್ಪತ್ರೆಯಲ್ಲಿರುವವರತ್ತ ತಿರುಗಿಯೂ ನೋಡಿಲ್ಲ.

ಇದೆಲ್ಲಕ್ಕಿಂತ ಹೆಚ್ಚಾಗಿ, ಅಪಘಾತ ಸಂಭವಿಸಿದ ಮೇಲೆ ಆ ಪ್ರದೇಶವನ್ನು 'ಹೈ ಸೀಕ್ರೇಟ್ ಝೋನ್' ಮಾಡಿ, ಮಾಧ್ಯಮದವರಿಗೂ ಪ್ರವೇಶ ನಿರಾಕರಿಸಲಾಗುತ್ತಿದೆ. ಅಪಘಾತ ಸಂಭವಿಸಿದ್ದು ಹೇಗೆ? ಅದಕ್ಕೆ ಯಾರು ಹೊಣೆ? ಎಂಬ ಪ್ರಶ್ನೆಗಳಿಗಂತೂ ಇನ್‌ಫೋಸಿಸ್ ಇರಲಿ, ಸರ್ಕಾರದಿಂದಲ್ಲೂ ಉತ್ತರಗಳಿಲ್ಲ.

ಯಾಕೆ ಗೊತ್ತಾ? ಇನ್‌ಫೋಸಿಸ್ ಧಣಿಗಳಿಗೂ ಈ ರಾಜ್ಯದ ನಾಯಕರಿಗೂ ಅಷ್ಟೇನೂ ವ್ಯತ್ಯಾಸವಿಲ್ಲ. ಅಪಘಾತದಲ್ಲಿ ಸತ್ತ ಐವರ ಕುಟುಂಬಗಳಿಗೆ ಹಣ ಹಂಚಿದರೆ ಸಾಕು, ತಮ್ಮ ಜವಾಬ್ದಾರಿ ಮುಗಿದಂತೆ ಎಂದು ಇವರೆಲ್ಲ ಭಾವಿಸುತ್ತಾರೆ.

ಇಲ್ಲೊಂದು ಅಂಶವನ್ನು ಗಮನಿಸಬೇಕು. ಅಪಘಾತದಲ್ಲಿ ಸತ್ತ ಐವರೂ ರಾಯಚೂರಿನ ಜಿಲ್ಲೆಯವರು. (ಪೊಲೀಸರಿಂದ ಹತರಾದ ನಕ್ಸಲ್ ಹಾಜಿಮಾ ಮತ್ತು ಶಿವಲಿಂಗು ಕೂಡಾ ಇದೇ ಜಿಲ್ಲೆಯವರು ಎಂಬುದನ್ನು ಗಮನಿಸಿ.) ನಮ್ಮ ರಾಜಕಾರಣಿಗಳ ನೀತಿಯಿಂದಾಗಿ ಕೃಷಿ ಆಧರಿಸಿ ಜೀವನ ಸಾಗಿಸಲಾಗದೇ ಈ ನತದೃಷ್ಟ ರೈತರು ಬೆಂಗಳೂರಿನಲ್ಲಿ ಕೂಲಿ ಅರಸುತ್ತಾ ವಲಸೆ ಬಂದವರು. ಅಂದರೆ ಇವರರ್ಥ ಇಷ್ಟೇ. ಮೊದಲಿಗೆ ನಮ್ಮ ವ್ಯವಸ್ಥೆ ಅವರ ಬದುಕನ್ನು ನಾಶ ಮಾಡಿತ್ತು, ಈಗ ಇನ್‌ಫೋಸಿಸ್ ಎಂಬ ಹೈಟೆಕ್ ಧಣಿಗಳ 'ಅಮರಾವತಿ' ಅವರ ಜೀವನವನ್ನೇ ಕಿತ್ತುಕೊಂಡಿದೆ.

ಇದು ನಿಜವಾಗಲೂ ನಾರಾಯಣಮೂರ್ತಿ ಮತ್ತವರ ಪ್ರತಿರೂಪ ಕುಮಾರಸ್ವಾಮಿಯವರ ಸುವರ್ಣ ಕರ್ನಾಟಕ ಮತ್ತು ಗ್ರೇಟ್ ಬೆಂಗಳೂರು!

-ಜಿ.ಎಲ್

ಕಿರು ಕತೆಗಳಿಗೆ ಸ್ವಾಗತ

ನಿಮ್ಮಲ್ಲಿ ಕಿರುಗತೆಯೊಂದು ಮೊಳಕೆ ಒಡೆದು ಹೊರಬರಲು ಹಾತೊರೆಯುತ್ತಿದೆಯೇ? ಯಾವುದೋ ಒಂದು ಘಟನೆ ನಿಮ್ಮ ಮನದಲ್ಲಿ ಗುಂಯ್‌ಗುಟ್ಟುತ್ತಿದೆಯೇ? ಯಾಕೆ ಈ ಪ್ರಶ್ನೆ ಎಂದರೆ ನಮ್ಮೆಲ್ಲರಲ್ಲೂ ಬರಹಗಾರನೊಬ್ಬ ಅಡಗಿರುತ್ತಾನೆ. (ಅಥವಾ ಬರಹಗಾರ್ತಿಯೊಬ್ಬಳು ಅಡಗಿರುತ್ತಾಳೆ!) ಆ ಬರಹಗಾರನ ಅದಮ್ಯ ಚಿಂತನೆ, ಸೃಜನಶೀಲತೆ ನಮ್ಮ ಅಂತರಾಳದಲ್ಲಿ ಕತೆಗಳನ್ನು ಹೊಸೆಯುತ್ತಲೇ ಇರುತ್ತವೆ. ಆದರೆ ಕೆಲವೇ ಕೆಲವರು ಮಾತ್ರ ಆ ಅಂತರಾಳದ ಆಶೆಗೆ ಬಗೊಟ್ಟು, ತಮ್ಮಲ್ಲಿನ ಕತೆಯನ್ನು ಕಾಗದದ ಮೇಲೆ ಸರಿ ಹಿಡಿಯುತ್ತಾರೆ. ಆದರೆ ಅದೆಷ್ಟೋ ಜನ, ಕತೆಯನ್ನು ತಮ್ಮಲ್ಲೇ ಹುದುಗಿಟ್ಟುಕೊಂಡು ಸುಮ್ಮನಿರುತ್ತಾರೆ.

ಈಗ ಇಂಥವರಿಗೆಲ್ಲ ಇಲ್ಲೊಂದು ಆಹ್ವಾನವಿದೆ. ನೀವು ನಿಮ್ಮಲ್ಲಿರುವ ಕಿರುಕತೆಗೆ ಜೀವಕೊಟ್ಟು ನಮಗೆ ಕಳುಹಿಸಿರಿ. ಅವುಗಳಲ್ಲಿ ಉತ್ತಮವಾದದ್ದನ್ನು ನಾವು ಪ್ರಕಟಿಸುತ್ತೇವೆ. ನಿಮ್ಮ ಕತೆ ನಾನೂರು ಪದಗಳಿಗೆ ಸೀಮಿತವಾಗಿರಲಿ.

ಅದು ಹೊಸ ಕತೆ ಆಗಿದ್ದು ಅಚ್ಚುಕಟ್ಟಾಗಿ ಬರೆದಿರಬೇಕು. ಜೆರಾಕ್ಸ್ ಕಾಪಿಗಳನ್ನು ಪರಿಗಣಿಸಲಾಗುವುದಿಲ್ಲ, ಕಿರುಗತೆಗಳನ್ನು ಇ-ಮೇಲ್ ಮಾಡಲು ಇಚ್ಛಿಸುವವರು ಅದನ್ನು 'ಬರಹ' ಸಾಫ್ಟ್‌ವೇರ್‌ನಲ್ಲಿ ಕಳುಹಿಸಬೇಕು.


'ಲಂಕೇಶ್' ವಾರ ಪತ್ರಿಕೆಯು ಹೊಸ ಬರಹಗಾರರಿಗೆ ವೇದಿಕೆ ಆಗುತ್ತಿದೆ. ನವ ಪ್ರತಿಭೆಗಳನ್ನು ಹುಡುಕಿ, ಅವರನ್ನು ಪ್ರೋತ್ಸಾಹಿಸಿ, ಬೆಳೆಸಿದ್ದು ಅಷ್ಟು ಅವರ ಈ ಕಾರ್ಯವನ್ನು ಮುಂದುವರಿಸುತ್ತಿರುವ ಹೆಮ್ಮೆ ನಮಗಿದೆ. ನಮ್ಮ ರಾಜ್ಯದ ಮೂಲೆಮೂಲೆಗಳಲ್ಲಿ ಅಡಗಿರುವ ಬರಹಗಾರರು ನಮ್ಮ ಈ ಆಹ್ವಾನಕ್ಕೆ ಸ್ಪಂದಿಸಿ, ಕ್ರಿಯಾಶೀಲರಾಗಿ, ಕತೆಗಳನ್ನು ಬೇಗನೆ ಕಳುಹಿಸುವಿರಿ ಎಂದು ನಂಬಿರುವೆ.

-ಗೌರಿ

ಅಮರನಾರಾಯಣನ್ನ ಹಿಡ್ಕೋಳ್ಳೋದು ಯಂಗ್ಲಾ... ಮಗಾ!

ಚಿತ್ರದುರ್ಗ ಜಿಲ್ಲಾಧಿಕಾರಿಯ ಹೆಸರು ಅಮರ ನಾರಾಯಣ....! ನೀವು ಪ್ರೀತಿಯಿಂದ ಬೇಕಾದರೆ ಜನಪ್ರಿಯ, ಪ್ರಚಾರಪ್ರಿಯ, ಪರಿಸರ ಪ್ರಿಯ, ಸ್ವಚ್ಛತಾ ಆಂದೋಲನದ ಹರಿಕಾರ, ಅಭಿವೃದ್ಧಿಯ ಹರಿಕಾರ, ದೇವೇಗೌಡರ ಫ್ಯಾಮಿಲಿ ಫ್ರೆಂಡು, ಜೆಡಿಎಸ್ ಡಿಸ್ಟ್ರಿಕ್ಟ್ ಇನ್‌ಛಾರ್ಜ್... ಹೀಗೆ ಯಾವುದೇ ವಿಶೇಷಣದೊಂದಿಗೆ ಅಮರನಾರಾಯಣನ ಹೆಸರನ್ನು ತಳುಕು ಹಾಕಿ ಕರೆಯಬಹುದು. ಏಕೆಂದರೆ ಈ ಎಲ್ಲಾ ವಿಶೇಷಣಗಳಿಗೂ ನ್ಯಾಯ ಸಲ್ಲಿಸುವಂತಹ ಸಕಲಕಲಾವಲ್ಲಭನ್ ಈ ಅಮರನಾರಾಯಣನ್! ಕಳೆದೊಂದೂವರೆ ಎರಡು ವರ್ಷಗಳಿಂದ ಜಿಲ್ಲಾಧಿಕಾರಿಯಾಗಿ ಸೇವೆಗೈಯುತ್ತಿರುವ ಅಮರ ನಾರಾಯಣ ಅಪ್ಪಟ ಮೀಡಿಯಾ ಡಾರ್ಲಿಂಗ್. ಮೂರು ಕಾಸಿನ ಕೆಲಸಕ್ಕೆ ಆರು ಕಾಸಿನ ಪ್ರಚಾರ ಪಡೆಯುವ ಪ್ರವೀಣ.

ಜಿಲ್ಲೆಯ ಅಭಿವೃದ್ಧಿಗಾಗಿ ಅಮರನಾರಾಯಣ ಮಾಡಿದ್ದೆಷ್ಟು? ಹೇಳಿದ್ದೆಷ್ಟು? ಎಂಬಂತಹ ಪ್ರಶ್ನೆಗಳು ಹಾಗೆಯೇ ಉಳಿದಿವೆ. ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಎಲ್ಲಾ ತಾನೇ ಎಂದು ನಿರ್ಧರಿಸಿ ತನಗಿಷ್ಟ ಬಂದಂತೆ ಮುನ್ನುಗ್ಗಿದ್ದೇ ಸಾಧನೆಯಾ? ನಗರಸಭಾಧ್ಯಕ್ಷ ಕಾಂತರಾಜ್ ಆದಿಯಾಗಿ ಶಾಸಕ ತಿಪ್ಪಾರೆಡ್ಡಿ, ಎ.ವಿ. ಉಮಾಪತಿ, ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷ ಬಿ. ಗಂಗಾಧರ್, ಶಾಸಕ ಎಸ್.ವೈ. ಗೋಪಾಲಕೃಷ್ಣ ಸಂಸದ ಎನ್.ವೈ. ಹನುಮಂತಪ್ಪ ಎಲ್ಲರೂ ಈತನ ಕಾರ್ಯಶೈಲಿಯ ಬಗ್ಗೆ ಅಸಮಾಧಾನಗೊಂಡವರೇ.



ಅಮರನಾರಾಯಣನ ನಯವಾದ ಮಾತುಗಾರಿಕೆ, ಸ್ವಚ್ಛತಾ ಆಂದೋಲನಗಳು, ಮಳೆನೀರ ಕೊಯ್ಲು, ಜಟ್ರೋಪ ಕ್ರಾಂತಿ, ಪರಿಸರ ಪಯಣಗಳಂತಾ ಪ್ರಚಾರಕೇಂದ್ರಿತ ಕಾರ್ಯಕ್ರಮಗಳೇ ಮನ್ನಣೆ ಪಡೆದುಕೊಂಡು ಜನಪ್ರತಿನಿಧಿಗಳ ಅಸಮಾಧಾನವೆಂಬುದು ಕಡೆಗಣಿಸಲ್ಪಟ್ಟಿತು. ಅವಕಾಶ ಸಿಕ್ಕಾಗಲೆಲ್ಲಾ ಜಿಲ್ಲಾ ಪಂಚಾಯ್ತಿ ಕೆಡಿಪಿ-ಸಾಮಾನ್ಯ ಸಭೆಗಳಲ್ಲಿ ಅಟಕಾಯಿಸಿಕೊಳ್ಳುವ ಪ್ರಯತ್ನ ಮಾಡಿದರೂ ಪ್ರಯೋಜನವಾಗಲಿಲ್ಲ. ಅಮರನಾರಾಯಣ ನಡೆದದ್ದೇ ದಾರಿ ಎಂಬಂತಾಯಿತು.

ಡಿ.ಸಿ. ಕುಮಾರಣ್ಣನ ಫ್ಯಾಮಿಲಿಗೆ ತುಂಬಾ ಕ್ಲೋಸಂತೆ. ಬಾಲಕೃಷ್ಣೇಗೌಡ ಕ್ಲಾಸ್‌ಮೇಟಂತೆ..... ಹಾಗಾಗಿ ದೀಸಿನಾ ಅಲ್ಲಾಡ್ಸೋಕೆ ಆಗಲ್ವಂತೆ. ಇಲ್ಲಿ ಮೈನಿಂಗು ನಡೀತಿರೋದ್ರಿಂದ ಕುಮಾರ ಸ್ವಾಮೀನೇ ಉದ್ದೇಶಪೂರ್ವಕವಾಗಿ ಇಲ್ಲಿಗೆ ಹಾಕಿದಾರಂತೆ. ಹೀಗೆ ತರಹೇವಾರಿ ಅಂತೆ-ಕಂತೆಗಳೇ ಮೇಲುಗೈ ಪಡೆದವು. ಈ ನಡುವೆ ಡಿಸಿ ವಿರುದ್ಧ ಗುಟುರು ಹಾಕುತ್ತಿದ್ದ ನಗರಸಭಾಧ್ಯಕ್ಷ ಬಿ. ಕಾಂತರಾಜ್, ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಸೈಲೆಂಟಾಗಿದ್ದಾರೆ.

ನಗರಸಭೆಯ ಅಧ್ಯಕ್ಷಗಾದಿಗೇರಲು ಬರೋಬ್ಬರಿ ಹದಿನೈದಿಪ್ಪತ್ತು ಲಕ್ಷ ಸುರಿದಿದ್ದ ಕಾಂತರಾಜ್‌ಗೆ ಹೇಗಾದರೂ ಮಾಡಿ ನೀರುಪೂರೈಕೆ ಸಂಬಂಧ ಜಿಲ್ಲಾಡಳಿತದಿಂದ ಬಾಕಿಯಿದ್ದ 20 ಲಕ್ಷಕ್ಕೂ ಹೆಚ್ಚು ಹಣವನ್ನು ಪಡೆಯುವುದೇ ಆದ್ಯತೆಯಾಗಿ ಅಡ್ಜೆಸ್ಟ್ ಆಗಿಬಿಟ್ಟಿದ್ದಾರೆ. ಜಿಲ್ಲಾಧಿಕಾರಿಗಳ ಪ್ರಭಾವಿವಲಯದಲ್ಲಿ ಗುರುತಿಸಿಕೊಂಡಿರುವ ಶೇಷಣ್ಣ ಕುಮಾರ್ ಮಧ್ಯಸ್ಥಿಕೆಯಲ್ಲೇ ಕಾಂತರಾಜ್ ಹಾಗೂ ತಿಪ್ಪಾರೆಡ್ಡಿಯವರು ಡಿಸಿಯ ಜೊತೆ ಸಂಧಾನ ಕುದುರಿಸಿಕೊಂಡಿದ್ದಾರೆ. ಈ ಸಂಧಾನದಿಂದ ಶೇಷಣ್ಣಕುಮಾರ್‌ಗೇನು ಲಾಭ ಎಂಬುದು ಮಾತ್ರ ಅರ್ಥವಾಗುತ್ತಿಲ್ಲ. ಒಟ್ಟಿನಲ್ಲೀಗ ದೀಸಿನ ಎದುರು ಹಾಕ್ಕೊಳ್ಳೋದಕ್ಕಿಂತ ರಾಜಿ ಮಾಡ್ಕೊಂಡು ಬೆನಿಫಿಟ್ ಪಡೆಯೋದೆ ವಾಸಿ ಎಂಬಂತಹ ವಾತಾವರಣ ನಿರ್ಮಾಣವಾಗಿದೆ. ಈ ಸತ್ಯ ಕೆಲವರಿಗೆ ಅರ್ಥವಾಗಿದೆ. ಮತ್ತೆ ಕೆಲವರಿಗೆ ಅರ್ಥವಾಗಿಲ್ಲ ಅಷ್ಟೇ.

ಇನ್ನೇನು ಡಿ.ಸಿ. ಅಮರನಾರಾಯಣನನ್ನು ಪ್ರಶ್ನಿಸುವವರೇ ಇಲ್ಲ; ಎಲ್ಲಾ ಓ.ಕೆ. ಎನ್ನುವ ಹಂತದಲ್ಲೇ ಅಮರನಾರಾಯಣ್‌ಗೀಗ ಅತ್ಯಂತ ಮುಜುಗರದ ಸಂದರ್ಭ ಎದುರಾಗಿದೆ. ಮೊನ್ನೆ ಕಂದಾಯ ಸಚಿವ ಜಗದೀಶ್ ಶೆಟ್ಟರ್ ಬಂದಾಗ ಕೆಲ ಪತ್ರಕರ್ತರು ಅಮರ ನಾರಾಯಣನ ಅಂದಾದುಂದಿ ಹಾಗೂ ಕಾನೂನು ಬಾಹಿರ ಕಾರ್ಯಶೈಲಿಯ ಬಗ್ಗೆ ಗಮನ ಸೆಳೆದದ್ದು, ಸಚಿವ ಶೆಟ್ಟರ್ ಕಂದಾಯ ಇಲಾಖೆಯಲ್ಲಿ ನಡೆದಿವೆಯೆನ್ನಲಾದ ಅವ್ಯವಹಾರಗಳ ಬಗ್ಗೆ ಇಲಾಖೆಯ ರಾಜ್ಯ ಕಾರ್ಯದರ್ಶಿ ಜಾಮದಾರ್‌ರಿಂದ ತನಿಖೆ ನಡೆಸುವದಾಗಿ ಹೇಳಿದ್ದು ಈ ಮುಜುಗರಕ್ಕೆ ಕಾರಣಗಳು.

ಸಚಿವರು ಬೆಂಗಳೂರಿಗೆ ಹೊರಟ ಬೆನ್ನಲ್ಲೇ ಬೆಂಗಳೂರಿಗೆ ಪ್ರಯಾಣ ಬೆಳೆಸಿದ ಅಮರನಾರಾಯಣ್ ಮತ್ತೆ ಚಿತ್ರದುರ್ಗಕ್ಕೆ ವಾಪಸು ಬಂದು ಪತ್ರಿಕಾಗೋಷ್ಠಿ ಕರೆದು "ನನ್ನಿಂದ ಯಾವುದೇ ಅವ್ಯವಹಾರಗಳು ನಡೆದಿಲ್ಲ, ನನ್ನ ಕಾರ್ಯಶೈಲಿ ಹಾಗೂ ಆಡಳಿತದಲ್ಲಿನ ಸಾಧನೆಗೆ ವಿದೇಶಿ ತಜ್ಞರೆಲ್ಲಾ ಶಹಭಾಸ್‌ಗಿರಿ ಕೊಟ್ಟಿದ್ದಾರೆ. ಜಿಲ್ಲೆಗೆ ಅಭಿವೃದ್ಧಿ ಕೆಲಸಗಳನ್ನು ಹೆಚ್ಚಾಗಿ ಮಾಡಬೇಕೆಂದಿರುವ ನನ್ನ ಮೇಲೆ ಇಂತಹ ಆರೋಪಗಳನ್ನು ಮಾಡಿ ಅಭಿವೃದ್ಧಿಗೆ ತಡೆಯೊಡ್ಡುವ ಪ್ರಯತ್ನ ಮಾಡಬಾರದು" ಎಂದು ಹೇಳಿದ್ದಾನೆ. ಜಾಮದಾರ್ ತನಿಖೆ ಎದುರಿಸಲು ತಾನು ಸಿದ್ಧ ಎಂದು ಥೇಟ್ ರಾಜಕಾರಣಿ ಶೈಲಿಯಲ್ಲೇ ಘೋಷಿಸಿದ್ದಾನೆ. ರಂಗೋಲಿ ಕೆಳಗೆ ತೂರುವ ಕಾರ್ಯಶೈಲಿಯನ್ನೂ ಕರಗತ ಮಾಡಿಕೊಂಡಿರುವ ಅಮರನಾರಾಯಣ್ ಕಣ್ಮುಚ್ಚಿಕೊಂಡು ಹಾಲು ಕುಡಿಯುವ ಬೆಕ್ಕಿನ ಧೋರಣೆ ತಳೆದಿದ್ದಾನೆ.

ಅನುಕಂಪದ ನೌಕರಿ ಗೋಲ್‌ಮಾಲ್

ಮಹಮದ್ ಸಮೀಉಲ್ಲಾ ಎಂಬುವರು ಸೇವೆಯಲ್ಲಿದ್ದಾಗಲೇ ಮೃತಪಟ್ಟಿದ್ದಾರೆಂದು ಅವರ ಮಗಳು ಮೊಹಿಸೀನಾ ಫಾತಿಮಾ ಅನುಕಂಪದ ಆಧಾರದ ಸರ್ಕಾರಿ ನೌಕರಿಗೆ ಅರ್ಜಿಯನ್ನು 1998 ರಲ್ಲೇ ಸಲ್ಲಿಸಿದ್ದರು. ತಹಸೀಲ್ದಾರರು (ನಂ. ಸಿಬ್ಬಂದಿ ಸಿ.ಆರ್.19/99-2000) ದಿ 25.5.2001 ರಂದೇ ಹಿಂಬರಹ ನೀಡಿ 'ಅರ್ಜಿದಾರರಾದ ಫಾತಿಮಾ ಮೊಹಿಸೀನಾ ವಿವಾಹಿತರಾಗಿದ್ದು ಗಂಡನ ಮನೆಯಲ್ಲಿರುವುದರಿಂದ ಹಾಗೂ ಮೃತರ ಪತ್ನಿ ಸರ್ಕಾರಿ ನೌಕರಿಯಲ್ಲಿರುವುದರಿಂದ ಸರ್ಕಾರಿ ಸೇವೆಗೆ ಅರ್ಹರಲ್ಲ" ಎಂದು ಅರ್ಜಿ ವಿಲೇವಾರಿ ಮಾಡಿದ್ದಾರೆ.

ಇದೇ ಅರ್ಜಿದಾರರಾದ ಮೊಹಿಸೀನಾ ಫಾತಿಮಾ ಪುನಃ 15.11.05 ರಂದು ಅನುಕಂಪ ಆಧಾರಿತ ನೌಕರಿ ಬೇಡಿಕೆಯ ಪ್ರಸ್ತಾವನೆ ಮಂಡಿಸಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುತ್ತಾರೆ. ಡಿಸಿ ಅಮನಾರಾಯಣ ಉಪ ವಿಭಾಗಾಧಿಕಾರಿಗಳಿಗೆ ನಿರ್ದೇಶನ ನೀಡಿ ಕಡತಗಳನ್ನು ಪರಿಶೀಲಿಸಿ ವಿವರವಾದ ವರದಿ ನೀಡಲು ಸೂಚಿಸುತ್ತಾರೆ. (ನಂ ಸಿಬ್ಬಂದಿ, ಸಿ.ಆರ್. 312-05-06) ದಿ. 3.2.06 ರಂದು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯುವ ಉಪ ವಿಭಾಗಾಧಿಕಾರಿಗಳು ಕಡತದಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿ ನೋಡಲಾಗಿ ಸದರಿ ಅರ್ಜಿದಾರರು ಸರ್ಕಾರಿ ನೌಕರರಿಗೆ ಅರ್ಹರಲ್ಲವೆಂದು 23.5.01 ರಂದೇ ಹಿಂಬರಹ ನೀಡಿದ್ದು ಪುನಃ ಪ್ರಸ್ತಾವನೆ ಅಗತ್ಯವಿಲ್ಲವೆಂದು ತಿಳಿಸುತ್ತಾರೆ.


ಹನುಮಂತಪ್ಪ

21.3.06 ರಂದು ತಾಲ್ಲೂಕು ಕಚೇರಿ ಎಸ್‌ಡಿಸಿ ಅನ್ನಪೂರ್ಣಮ್ಮ ಎಂಬುವವರಿಗೆ ಶ್ರೀಮತಿ ಮೊಹಿಸೀನಾ ಫಾತಿಮಾ ಇವರ ಹೆಸರನ್ನು ಅವಿವಾಹಿತೆ ಎಂದು ಸುಳ್ಳು ವರದಿ ನೀಡಿ ಅನುಕಂಪದ ನೌಕರಿ ನೀಡಲು ಶಿಫಾರಸ್ಸು ಮಾಡಿದ್ದೀರೆಂದು ಆಕ್ಷೇಪಿಸಿ ಶಿಸ್ತುಕ್ರಮ ಕೈಗೊಳ್ಳಲು ಡಿಸಿ ಅಮರ ನಾರಾಯಣ ಷೋಕಾಸ್ ನೋಟೀಸ್ ಜಾರಿ ಮಾಡುತ್ತಾರೆ. ಮೊಹಿಸೀನಾ ಫಾತಿಮಾ ನಿಯಮಾವಳಿಗಳ ಪ್ರಕಾರ ಅನುಕಂಪದ ನೌಕರರಿಗೆ ಅರ್ಹರಲ್ಲವೆಂದು ನೀಡಿದ ತಹಶೀಲ್ದಾರ್‌ರ ಹಿಂಬರಹ ಹಾಗೂ ಉಪವಿಭಾಗಾಧಿಕಾರಿಗಳ ಪತ್ರ ಗಮನಿಸಿಯೂ, ಜತೆಗೆ ಶ್ರೀಮತಿ ಮೊಹಿಸೀನಾರನ್ನು ಅವಿವಾಹಿತೆ ಎಂದು ಸುಳ್ಳು ವರದಿ ನೀಡಿದ್ದಕ್ಕೆ ಶಿಸ್ತುಕ್ರಮದ ನೋಟೀಸು ನೀಡಿದ್ದ ಅಮರನಾರಾಯಣ್ 19.5.2006 ರಂದು ಆಶ್ಚರ್ಯಕರ ರೀತಿಯಲ್ಲಿ (ನಂ. ಸಿಬ್ಬಂದಿ (2) ಸಿ.ಆರ್.73/2005-06,) ಅಧಿಕೃತ ಜ್ಞಾಪನಾ ಪತ್ರ ಹೊರಡಿಸಿ ಮಹಮದ್ ಸಮೀಉಲ್ಲಾರ ಅವಿವಾಹಿತ ಮಗಳು ಮೊಹಿಸೀನಾ ಫಾತಿಮಾ ಇವರನ್ನು ಗ್ರಾಮ ಲೆಕ್ಕಾಧಿಕಾರಿ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಬೇಕೆಂದು ಆದೇಶ ಹೊರಡಿಸುತ್ತಾರೆ. ವಿಪರ್ಯಾಸವೆಂದರೆ ವಿವಾಹಿತಳಾಗಿರುವ ಇದೇ ಮೊಹಿಸೀನಾ ಫಾತಿಮಾ ಅವಿವಾಹಿತಳೆಂದು ಸುಳ್ಳು ವರದಿಯನ್ನು ನೀಡಿದ್ದ ತಹಶೀಲ್ದಾರ್ ವೈ.ಕಾಳಾಚಾರ್, ರೆವಿನ್ಯೂ ಇನ್ಸ್‌ಪೆಕ್ಟರ್ ಪಿ.ಜೆ. ನಾಸಿರುದ್ದೀನ್ ಮೇಲೆ ಶಿಸ್ತು ಜರುಗಿಸಿರುವುದನ್ನು ಕಾಯ್ದಿರಿಸಿ ಈ ಆದೇಶ ಹೊರಡಿಸಲಾಗಿರುತ್ತದೆ.


ಜಮಾದಾರ್

ತಾಲ್ಲೂಕು ಕಚೇರಿಲಿ ಇದು ಚರ್ಚೆಗೆ ಗ್ರಾಸವಾಗುತ್ತದೆ. ಲಕ್ಷಗಳಿದ್ರೆ ಯಾವ ಕೆಲಸ ಆಗೋಲ್ಲ ಹೇಳಿ? ನಿಯಮಾವಳಿಗಳ ಪ್ರಕಾರ ಆರ್ಡರ್ ಕೊಡೋಕೆ ಬರೋಲ್ಲ. ಆದ್ರೂ ಡೀಸಿ ಆರ್ಡರ್ ಕೊಟ್ಟಿದಾರೆ ಅಂತಾ ಪಿಸುಗುಡಲಾರಂಭಿಸಿದರು. ಇನ್ನೇನು ಎಲ್ಲಾ ಓಕೆ ಅನ್ನುವ ಹೊತ್ತಿಗೆ ಕಳೆದ ತಿಂಗಳು 24.11.06 ರಂದು ಮೊಹಿಸೀನಾ ಫಾತಿಮಾರ ನೇಮಕಾತಿ ಆದೇಶ ರದ್ದುಮಾಡಿ ಆದೇಶ ಹೊರಡಿಸಿದ್ದಾರೆ ಅಮರನಾರಾಯಣ. ಅದು ಈ ಮೊದಲೇ ಜಿಲ್ಲಾಧಿಕಾರಿಗಳೇ ಉಲ್ಲೇಖಿಸಿದ್ದ 3.2.06ರ ಉಪವಿಭಾಗಾಧಿಕಾರಿಗಳ ವರದಿಯನ್ನು ಆಧರಿಸಿ ಎಂಬುದು ದಾಖಲಾರ್ಹ! ಈ ಬಗ್ಗೆ ಪ್ರಾಮಾಣಿಕ ಕಾನೂನುಕ್ರಮ ಅಂತೇನಾದರೂ ಕೈಗೊಂಡಲ್ಲಿ ಐಪಿಸಿ 120 ಬಿ, 409, 468 ಗಳ ಪ್ರಕಾರ ಶಿಕ್ಷಾರ್ಹ ಅಪರಾಧಕ್ಕೆ ಈ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ಅಧಿಕಾರಿಗಳೆಲ್ಲಾ ಗುರಿಯಾಗಬೇಕಾಗುತ್ತದೆ.

ಸಂಸದ ಎನ್.ವೈ. ಹನುಮಂತಪ್ಪನವರ ಒತ್ತಡದ ಫಲವಾಗಿ ಚಿತ್ರದುರ್ಗ ಐತಿಹಾಸಿಕ ಕೋಟೆಯ ಸೌಂದರ್ಯೀಕರಣ ಹಾಗೂ ಮೂಲಭೂತ ಸೌಲಭ್ಯಗಳ ಕಲ್ಪಿಸಲಿಕ್ಕಾಗಿ ಬಿಡುಗಡೆಯಾಗಿದ್ದ 50 ಲಕ್ಷ ರೂ.ಗಳನ್ನು ಠೇವಣಿಯಾಗಿರಿಸಿ, ನಂತರ ಹಣ ಬಿಡಿಸಿಕೊಂಡು ಅನುದಾನ ಖರ್ಚು ಮಾಡಲು ವಿಧಿಸಲಾಗಿದ್ದ ಷರತ್ತುಗಳನ್ನೆಲ್ಲಾ ಗಾಳಿಗೆ ತೂರಿ, ಚಂದ್ರವಳ್ಳಿಕೆರೆ ಹೂಳೆತ್ತುವ ಕಾರ್ಯಕ್ಕೆ ಚಾಲನೆ ನೀಡಿರುವ ಅಮರನಾರಾಯಣ್ ಸೌಜನ್ಯಕ್ಕಾದರೂ ಸಂಸದರನ್ನು ಕಾಮಗಾರಿಯ ಉದ್ಘಾಟನೆಗೆ ಆಹ್ವಾನಿಸಲಿಲ್ಲ. ಸರಿಸುಮಾರು 40 ಲಕ್ಷ ಹಣ ಕರಗಿದ್ದರೂ ಯಾತಕ್ಕಾಗಿ ಅದು ವೆಚ್ಚವಾಗಿದೆ ಎಂಬುದೇ ತಿಳಿಯುತ್ತಿಲ್ಲ.

ಪುನರ್‌ಪರಿಶೀಲನೆಯ ಈ ಪರಿಯ ಉದ್ದೇಶವೇನು?

ಚಿತ್ರದುರ್ಗ ತಾಲ್ಲೂಕಿನ ಕಡ್ಲೆಗುದ್ದು ಗ್ರಾಮದ ರಿ.ಸಂ.ನಂ. 72 ರಲ್ಲಿನ 89-12 ಎಕರೆ ಜಮೀನಿನ ಗಣಿ ಗುತ್ತಿಗೆ ನೀಡುವ ಬಗ್ಗೆ ಬೆಂಗಳೂರಿನ ಗ ಮತ್ತು ಭೂ ವಿಜ್ಞಾನ ಇಲಾಖೆಯ ಪ್ರಸ್ತಾವನೆ ಕುರಿ ವರದಿ ಸಲ್ಲಿಸಿ ಸದರಿ ಜಮೀನು ಗೋಮಾಳವಾಗಿರುತ್ತ ಗ್ರಾಮದಲ್ಲಿ ಒಟ್ಟು 169-14 ಎಕರೆ ವಿಸ್ತೀ ಗೋಮಾಳವಿದ್ದು 850 ಜಾನುವಾರುಗ ಇರುತ್ತವೆ, ಅರಣ್ಯ ಇಲಾಖೆ ನೀಲಗಿ ಮರ ಬೆಳೆಸಿದೆ, ಗಣಿಗಾರಿಕೆಯಿಂ ಪರಿಸರಕ್ಕೆ ಹಾನಿಯಾಗಲಿದೆ ಎಂ ಗ್ರಾಮಸ್ಥರು ಆರೋಪಿಸಿರುವುದರಿಂ ಗಣಿ ಗುತ್ತಿಗೆ ಕೋರಿರುವ ಅರ್ಜಿಯ ತಿರಸ್ಕರಿಸಲಾಗಿದೆ ಎಂದು ಅಮ ನಾರಾಯಣ ತಿಳಿಸುತ್ತಾರೆ.

ಒಂದು ತಿಂಗಳ ನಂತರ ಶಿ ಶಿರಡಿಸಾಯಿಬಾಬಾ ಮತ್ತು ಮಿನರಲ ಬೆಂಗಳೂರು ಇವರು ಮತ್ತೊಮ್ಮೆ ಗಣಿ-ಭೂವಿಜ್ಞಾನ ಇಲಾಖೆಯ ಮೂಲ ಅದೇ ಸರ್ವೆ ನಂಬರಿನಲ್ಲಿ ಗಣಿ ಗುತ್ತಿ ನೀಡಲು ಪುನರ್‌ಪರಿಶೀಲನೆ ಅರ್ಜಿ ಸಲ್ಲಿಸುತ್ತಾರೆ. ಆಗ ಪೂರ್ತಿ ಪ್ಲೇ ಬದಲಾಯಿಸುವ ಡಿಸಿ ಅಮ ನಾರಾಯಣ 'ಸ್ಥಳ ಪರಿಶೀಲ ಮಾಡಲಾಗಿ ಸ.ನಂ. 72 ರಲ್ಲಿ ಗ ಗುತ್ತಿಗೆ ಕೋರಿರುವುದನ್ನು ಪರಿಗ ಸಲು ಸಾಕಷ್ಟು ಪುರಾವೆಗಳಿ ಅಕ್ಕಪಕ್ಕದಲ್ಲಿ ಗಣಿಗಾರಿಕೆ ನಡೆಯುತ್ತಿ ರಾಷ್ಟ್ರದ ಆದಾಯದ ದೃಷ್ಟಿಯಿಂ ಗಣಿಗಾರಿಕೆ ಉದ್ಯಮವನ್ನು ಪ್ರೋ ಹಿಸಬೇಕು. ಪರಿಸರ ಹಾನಿಯ ಪ ಹಾರ ಕ್ರಮಗಳ ಷರತ್ತು ವಿ ಗಣಿಗುತ್ತಿಗೆ ನೀಡುವ ಬಗ್ಗೆ ಪ್ರಾ ಕಾರದ ಆಕ್ಷೇಪ ಇಲ್ಲ' ಎಂದು ಪ ಬರೆಯುತ್ತಾರೆ. ಅಲ್ಲಿಗೆ 169.14 ಎ ಗೋಮಾಳ, 850 ಜಾನುವಾರುಗ ನೀಲಗಿರಿ ಮರಗಳು, ಪರಿಸರ ಹಾ ಆಗುತ್ತದೆಂದು ಆಕ್ಷೇಪ ವ್ಯಕ್ತಪಡಿಸಿ ಗ್ರಾಮಸ್ಥರು.... ಎಲ್ಲಾ ಮಾಯ! ಹಾವು ಏಣಿ ಆಟ ಯಾಕಪ್ಪಾ ಅಮ ನಾರಾಯಣ ಅಂದ್ರೆ 'ರದ್ದು ಪಡಿಸೋ ಕಾರಣಗಳಿತ್ತು ಮಾಡ್ದೆ' ಅಂತಾನೆ. ಮ ಯಾಕಪ್ಪಾ ಪರ್ಮಿಷನ್ ಕೊಟ್ಟೆ ಅಂ 'ಪುನರ್ ಪರಿಶೀಲನೆಗೆ ಅವಕಾಶ ಇ ಪರ್ಮಿಷನ್ ಕೊಟ್ಟೆ' ಅಂತಾನೆ. ಅಮ ನಾರಾಯಣನ್ನ ಹಿಡ್ಕೊಳ್ಳೋದು ಹ್ಯಾಂಗಾ ಮಗಾ...?

ಅಮಾನತ್ತು ಪ್ರಹಸನ...

ಕೆಲವು ತಿಂಗಳುಗಳ ಕೆಳಗೆ ಚಳ್ಳ ತಹಸೀಲ್ದಾರ್ ಕಚೇರಿಯ ಬಳಿ ಪಿ. ಗೋವಿಂದ ಎಂಬ ರೆವಿನ್ಯೂ ಇನ್ಸಪೆಕ್ಟರ್ ಹಾಗೂ ಇ. ನಾಗರಾ ಎಂಬ ವಿಲೇಜ್ ಅಕೌಂಟೆಂಟ್ ಇಬ್ಬರೂ ಚಪ್ ಚಪ್ಪ ಹೊಡೆದಾಡಿ ಅಮ್ಮನ್... ಅಕ್ಕನ್... ಎಂದೆಲ್ಲಾ ಕೂಗ ಕೊಂಡರು. ಈ ಇಬ್ಬರೂ ಸಾರ್ವಜನಿಕವಾಗಿ ಅನಾಗ ವಾಗಿ ವರ್ತಿಸಿರುವುದರಿಂದ, ಕಾಗದ ಪತ್ರ ವಿಲೇವಾ ಮಾಡದ ಕಾರಣ ಅಮಾನತು ಮಾಡಿ ಆದೇಶ ಹೊರ ಸುತ್ತಾರೆ. ಇದಾದ ಒಂಭತ್ತು ದಿನಗಳ ಬಳಿಕ ನೌಕ ಮನವಿ ಪುರಸ್ಕರಿಸಿ ಇದನ್ನು ರದ್ದು ಮಾಡುತ್ತಾ ಉದ್ದಕ್ಕೂ ಇಂತಹ ಉದಾಹರಣೆಗಳನ್ನು ದಾಖಲಿಸು ಹೋಗ ಬಹುದು. ಈ ಮೂರು ಪ್ರಕರಣಗಳ ಅಮರನಾರಾಯಣ ಅನುಸರಿಸುವ ಕಾರ್ಯಶೈಲಿಯ ಇಂಥಲ್ಲಿ ಏನು ನಡೆಯಬಹುದೆಂಬುದಕ್ಕೆ, ಒಂ ಉದಾಹರಣೆ ಅಷ್ಟೇ.

ಅಧೀನಾಧಿಕಾರಿಗಳ ಗೋಳು

ಅಧೀನಾಧಿಕಾರಿಗಳನ್ನು ಗೋಳು ಹುಯ್ದುಕೊಳ್ಳು ದರಲ್ಲಿ ಅಮರನಾರಾಯಣ ಎತ್ತಿದ ಕೈ. ಹಿಂದೆ ಕೇ ಸ್ಥಾನಿಕ ಸಹಾಯಕರಾಗಿದ್ದ ಎಚ್.ಸಿ. ವಿಜಯಕುಮಾ ಅಮರನಾರಾಯಣನ ಪಟ್ಟುಗಳನ್ನು ತಡೆಯಲಾಗ ತಿಂಗಳುಗಟ್ಟಲೇ ಹಾಸಿಗೆ ಹಿಡಿದಿದ್ದರು. ವಿಜಯ ಕುಮಾರ್ ಒಂದು ತಿಂಗಳ ಕಾಲ ಮೆಡಿಕಲ್ ಲೀ ಹಾಕಿ ಬೆಂಗಳೂರು ಸೇರಿಕೊಂಡಾಗಲೇ ಅದು ಅಮ ನಾರಾಯಣ್ ರೂಪದಲ್ಲಿ ಬೆನ್ನು ಹತ್ತಿರುವ ಕಾಯಿ ಎಂದು ಗೊತ್ತಾದದ್ದು. ಅಂತೂ ವಿಜಯ್‌ಕುಮಾ ವರ್ಗಾವಣೆ ಮಾಡಿಸಿಕೊಂಡು ಶಿವಮೊಗ್ಗದ ಹೊರಟರು. ಮೈನ್ಸ್ ಅಂಡ್ ಜಿಯಾಲಜಿಯ ಡೆಪ್ಯು ಡೈರೆಕ್ಟರ್ ರಾಜು, ಡಿಎಫ್‌ಓ ಮುತ್ತಯ್ಯ ಅಮರನಾ

ಕತ್ತಿ, ಕೋವಿ, ಕಠಾರಿಗಳು ಕೊಂದಿರುವುದಕ್ಕಿಂತಲೂ ಹೆಚ್ಚು ಜನರನ್ನು ಹಣ ಕೊಂದಿದೆ -ಥಾಮಸ್ ಜಫರ್‌ಸನ್

ಯುಗಾನನ್ನು ಕನಸಲ್ಲಿ ಕಂಡರೂ ಬೆಚ್ಚಿಬೀಳುತ್ತಾರಂತೆ. ಗಣಿಗಾರಿಕೆಯಲ್ಲಿ ಸಮೃದ್ಧ ಫಲ ನಿರೀಕ್ಷಿಸಿದ್ದ ಈ ಅಧಿಕಾರಿಗಳಿಗೀಗ ನಿರಾಸೆಯಾಗಿದೆಯಂತೆ.

ಹಾಲಿ ದಿಲ್‌ಖುಷ್ ಆಗಿರುವ ಅಧಿಕಾರಿಗಳೆಂದರೆ ನಿರ್ಮಿತಿ ಕೇಂದ್ರದ ಮೂಡಲಗಿರಿಯಪ್ಪ, ಜಿಲ್ಲಾಧಿಕಾರಿಗಳ ಆಪ್ತ ಸಹಾಯಕ ಟಿ. ಸುರೇಶ್‌ಕುಮಾರ್ ಮಾತ್ರ. ಮೂಡಲಗಿರಿಯಪ್ಪ ಸ್ವಜಾತಿಯವನೆಂಬ ಕಾರಣಕ್ಕೋ ಅಥವಾ ನಿಷ್ಠೆಯಿಂದ ಪರ್ಸೆಂಟೇಜ್ ಸಲ್ಲಿಸುತ್ತಾನೆಂಬ ಕಾರಣಕ್ಕೋ ಏನೋ ಜಿಲ್ಲೆಯಲ್ಲಿ ಇದ್ದಬದ್ದ ಕಾಮಗಾರಿಗಳನ್ನೆಲ್ಲಾ ಮೂಡಲಗಿರಿಯಪ್ಪನ ಮಡಿಲಿಗೆ ಹಾಕುತ್ತಿದ್ದಾನೆ. ತುರುವನೂರಿನಲ್ಲಿ ಉಪತಹಸೀಲ್ದಾರನಾಗಿದ್ದರೂ ಜಿಲ್ಲಾಧಿಕಾರಿಗಳ ಕೃಪಾಕಟಾಕ್ಷದಿಂದ ಆಪ್ತ ಸಹಾಯಕನಾಗಿ ಜಿಲ್ಲಾಧಿಕಾರಿಗಳ ಸಕಲೆಂಟು ವ್ಯವಹಾರಗಳನ್ನು ಯಾವುದೇ ತಂಟೆ ತಕರಾರುಗಳಿಲ್ಲದೇ ನಿಭಾಯಿಸುತ್ತಿದ್ದಾನೆ. ರಾಷ್ಟ್ರೀಯ ಹೆದ್ದಾರಿಗಾಗಿ ವಶಪಡಿಸಿಕೊಳ್ಳಲಾದ ಜಮೀನುಗಳಿಗೆ ಹೆಚ್ಚಿನ ಪರಿಹಾರ ಪಡೆಯಲು ತರಹೇವಾರಿ ಗೋಲ್‌ಮಾಲ್‌ಗಳು ನಡೆಯುತ್ತವೆ. ಈ ಪರಿಹಾರವನ್ನು ಆರ್ಬಿಟ್ರೇಷನ್ ಅವಾರ್ಡ್ ಮೂಲಕವೇ ಮಂಜೂರು ಮಾಡಿಸಿಕೊಡಬೇಕು. ಇಂತಹ ಮಹತ್ವದ ಜವಾಬ್ದಾರಿಯ ಉಸ್ತುವಾರಿ ಸುರೇಶ್‌ಕುಮಾರನದು. ಈ ನಿಷ್ಠೆಯ ಕೆಲಸಕ್ಕೆ ಸುರೇಶ್‌ಕುಮಾರ್‌ಗೆ ಐಯುಡಿಪಿ ಲೇಔಟ್‌ನಲ್ಲಿ 60x40 ನಿವೇಶನವೊಂದನ್ನು 48 ಸಾವಿರ ರೂ.ಗಳ ಬಸಾಕು ಬೆಲೆಗೆ ದಯಪಾಲಿಸಿರುವ ಅಮರನಾರಾಯಣ್ ತಮ್ಮ ಬೆಂಬಲಕ್ಕೆ ನಿಲ್ಲುವ ಭಟ್ಟಂಗಿಗಳಿಗೆ ಭರ್ಜರಿ ಆಫರುಗಳ ನಿರೀಕ್ಷೆ ಹುಟ್ಟಿಸಿದ್ದಾನೆ.

ಚಂದ್ರವಳ್ಳಿ ಕೆರೆಮಣ್ಣು-ಹೊನ್ನು

ಸಂಸದ ಎನ್.ವೈ. ಹನುಮಂತಪ್ಪನವರ ಒತ್ತಡದ ಫಲವಾಗಿ ಚಿತ್ರದುರ್ಗ ಐತಿಹಾಸಿಕ ಕೋಟೆಯ ಸೌಂದರ್ಯೀಕರಣ ಹಾಗೂ ಮೂಲಭೂತ ಸೌಲಭ್ಯಗಳ ಕಲ್ಪಿಸಲಿಕ್ಕಾಗಿ ಬಿಡುಗಡೆಯಾಗಿದ್ದ 50 ಲಕ್ಷ ರೂ.ಗಳನ್ನು ಠೇವಣಿಯಾಗಿರಿಸಿ, ನಂತರ ಹಣ ಬಿಡಿಸಿಕೊಂಡು ಅನುದಾನ ಖರ್ಚು ಮಾಡಲು ವಿಧಿಸಲಾಗಿದ್ದ ಷರತ್ತುಗಳನ್ನೆಲ್ಲಾ ಗಾಳಿಗೆ ತೂರಿ, ಚಂದ್ರವಳ್ಳಿಕೆರೆ ಹೂಳೆತ್ತುವ ಕಾರ್ಯಕ್ಕೆ ಚಾಲನೆ ನೀಡಿರುವ ಅಮರನಾರಾಯಣ್ ಸೌಜನ್ಯಕ್ಕಾದರೂ ಸಂಸದರನ್ನು ಕಾಮಗಾರಿಯ ಉದ್ಘಾಟನೆಗೆ ಆಹ್ವಾನಿಸಲಿಲ್ಲ. ಸರಿಸುಮಾರು 40 ಲಕ್ಷ ಹಣ ಕರಗಿದ್ದರೂ ಯಾತಕ್ಕಾಗಿ ಅದು ವೆಚ್ಚವಾಗಿದೆ ಎಂಬುದೇ ತಿಳಿಯುತ್ತಿಲ್ಲ. ಕೇಂದ್ರ ಸರ್ಕಾರದ ಯಾವುದೇ ಅನುದಾನದಡಿ ಹಮ್ಮಿಕೊಳ್ಳುವ ಕಾಮಗಾರಿಗಳು ಐದು ಲಕ್ಷ ಮೇಲ್ಪಟ್ಟು ಇದ್ದಾಗ ಕರ್ನಾಟಕ ಸರ್ಕಾರದ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಟೆಂಡರು ಕರೆಯಬೇಕೆಂಬ ನಿಬಂಧನೆಯಿದೆ. ಅದನ್ನೂ ಪಾಲಿಸಿಲ್ಲ. ಅಸಲಿಗೆ ಯೋಜನೆಯಲ್ಲಿ ಕೆರೆ ಹೂಳೆತ್ತುವ ಪ್ರಸ್ತಾವವೇ ಇಲ್ಲ. ಕೆರೆ ಹೂಳು ಎತ್ತುವಂತಿದ್ದರೂ ಚಂದ್ರವಳ್ಳಿ ಕೆರೆ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಆ ಇಲಾಖೆಗೆ ವಹಿಸಬಹುದಿತ್ತು. ಇದಕ್ಕೆ ಸಂಬಂಧವೇ ಇಲ್ಲದ ಜಲಾನಯನ ಇಲಾಖೆಗೆ ವಹಿಸುವ ಅಗತ್ಯವೇನಿತ್ತು? ಸಂಸದ ಎನ್.ವೈ. ಹನುಮಂತಪ್ಪ ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಪ್ರವಾಸೋದ್ಯಮ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆನ್ನಲಾಗಿದೆ.

ಭೂಪರಿವರ್ತನೆ-ಕೋಟ್ಯಂತರ ವಂಚನೆಗೆ ದಾರಿ

ಚಿತ್ರದುರ್ಗ ನಗರದ ಸುತ್ತ 4 ಕಿ.ಮೀ. ವ್ಯಾಪ್ತಿಯಲ್ಲಿ ಸರ್ಕಾರಿ ಖರಾಬು ಜಮೀನುಗಳನ್ನು ಭೂಪರಿವರ್ತನೆ ಮಾಡಲು ಅವಕಾಶವಿಲ್ಲದಿದ್ದರೂ ಕೆಂಚನಕಟ್ಟೆ ಹತ್ತಿರ ಹಿಂದೆ ರಾಘವೇಂದ್ರ ಸ್ವಾಮಿ ಮಠಕ್ಕೆ ಸೇರಿದ್ದ 44 ಎಕರೆ ಇನಾಂ ಜಮೀನಿನಲ್ಲಿ 25 ಎಕರೆಯನ್ನು ಭೂಪರಿವರ್ತನೆ ಮಾಡಿಕೊಟ್ಟಿರುವ ಅಮರನಾರಾಯಣ್ ಸರ್ಕಾರಕ್ಕೆ ಕೋಟ್ಯಂತರ ವಂಚನೆಗೆ ದಾರಿ ಮಾಡಿದ್ದಾನೆ. ಕಂಪಲಪ್ಪ ವಗೈರೆಯವರಿಗೆ ಬೆಳೆ ಬೆಳೆಯಲು ಮಾತ್ರ ಕೊಟ್ಟಿದ್ದ ಜಮೀನನ್ನು 96-97 ರಲ್ಲಿ ಹಂಗಾಮಿಯಾಗಿ ಖರೀದಿಸಿದ್ದ ಮಾಲೀಕರು 2004-05 ರಲ್ಲಿ ದುರಸ್ತಿ ಗೊಳಿಸಿ ಸರ್ಕಾರಕ್ಕೆ ವಂಚಿಸಿ, 44 ಎಕರೆಯಲ್ಲಿ 38 ಎಕರೆಯನ್ನು ಸಾಗುವಳಿ ಜಮೀನಾಗಿ ಪರಿವರ್ತಿಸಿರುತ್ತಾರೆ.

ಈ ಜಮೀನನ್ನು ಭೂಪರಿವರ್ತನೆ ಮಾಡದಿರಲು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರೂ ಅದನ್ನು ಕಡೆಗಣಿಸಿ ಭೂಪರಿವರ್ತನೆ ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ಕಂದಾಯ ಇಲಾಖೆ ಕಾರ್ಯದರ್ಶಿ ಜಾಮದಾರ್ ರವರಿಗೆ ಬಸವರಾಜಪ್ಪ ಎಂಬುವರು ದೂರು ನೀಡಿದ್ದಾರೆ. ಜಾಮದಾರ್‌ರವರು ಅಮರನಾರಾಯಣನ ಸರ್ವೀಸು ರೆಕಾರ್ಡುಗಳನ್ನು ಚೆನ್ನಾಗಿ ಬಲ್ಲವರೇ ಆಗಿರುವುದರಿಂದ ನಿಷ್ಪಕ್ಷಪಾತ ತನಿಖೆ ನಡೆಸುವರೆಂಬ ಭರವಸೆಯಿದೆ. ಅಮರನಾರಾಯಣನ ಯಶೋಗಾಥೆಗಳು ಇಲ್ಲಿಗೇ ಮುಗಿಯುವುದಿಲ್ಲ. ಅಭಿವೃದ್ಧಿಯ ಮಾತುಗಳನ್ನಾಡುತ್ತಾ ದುರ್ಗದ ಜನರನ್ನು ಮರುಳು ಮಾಡುವ ಇಂತಹ ಜಿಲ್ಲಾಧಿಕಾರಿ ಯಾಕೆ ಬೇಕು ಎಂಬುದೇ ಯಕ್ಷಪ್ರಶ್ನೆಯಾಗಿದೆ.

–ವರದಿಗಾರ

ತ್ರಿಕೋನ ಪ್ರೇಮದ ಹೊಡೆದಾಟ

ದೀಪಕ್‌ನನ್ನು ಕೊಂದವರ್‍ಯಾರು?

ಹುಬ್ಬಳ್ಳಿ

ದೀಪಕ್ ಪಟ್ಟಣ ಎಂಬ ಹುಡುಗನ ಕೊಲೆಯಾಗಿ ಹೋಗಿದೆ. ಪ್ರೀತಿಗಾಗಿ, ಪ್ರೇಯಸಿಗಾಗಿ ಹೊಡೆದಾಡಿಕೊಂಡು, ಬಡಿದಾಡಿಕೊಂಡು ಜೀವ ಕಳೆದುಕೊಂಡಿದೆ ಈ ಪಿಯುಸಿ ಮೊದಲ ವರ್ಷದ ಹರೆಯದ ಹುಡುಗ. 'ಕರಿ' (ನಿಕ್‌ನೇಮ್) ಎಂಬ ಹುಡುಗಿಯ ಪ್ರೀತಿಗಾಗಿ ದೀಪಕ್ ಮತ್ತು ಅಮಿತ್ ನಡುವೆ ಹುಟ್ಟಿಕೊಂಡ ಜಿದ್ದಾಜಿದ್ದಿ ಉತ್ಕರ್ಷದ ಹಂತ ತಲುಪಿ ದೀಪಕ್ ಇನ್ನಿಲ್ಲವಾಗಿದ್ದಾನೆ. ದೀಪಕ್‌ನದು ಕೊಲೆಯೊ ಅಲ್ಲವೊ ಎಂಬ ಜಂಜಾಟದಲ್ಲಿ ಮುಳುಗಿರುವ ಪೊಲೀಸಪ್ಪಗಳು, ಅದು ಆತ್ಮಹತ್ಯೆ ಎಂದು ಪ್ರಕರಣ ಮುಚ್ಚಲು ಹೊರಟಂತಿದೆ. ದೀಪಕ್‌ನ ಹೆಣ ದೊರೆತಿದ್ದು ರೈಲ್ವೆ ಹಳಿಗಳ ಪಕ್ಕದಲ್ಲಿ. ಟ್ರೇನ್‌ನ ವ್ಹೀಲ್‌ಸ್ಪ್ರಿಂಗ್ ಹಳಿಯಾಚೆಯೂ ದಾಟ ಬರುವುದರಿಂದ, ದೀಪಕ್ ದೇಹದ ಮೇಲೆ ಸ್ಪ್ರಿಂಗ್‌ನಿಂದಾದ ತರಚಿದ ಗಾಯವಾಗಿದೆ. ಆದರೆ ದೇಹದ ಮೇಲೆ 14 ತರಚಿದ ಗಾಯಗಳಾಗಿರುವುದು ಇದು ಕೊಲೆ ಎಂಬುದನ್ನು ಒತ್ತಿ ಹೇಳುತ್ತಿದೆ.


ಡಿಸೆಂಬರ್ 8 ರಂದು ನಡೆದ ಈ ಕೊಲೆಗೂ ಮೊದಲು ದೀಪಕ್, ಅಮಿತ್ ಮಧ್ಯೆ ಮಾರಾಮಾರಿ ನಡೆದಿದ್ದನ್ನು ಹಲವಾರು ವಿದ್ಯಾರ್ಥಿಗಳು ಕಂಡಿದ್ದಾರೆ. ಈ ಹಿಂದೆಯೂ ಇವರಿಬ್ಬರು 'ಕರಿ'ಗಾಗಿ ಕಿತ್ತಾಡಿದ್ದಾರೆ. ಆದರೆ 'ಕರಿ'ಯ ಒಲವು ಯಾರತ್ತ ಇತ್ತು ಎಂಬುದೇ ನಿಗೂಢವಾಗಿದೆ ಅಥವಾ 'ಕರಿ' ಇಬ್ಬರಲ್ಲಿ ಯಾರನ್ನೂ ಪ್ರೀತಿಸುತ್ತಿರಲಿಲ್ಲವೇನೊ?

ಡಿಸೆಂಬರ್ 8ರ ಸಂಜೆ 6 ಗಂಟೆಗೆ ದೀಪಕ್‌ನ ಮೊಬೈಲ್‌ಗೊಂದು ಕರೆ ಬಂದಿದೆ. ಕೂಡಲೇ ತರಾತುರಿಯಲ್ಲಿ ಹೊರಟ ದೀಪಕ್ 'ಫ್ರೆಂಡ್ಸ್ ಮನೆಯಲ್ಲಿ ಓದಲು ಹೋಗುತ್ತಿರುವೆ' ಎಂದು ತಂದೆ ತಾಯಿಗೆ ಹೇಳಿದ್ದಾನೆ. ಓದಲು ಹೋದ ದೀಪಕ್ ರಾತ್ರಿ 7.15 ಕ್ಕೆ ಮನೆಗೆ ಮರಳಿದ್ದಾನೆ. ಮತ್ತೆ ಕರೆ ಬಂದಿದೆ. 7.30 ಕ್ಕೆ ತನ್ನ ಆ್ಯಕ್ಟಿವ್ ಹೊಂಡಾ ಏರಿ ಹೋದವನು ನಾಪತ್ತೆ! ರಾತ್ರಿ 11 ಗಂಟೆಯಾದರೂ ಮನೆಗೆ ಬಾರದ ಮಗನ ಮೊಬೈಲಿಗೆ ಕಾಲ್ ಮಾಡಿ ಮಾಡಿ ನಿರಾಶರಾಗಿದ್ದಾರೆ ಮನೆಯವರೆಲ್ಲ. ಬೆಳಿಗ್ಗೆ ಬರಬಹುದೆಂದು ಸಮಾಧಾನದಿಂದ ಮಲಗಿದ್ದಾರೆ ತಂದೆ ಗಣಪತಸಾ ಪಟ್ಟಣ.

ಎಂದಿನಂತೆ ಬೆಳಿಗ್ಗೆ ವಾಕಿಂಗ್‌ಗೆ ಹೋದ ದೀಪಕ್‌ನ ತಂದೆತಾಯಿಗೆ ಮೂಲೆಯೊಂದರಲ್ಲಿ ಮಗನ ಆ್ಯಕ್ಟಿವ್ ಹೊಂಡಾ ಬಿದ್ದಿರುವುದು ಕಂಡಿದೆ. ಹತ್ತಿರ ಹೋಗಿ ನೋಡಿದರೆ ರೈಲು ಹಳಿಯ ಪಕ್ಕದಲ್ಲಿ ಮೈತುಂಬಾ ಗಾಯಗಳಾಗಿರುವ ದೀಪಕ್‌ನ ರಕ್ತಮಯ ಶವ ದೊರೆತಿದೆ.

ಅವತ್ತು ಮುಂಜಾನೆಯೂ ಫೈಟು....

ದೀಪಕ್ ಕೊಲೆಯಾದ ದಿನ (ಡಿಸೆಂಬರ್ 8) ಮುಂಜಾನೆ 8 ಗಂಟೆಗೆ ಕಾಲೇಜಲ್ಲಿ ಅಮಿತ್ ಮತ್ತು ದೀಪಕ್ 'ಕರಿ'ಯ ವಿಚಾರದಲ್ಲಿ ಹೊಡೆದಾಡಿದ್ದನ್ನು ಹಲವಾರು ಗೆಳೆಯರು ಕಂಡಿದ್ದಾರೆ. ಅವತ್ತು ರಾತ್ರಿ 7.30 ಕ್ಕೆ ಆ್ಯಕ್ಟಿವ್ ಹೊಂಡಾದ ಮೇಲೆ ಮನೆಯಿಂದ ಹೊರಬಿದ್ದನಲ್ಲ ದೀಪಕ್? ಸರಿಯಾಗಿ 8.30 ಗಂಟೆಗೆ ವಿದ್ಯಾನಗರದ ಸಿಲ್ಲಿ ಪಾಯಿಂಟ್ ಬಳಿ ದೀಪಕ್, ಅಮಿತ್ ಮಧ್ಯೆ ಮತ್ತೊಂದು ಸುತ್ತಿನ ಹೊಡೆದಾಟವಾಗಿದೆ. ಸಂಜೆ 6 ಗಂಟೆಗೆ ಮನೆಗೆ ಓದಲು ಹೋಗುತ್ತೇನೆಂದು ಹೊರಬಿದ್ದಿದ್ದ ದೀಪಕ್ 7.15 ಕ್ಕೆ ಮತ್ತೆ ಮನೆಗೆ ಬಂದಿದ್ದನಲ್ಲ? ಆಗ ಮನೆಯ ವಾಚ್‌ಮನ್ ದೀಪಕ್ ಕಾಲಿಗೆ ಗಾಯವಾಗಿ, ರಕ್ತವಾಗಿದ್ದನ್ನು ನೋಡಿದ್ದಾನೆ. ಅಂದರಿಲ್ಲಿ ಡಿಸೆಂಬರ್ 8 ರಂದು ಮುಂಜಾನೆ 8 ಗಂಟೆಗೆ, ಸಂಜೆ 6.30 ರಿಂದ 7 ರ ಮಧ್ಯೆ ಮತ್ತೆ ರಾತ್ರಿ 8.30 ಗಂಟೆಗೆ... ಹೀಗೆ ಮೂರು ಬಾರಿ 'ಪ್ರೇಮ' ಕದನ ನಡೆದದ್ದು ಸಾಬೀತಾಗಿದೆ. ಹಿಂದಿನ ದಿನ ಡಿಸೆಂಬರ್ 7 ರಂದು ವಿದ್ಯಾನಗರದ 'ಸ್ಮೋಕರ್ ಪಾಯಿಂಟ್' ಬಳಿಯೂ ಬಡಿದಾಟವಾಗಿದೆ.


ದೀಪಕ್‌ನದು ಕೊಲೆಯೋ? ಆತ್ಮಹತ್ಯೆಯೋಯೋ

ರಾತ್ರಿ 11 ರ ವೇಳೆಗೆ ದೀಪಕ್ ಮೊಬೈಲ್ ಸ್ವಿಚ್ ಆಫ್ ಆಗಿದೆ. ಮುಂಜಾನೆ ಸಿಕ್ಕ ಶವದ ಮೇಲೆ stab ಮಾಡಿದ ಗುರುತಿರಲಿಲ್ಲ, ತಲೆಗೆ ಬಲವಾದ ಪೆಟ್ಟೂ ಬಿದ್ದಿರಲಿಲ್ಲ. ಆದರೆ 14 ತರಚಿದ ರಕ್ತಮಯ ಗಾಯಗಳಿದ್ದವು. ಅಂದರೆ ದೀಪಕ್‌ನ ಕತ್ತು ಹಿಸುಕಿ ಕೊಂದಿದ್ದಾರೆಯೇ? ಹೆಣವನ್ನು ಮುಳ್ಳು ಕಂಟಿಗಳಲ್ಲಿ ಎಳೆದುಕೊಂಡು ಬಂದಿದ್ದರಿಂದ ಮೈತುಂಬಾ ತರಚಿದ ಗಾಯಗಳಾಗಿವೆ ಎಂಬುದು ಸ್ಪಷ್ಟ. ಹುಬ್ಬಳ್ಳಿ ಪೊಲೀಸರು, ರೈಲ್ವೆ ಪೊಲೀಸರು ಮಾತ್ರ ಇದು ಆತ್ಮಹತ್ಯೆಯೊ ಕೊಲೆಯೋ ಎಂದು ತಲೆ ಕೆರೆದುಕೊಳ್ಳುತ್ತಿದ್ದಾರೆ. ಹಾಗೆಯೇ ಸಂಶಯಕ್ಕೆ ಗುರಿಯಾಗಿರುವ ಅಮಿತ್ ವಿಷ ಕುಡಿದು ಆಸ್ಪತ್ರೆಯ ಪಾಲಾಗಿದ್ದಾನೆ. ನಿಜಕ್ಕೂ ಅಮಿತ್ ಆತ್ಮಹತ್ಯೆಗೆ ಯತ್ನಿಸಿದನೆ? ಅಥವಾ ಇದು ನಾಟಕವೆ? ಎಂಬುದನ್ನು ಪೊಲೀಸರು ಪತ್ತೆ ಹಚ್ಚಬೇಕಿದೆ.

ಈ ಹಿಂದೆ ವುಡ್‌ಲ್ಯಾಂಡ್ಸ್ ಹೋಟೆಲಿನಲ್ಲಿ 'ಫನ್ ಅಂಡ್ ಫೇರ್' ಎಂಬ ಮೋಜಿನ ಜಾತ್ರೆಯಲ್ಲಿ ದೀಪಕ್ ಪಟ್ಟಣ ಗೆಳೆಯರಿಗೆ ಭೋಜನಕೂಟ ಏರ್ಪಡಿಸಿದಾಗ, ಅಲ್ಲೂ ದೀಪಕ್, ಅಮಿತ್ ನಡುವೆ ಜಗಳ ನಡೆದಿತ್ತು. ಚೇತನಾ ಕಾಲೇಜಿನ ವಿದ್ಯಾರ್ಥಿಗಳನ್ನು ವಿಚಾರಿಸಿದರೆ ಸತ್ಯ ಹೊರಬೀಳಬಹುದು.

ಆದರೆ ದೀಪಕ್, ಅಮಿತ್ ಇವರೀರ್ವರ ಪ್ರೇಮ ದೇವತೆ 'ಕರಿ' ಯಾರೆಂಬುದು ಇನ್ನೂ ನಿಗೂಢವಾಗಿಯೇ ಇದೆ.


ಒಟ್ಟಿನಲ್ಲಿ ತ್ರಿಕೋನ ಪ್ರೇಮ ಪ್ರಕರಣವೊಂದರಲ್ಲಿ ದೀಪಕ್ ದಾರುಣ ಅಂತ್ಯ ಕಂಡಿದ್ದಾನೆ.

–ವರದಿಗಾರ

ಡೈರೆಕ್ಟರ್ ಚಿದಾನಂದ

ಮುಚ್ಚಲಿದ್ದಾನೆ ಮಂಡ್ಯ ಮೆಡಿಕಲ್ ಕಾಲೇಜ್!

ಮಂಡ್ಯಕ್ಕೊಂದು ಮೆಡಿಕಲ್ ಕಾಲೇಜ್ ಬಂತು ಅಂತಾ ಜನ ಖುಷಿಗೊಂಡಿದ್ದರು. ಆದರೆ ಸದ್ಯದಲ್ಲೇ ಅದು ಮುಚ್ಚುವ ಎಲ್ಲ ಸಾಧ್ಯತೆಗಳಿವೆ. ಏಕೆಂದರೆ ಕಾಲೇಜಿನ ಡೈರೆಕ್ಟರ್ ಎಚ್.ಟಿ. ಚಿದಾನಂದನ ಮಹದಾಶೆಯೇ ಅದು! ನಾಗರಿಕರೆಲ್ಲ ಈತನನ್ನು ಎತ್ತಂಗಡಿ ಮಾಡಿ ಎಂದು ಒತ್ತಾಯ ಹೇರುತ್ತಿದ್ದಂತೆ ಎಚ್ಚರಗೊಂಡ ಎಂಎಲ್‌ಎ. ಎಂ. ಶ್ರೀನಿವಾಸ್ ಸಹ ಚಿದಾನಂದನನ್ನು ತೆಗೆಯಲೇಬೇಕೆಂದು ಮುಖ್ಯಮಂತ್ರಿ ಗಳಿಗೆ ಒತ್ತಾಯಿಸಿದ್ದಾರೆ. ಚಿದಾನಂದ ಅವಧಿ ಕಳೆದ ತಿಂಗಳು 27 ಕ್ಕೆ ಮುಗಿದಾಗ, ಮಂಡ್ಯ ಮೆಡಿಕಲ್ ಕಾಲೇಜಿಗೆ ಮುಕ್ತಿ ಸಿಕ್ಕಿತು ಎಂದು ಅಂದುಕೊಂಡರು ಜನ. ಆದರೆ ಮತ್ತೊಂದು ಅವಧಿಗೆ ಮುಂದುವರೆಯಲು ಸಚಿವ ವಿ.ಎಸ್. ಆಚಾರ್ಯ ಬಳಿ ಲಾಬಿ ನಡೆಸಿರುವ ಚಿದಾನಂದ ಮೆಡಿಕಲ್ ಕಾಲೇಜನ್ನು ಶವಾಗಾರಕ್ಕೆ ಕಳುಹಿಸಿಯೇ ಬಿಡಬೇಕೆಂದು ತೀರ್ಮಾನಿಸಿದ್ದಾನೆ. ಚಾಮುಂಡೇಶ್ವರಿ ಉಪಚುನಾವಣೆ ಬಳಿಕ ಚಿದಾನಂದನನ್ನು ಎತ್ತಂಗಡಿ ಮಾಡುವುದಾಗಿ ಸಿ.ಎಮ್. ಹೇಳಿದ್ದರೂ ಅದು ಕಾರ್ಯಗತವಾಗಿಲ್ಲ. ಚಿದಾನಂದನ ಚಾಲಗಳಂತಿರುವ ಕೆಲ ಡಾಕ್ಟರುಗಳು ಚಿದಾನಂದನನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ.



ಚಿದಾನಂದನ ಹೆಂಡತಿ ಸಸ್ಪೆಂಡ್ ಆಗಿರುವ ಸರ್ಕಾರಿ ನೋಟರಿ. ಮಗ ಡಾಕ್ಟರ್ ರವಿ ರಾಜೀವ್‌ಗಾಂಧಿ ಮೆಡಿಕಲ್ ಯೂನಿವರ್ಸಿಟಿಯಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿದ್ದು ಪ್ರಶ್ನೆಪತ್ರಿಕೆ ಹಗರಣದಲ್ಲಿ ಸಿಕ್ಕಿಬಿದ್ದಿದ್ದಾನೆ. ಅದೆಲ್ಲಾ ಇರಲಿ ಎಂ.ಸಿ.ಐ. ರಿಪೋರ್ಟ್ ಪ್ರಕಾರ ಡೈರೆಕ್ಟರ್ ಆಗುವ ಅರ್ಹತೆಯೇ ಚಿದಾನಂದನಿಗಿಲ್ಲ!

'ಲಂಕೇಶ್' ಆಗಸ್ಟ್ 9 ರ ಸಂಚಿಕೆಯಲ್ಲಿ ಚಿದಾನಂದ 187 ವ್ಯಾರಾ ಮೆಡಿಕಲ್ ಹುದ್ದೆಗಳ ನೇಮಕಾತಿ ಯಲ್ಲಿ 3 ಕೋಟಿ ಡೀಲಿಂಗ್ ಮಾಡಿದ್ದನ್ನು ಬಯಲು ಮಾಡಿತ್ತು. ವರದಿ ಬಂದನಂತರ ಆ ನೇಮಕಾತಿಗಳೆಲ್ಲ ರದ್ದಾಗಿ, ಈಗ ಚಿದಾನಂದ ಮೂರು ಕೋಟಿ ಲಂಚದ ಹಣವನ್ನು ಮರಳಿಸಬೇಕಿದೆ. ಮಹಾನ್ ಭ್ರಷ್ಟ, ಹುಂಬನಾಗಿರುವ ಚಿದಾನಂದ ಚೇರ್, ಟೇಬಲ್ ಖರೀದಿಯಲ್ಲಿ, ಕ್ಯಾಂಟೀನ್ ಆರಂಭಿಸುವಲ್ಲಿ ಸಖತ್ ಮೇಯ್ದು ಕೊಬ್ಬಿ ಹೋಗಿದ್ದಾನೆ. ಇಲ್ಲಿ ಕೆಲಸ ಮಾಡುತ್ತಿರುವ ಯಾವ ವೈದ್ಯರಿಗೂ ಅಪಾಯಿಂಟ್ ಮೆಂಟ್ ಆರ್ಡರ್ ಕೊಡುತ್ತಿಲ್ಲ. ಇಲ್ಲಿ ಕೆಲಸಕ್ಕೆ ಯಾರೂ ಬರ್‍ತಾ ಇಲ್ಲ ಎನ್ನುವ ವಾತಾವರಣವನ್ನು ಸೃಷ್ಟಿಸಿ ತಾನೊಬ್ಬನೇ ಮೇಯ್ದು ಕಾಲೇಜು ಮುಚ್ಚಿಹೋಗುವ ಇರಾದೆಯಲ್ಲಿದ್ದಾನೆ.

35 ಡಾಕ್ಟರುಗಳು ಬಂಡವಾಳ ಹಾಕಿ ಆರಂಭಿಸಿರುವ 'ಮಂಡ್ಯ ಡಯಾಗ್ನೋಸಿಸ್ ಸೆಂಟರ್'ಗೂ ಚಿದಾನಂದನಿಗೂ ಅವಿನಾಭಾವ ಸಂಬಂಧ. ಮೆಡಿಕಲ್ ಕಾಲೇಜು ತೋಪಾದಷ್ಟೂ ಮಂಡ್ಯ ಡಯಾಗ್ನೋಸಿಸ್ ಸೆಂಟರ್‌ಗೆ ಲಾಭ! ಇಷ್ಟು ದಿನಾ ಆದರೂ ಈ ಕಾಲೇಜಿಗೆ ಒಬ್ಬ ಅಡ್ಮಿನಿಸ್ಟ್ರೇಟರ್ ಇಲ್ಲ. ಕಾಲೇಜಿಗೆ ಬರಬೇಕಿದ್ದ ಎರಡನೇ ಹಂತದ ಅನುದಾನ ಇನ್ನೂ ಬಂದಿಲ್ಲ. ಮಾರ್ಚ್‌ನಲ್ಲಿ ಮೆಡಿಕಲ್ ಕೌನ್ಸಿಲ್‌ನವರು ಕಾಲೇಜು ಗುಣಮಟ್ಟ ಪರೀಕ್ಷಿಸಲು ಬರುತ್ತಿದ್ದಾರೆ. ಇಂತಹ ಕಾಲೇಜನ್ನು MCI ಮಾನ್ಯ ಮಾಡುವುದು ಸಾಧ್ಯವೇ ಇಲ್ಲ.

ಆದಷ್ಟು ಬೇಗ ಚಿದಾನಂದನನ್ನು ಓಡಿಸದಿದ್ದರೆ ಮಂಡ್ಯ ಮೆಡಿಕಲ್ ಕಾಲೇಜು ಭ್ರಷ್ಟಾಚಾರದ ಕ್ಯಾನ್ಸರ್‌ಗೆ ತುತ್ತಾಗಿ ಅಸುನೀಗುವುದು ಖಚಿತ.

-ವರದಿಗಾರ

ಕೋರ್ಟಿಗೋಗಬೇಕಾದೋನು ಸೋತಿರೊ ಶಿವಬಸಪ್ಪಲವೇನ್ಲ?

ಬಯಲು ಸೀಮೆಯ ಕಟ್ಟೆಪುರಾಣ

ಹೊಲಗಳು ಕಟಾವಿಗೆ ಸಿದ್ಧವಾಗಿ ನಿಂತಿದ್ದವು. ಚಾಸದ ಸಂದಿ ಮೂಲೆ ಮುದುಕುಲಲ್ಲಿದ್ದ ಕುದ್ದುಗಳನ್ನು ಹುಡುಕಿ ತೆಗೆದ ಕಾಳಮಾವ, ಅವುಗಳನ್ನು ತೋಳಿಸುವ ಬದಲು ಹೊಟೆಲ್ ಮುಂದಿದ್ದ ಬಳಪಿನ ಮಸಗಲ್ಲಿಗೆ ತಿಕ್ಕಿ ತಿಕ್ಕಿ ಮದಗುತ್ತಿದ್ದ. ಅವುಗಳ ಹರಿತ ನೋದಿದ ಸೀರ ತಾನೂ ನಾಲಿಗೆ ಕಚ್ಚಿ ಮಸೆದು ಮದಗುತ್ತಿರುವಾಗ ಬಂದ ಜುಮ್ಮಿ,

"ಸೀನಾಚಾರಿಗೆ ಕೊಟ್ಟು ತೋಳಿಸಿದರಾಯ್ತಪ್ಪ ಅದ್ಯಾಕಂಗೆ ಮಸಿತ ಕುಂತಿದ್ದೀರಿ" ಎಂದಳು.

"ಅವುನು ಕುಲುಮೆ ಮುಚ್ಚಿ ಬಾಳದಿನಾಯ್ತು ಕಂಡ್ಯ."

"ಮುಚ್ಚದೆ ಇನ್ನೇನು ಮಾಡ್ತನೇಳು ನೀವು ಅವುನಿಗೆ ಇತ್ಲಾಗಿ ಕಾಸುನೂ ಕೊಡದಿಲ್ಲ, ಅತ್ಲಾಗಿ ರಾಗಿನೂ ಕೊಡದಿಲ್ಲ, ಕುಲುಮೆ ಮಡಿಕಂಡು ಬೆಂಕಿ ಕಾಸಂಗೆ ಮಾಡಿದ್ರಿ, ಅದ್ಕೆ ಮುಚ್ಚಿದ" ಎಂದು ಜುಮ್ಮಿ ಸೀನಾಚಾರಿ ಪರ ವಾದಿಸುತ್ತಿರುವಾಗ ಉಗ್ರಿ,

"ಅದೇನು ಕೇಡುಗಾಲ ಬತ್ತೋ ಏನೊ, ಕೇರಿನೆ ಸದ್ದಡಿಗೋಯ್ತು ಕಣೆ" ಎಂದು ವಿಶಾದಿಸಿದ.

"ಪುಟ್ಟಾಚಾರಿ ಸತ್ತಾಗ್ಲೆ ಆ ಕೇರಿ ಸದ್ದು ಅರ್ದ ನಿಂತೋಗಿತ್ತು. ಈ ಸೀನಾಚಾರಿಯಿಂದ ಇನರ್ದ ಜೀವದೆ. ಇವುನು ಕುಲುಮೆ ನಿಲ್ಲಿಸಿದ್ರೆ ಗತಿಯೇನ್ಲ?"

"ಕಸುಬು ಮಾಡದ್ರಲ್ಲಿ ಪುಟ್ಟಾಚಾರಿ ಕಂಡ್ಯ. ಅಂತ ಆಚಾರಿಯ ನಾನಿಲ್ಲಿಗಂಟ ನೋಡಲಿಲ್ಲ. ನೇಗಲಿಕ್ಕನು ಅಂದ್ರೆ ಯಂಗಿಕ್ಕತಿದ್ದ ಅಂತೀ. ವಾತ್ರ ಕ್ಕಟ್ಟ ಮಾತಾಡೋನು ಅದ ಸಯಿಸಬೇಕಾಗಿತ್ತು" ಎಂದು ಕಾಳಮಾವ ಏನೋ ನೆನಸಿಕೊಂಡವನಂತೆ ನಕ್ಕ.

"ಅದೇನು ಕ್ಕಟ್ಟ ಮಾತಾಡೋನೊ ಮಾವ?"

"ಅಯ್ಯೋ ಅದೇಳಕ್ಕಾದತೇನ್ಲ ಈ ಕ್ಯಂಪ ನೇಗಲಿಕ್ಕಿಸಿಗಳಕ್ಕೆ ಅಂತ ಬಂದ. ಲೇ ಕ್ಯಂಪ ನಿನ್ನೆದ್ದಿ ಕೊಡ್ತಿಲ ನೇಗಲಿಕ್ಕತಿನಿ ಅಂದ."

"ಅಂಗಂದನೆ?"

"ಊ, ಕ್ಯಂಪ ಏನೂ ಸಿಟ್ಟು ಮಾಡಕಳದೆ ಕೊಡದೇನು ಹೋಗು ಮನೆಲವ್ವುಳೆ ಅಂದ. ಪುಟ್ಟಾಚಾರಿ ತಣ್ಣಗಾದ."

"ನನಿಗೊಂದ ಸತಿ ಯಂಗಂದಿದ್ದ ಅಂತೀ ಓಹೊಹೊ, ಪೌವುದ್ರು ಬ್ಯಾರೆ ಈ ಮುಸುಡಿಗೆ ಅಂದಿದ್ದ ಕಣ ಮಾವ."

"ಅಂಗರೆ ನೀನು ಸಿಕ್ಕಿದ್ದೆ ಅನ್ನು?"

"ಏ ಕಲ್ಲುಬಾವಿ ನೀರಿಗೋಗುವಾಗ ಅವುರ ಮನೆ ಮುಂದಾಸೇ ಹೋಗಬೇಕಲವೆ? ಆಗಂದಿದ್ದ."

"ನನಿಗೆ ತಿಳದಾಗಿಂದ ನೋಡ್‌ಕಂಡು ಬಂದೆ ಕಣೆ. ಯಾವಾಗ್ಲು ನೇಗಲಿಕ್ಕನು, ಗಾಡಿಕೂಡಸನು, ಇಲ್ಲ ಅಂದ್ರೆ ಕುದ್ದು ಮಚ್ಚು ಮಾಡ್ತಾಯಿರೋನು. ಕುಲಕಸುಬಿನಲ್ಲಿ ಅವುನಂಗೆ ಯಾರೂ ಮುಳಿಗಿರಲಿಲ್ಲ" ಎಂದು ಕಾಳಮಾವ ಪುಟ್ಟಾಚಾರಿಯನ್ನು ಕೊಂಡಾಡುವಾಗ ಏನೋ ಹೊಳೆದಂತೆ ಉಗ್ರಿ,

"ದ್ಯಾವೇಗೌಡ ರಾಜಕೀಯದಲ್ಲಿ ಮುಳಿಗಿದಂಗೆ ಅನ್ನು" ಎಂದ.

"ದ್ಯಾವೇಗೌಡನ ಕುಲಕಸುಬು ರಾಜಕೀಯವೇನ್ಲ?"

"ಅಲ್ಲ, ಆದ್ರು ಮಾಡ್‌ಕಂಡ ನಲ್ಲ ಹೇಳು. ಅವುನಂಗೆ ಯಾರು ಮುಳುಗಿದ್ದರೂ?"

"ಈಗೆಲ್ಲಿಗೆ ಬತ್ತು ಅವುನ ರಾಜಕೀಯ" ಎಂದ ಸೀರ.

"ಆ ಸಿಂದಿನ್ನ ಸಸ್ಪೆಂಡ್ ಮಾಡ್ಯ ವುನೆ."

"ಅಂಗರೆ ಸಿಂದ್ಯಾ ಸಸ್‌ಮೆಂಟಾದ್ನ?"

"ಅವುನಾಗಕ್ಕೋದ್ನೆ? ಇವುನು ಮಾಡ್ಯವುನೆ. ಈ ಸಿಂದ್ಯ ಜೆಡಿಎಸ್ ರಾಷ್ಟ್ರ ನಾಯಕರತ್ರ ಹೋಗಿ ಈತರಕೀತರ ಅಪ್ಪ ಮಗ ಇಬ್ರೂ ನಾಟಗ ಆಡಿ ಬುಟ್ರು. ನಾವು ಮೋಸ ಹೋದೆ. ಈಗಿಬ್ರೂ ಒಂದಾಗಿ ಬುಟ್ಟವ್ರೆ. ಅವುರ ಏನಾರ ಮಾಡಿ ಪಾರ್ಟಿಯಿಂದ ತಗದಾಕಿ ಅಂತಹೇಳಿ ಬಂದಿದ್ನಂತೆ. ಅದ್ಕೆ ದ್ಯಾವೇಗೌಡ ಅವುರ ತಗಿಯದ್ರೂ ಮದ್ದು ಇವುನೆ ಇಬ್ಬರ ತಗದ್ಯಸ್ತವುನೆ."

"ಅದಪ್ಪ ಕುಸ್ತಿಯಂದ್ರೆ" ಎಂದು ಸೀರ ನಕ್ಕ.

"ದ್ಯಾವೇಗೌಡ ಮೈಗೆ ಯಂಗೆ ಯಣ್ಣೆ ಹಚಗಂಡವುನೆ ಅಂದ್ರೆ, ಇವುರ್‍ಯಾವುದೇ ಪಟ್ಟಾಕಿದ್ರೂ ಇವುರೆ ನುಣುಚಿಗಂಡು ಬದ್ಕೊಯ್ತರೆ."

"ಅಂಗಂತಿಯಾ?"

"ಊ ಕಣಮಾವ, ಅವುನು ಪಾರ್ಟಿಗೆ ಅಧ್ಯಕ್ಷ. ಯಾರ್‍ನಾರ ಸೇರಿಸಿಗಬಲ್ಲ, ತಗದಾಕಬಲ್ಲ, ಅಂತ ಪವರು ಅವುನಿಗಿರುವಾಗ ಇವೇನು ಮಾಡಕ್ಯಾದತೂ."

"ಸಿದರಾಮಯ್ಯನ್ನೆನೊ ಕಾಂಗ್ರೆಸಿನೋರು ಆತುಗಂಡ್ರು. ಆದ್ರೆ ಈ ಸಿಂದ್ಯ ಯತ್ತಗೋಗಬೇಕೇಳು?"

"ಅವುನ್ಯತ್ತಗೂ ಹೋಗದಿಲವಂತೆ. ಅಪ್ಪ ಮಕ್ಕಳ ಕಂಡ್ರಾಗದೋರು ಕಾಂಗ್ರೆಸ್ಸಿಗೋಕ್ಯಾಗದೋರನ್ಯಲ್ಲ ಸೇರಿಸಿ ತಿರಗ ಇನ್ನೊಂದು ದಳ ಮಾಡ್ತನಂತೆ."

"ಅದೇಸೊಂದು ದಳಾದುವುಲ?"

"ಅವ್ಯಲ್ಲ ದೇವೇಗೌಡನಿಂದ ಆದವು ಚಗಪ್ಪ" ಎಂದು ವಾಟಿಸ್ಸೆ ಬಂದ.

"ಅದೊಂದೇಳತಿರಿ ನೀವು. ಹೂಸಿದೋಳ್ಯಾರು ಅಂದ್ರೆ ಮಾಸಲು ಸೀರೆ ಉಟ್ಟಿರೋಳು ಅಂದಂಗೆ, ಯಲ್ಲಾಕ್ಕು ದ್ಯಾವೇಗೌಡ ದ್ಯಾವೇಗೌಡ. ಇದೇ ದ್ಯಾವೇಗೌಡ ಇಲ್ದೆಯಿದ್ರೆ ಸಿದರಾಮ ಸಿಂದ್ಯ ಯಲ್ಲ ಎಲ್ಲಿ ಬದ್ದಿರತಿದ್ರು ಗೊತ್ತೇನ್ಲ?" ಎಂದು ಕಾಳಮಾವ ಸಿಟ್ಟಾದ.

"ನಿಜ ದ್ಯಡಪ್ಪ ನೀನೇಳದು. ಈಗ್ಲೆ ನೋಡು. ಸಿಂದ್ಯ ಬೀದಿಲಿ ಬದ್ದವುನೆ. ಸಿದರಾಮಯ್ಯ ಕಾಂಗ್ರೆಸ್ ಗುಂಡಿಗೆ ನ್ಯಗದವುನೆ. ಪ್ರಕಾಶ ಹಲ್ಲು ಉಗುರು ಕಳಕಂಡಿರೊ ಮುದಿಹುಲಿಯಂಗಾಗ್ಯವುನೆ. ಡಿ. ಮಂಜುನಾಥ ದಿನ ಎಣುಸ್ತ ಅವುನೆ. ಅಲ್ಲಂಗೂರು ಪಲ್ಲಂಗದ ಕನಸಲ್ಲೇ ಕಾಲನೂಕ್ತ ಅವುನೆ. ಮಾದೇವ ಪ್ರಸಾದ ಸತ್ತೂರು ಮಠ ಸೇರಿ ಕಂಡ. ಇದ್ಕು ದ್ಯಾವೇಗೌಡ್ನೆ ಕಾರಣ ಅಲವೆ" ಎಂದ ವಾಟಿಸ್ಸೆ.

"ಇವತ್ತಿಂದಲ್ಲ ಕಂಡ್ಯ ನಾನೇಳಿದ್ದು. ಈ ಸಿದರಾಮಯ್ಯನ್ನ ಹಣಕಾಸಿನ ಮಂತ್ರಿ ಮಾಡಿದ್ದು ದ್ಯಾವೇಗೌಡನಂತೆ?"



"ಹಣ ಬೇಕಾಗಿತ್ತು ಮಾಡಿದ."

"ದ್ಯಾವೇಗೌಡ ಸಿದರಾಮಯ್ಯನತ್ರ ದುಡ್ಡು ಕೇಳಂಗಾಗಿದ್ನೆ? ಇದ್ಯಾವ ಸೀಮೆ ಮಾತಾಡ್ತಿಲ ನೀನು?"

"ದ್ಯಡಪ್ಪ, ಸ್ವಲುಪ ಕಾಮಾಗೇಳ್ತಿನಿ ಕೇಳು. ನನ್ನನ್ನೇ ಸಿದರಾಮಯ್ಯ ಅಂತ್ಲೆ ತಿಳಕೊ" ಎಂದ ವಾಟಿಸ್ಸೆ ಧ್ವನಿಯನ್ನು ಸಿದ್ದರಾಮಯ್ಯನಂತೆ ಬದಲಾಯಿಸಿ,

"ನೋಡಿ ಕಾಳೇಗೌಡ್ರೆ, ನಿಮ್ಮ ದ್ಯಾವೇಗೌಡನೂ ನಾನೂ ಸೇರಿ ಜನತಾದಳ ಕಟ್ಟಿದೊ. ಐವತ್ತೆಂಟು ಸೀಟು ಬಂದಿದ್ರಲ್ಲಿ ನನ್ನ ಪಾಲು ಅದೆ ಅನ್ನದ ಒಪ್ಪಿಗತಿರಾ."

" "

"ಮಾತಾಡಿ ಕಾಳೇಗೌಡ್ರೆ?"

"ಮುಂದುಕೇಳ್ಳಿ."

"ಐವತ್ತೆಂಟು ಸೀಟು ಬಂದೊ. ನಿಮ್ಮ ... ಮುಖ್ಯಮಂತ್ರಿಯಾದ. ಆ ಕಾರಣಕ್ಕೆ ನೀವು ನನ್ನ ... ದ್ವೇಶ ಇಟ್ಟುಕೋಬಾರ್ದು. ಬದಲಿಗೆ ತಾತ್ಸಾರ ... ಸುಮ್ಮನಾಗಬವುದು. ಆದ್ರೆ ನೀವೇನು ಮಾಡಿ... ನನ್ನನ್ನ ಚುನಾವಣೆಲಿ ಸೋಲಸದಿಕ್ಕೆ ನಿಮ್ಮ ... ಕುಟುಂಬನ ಮೈಸೂರಿಗೆ ಕಳಿಸಿದ್ರಿ. ನಿಮ್ಮ ಸೊಸ... ಹಗಲು ರಾತ್ರಿ ತಿರಗಿದ್ರು. ನಿಮ್ಮ ಮೊಮ್ಮಕ್ಕಳೂ ... ಡಿದ್ರು. ನಿಮ್ಮ ಮಕ್ಕಳಂತೂ ಮಾಡಬಾರದ್ದೆ ಮಾಡಿ... ನೀವಂತೂ ಸಭೆಲೆಲ್ಲಾ ಅತ್ತಿರಿ, ಕರದ್ರಿ, ಕಡಿಗೆ ಬಹಿರ... ವಾಗಿ ಜಾತಿ ಹೆಸರಿಡಿದು ಮಾತಾಡಿದ್ರಿ. ಯಾಕೆ ಗೌಡ...

" "

"ನೀವೆಲ್ಲಾ ಇಷ್ಟು ದ್ವೇಶ ಮಾಡೊ ಅಂತ ... ನಾನು? ಯಾವ ಕಡಿಂದ ಯೋಚನೆ ಮಾಡಿ... ನನಿಗೆ ನಿಮ್ಮ ದ್ವೇಶಕ್ಕೆ ಕಾರಣಾನೆ ಹೂಳಿತಾಯಿ... ನೀವಾದ್ರು ಬಾಯಿಬುಟ್ಟೇಳಿ. ಹೋಗ್ಲಿ ಕಾಳೇಗೌ... ನೀವಾದ್ರು ಹೇಳಿ," ಎಂದು ವಾಟಿಸ್ಸೆ ಕಾಳಮಾವ... ದುರುಗುಟ್ಟಿ ನೋಡಿ, ಧ್ವನಿ ಬದಲಿಸಿ

"ಬಾಯಿಬುಡು ದೊಡಪ್ಪ"ಎಂದ.

"ಇಸಿಸಿ ನಾನೇನೇಳನ್ಲ?"

"ಹೋಗ್ಲಿ ಜನತೆ ತೀರ್ಪಿಗೆ ತಲೆಬಾಗ್ತಿನಿ ಅಂ... ಈ ಹಿಂದೆ ತಲೆ ಬಾಗಿದ್ದಿರಿ. ಆದ್ರೆ ಈಗ ಈ ಸೋಲಿ... ಗಳದೆ ಕೋರ್ಟಿಗೋಗ್ತಿನಿ ಅಂತ ಹೇಳಿದ್ದೀರಿ" ಎಂ... ವಾಟಿಸ್ಸೆ ಮತ್ತೆ ಸಿದ್ದರಾಮಯ್ಯನವರ ಧ್ವನಿಯಲ್ಲಿ.

"ಅಂಗರೆ ದ್ಯಾವೇಗೌಡ ಕೋರ್ಟಿಗೋದನೆ" ಎಂದ ಸಿ...

"ಹೋದನೋ ಬುಟ್ಟನೋ ಆದ್ರೆ ಕೋರ್ಟಿಗೋ... ಬೇಕಾದೋನು ಶಿವುಬಸಪ್ಪ, ಅವುನೆ ಶಿವಶಿವಾ ... ಮನೆಲಿ ಕುಂತು ಸುದ್ರೇಸಿಗತ್ತಾ ಅವುನೆ, ಅಂತದ... ಈ ದ್ಯಾವೇಗೌಡ್ರಿಗೇನಾಗ್ಯದೆ?"

"ಸಿದ್ದರಾಮಯ್ಯನ್ನ ತಗದ್ರೆ ಇನ್ನತ್ತೂರಸ ಕರನಾ... ನಮ್ಮದೇ ಅನ್ನ ಕಂಡಿದ್ನಂತೆ ಕಣೊ" ಎಂದ ಉ...

"ನಿಜ ಕಣೊ ಉಗ್ರಿ ಮಕ್ಕಳು ಸೊಸೆರು ನ... ಇಷ್ಟರು ಬೀಗರು ಬಿಜ್ಜರು ಹಿಂಗೆ ವಿಧಾನ್ನಭೆಮ... ಯಲ್ಲಾರ್‍ನು ತಂದು ತುಂಬಬುಡೋನು. ಅದಕ... ಮಾಡಬಾರುದ್ನೆ ಮಾಡಿ ಸಿದರಾಮಯ್ಯನ ಸೋ... ಬುಡನ ಅಂತ ಹೋಗಿ ನೂರುಕೋಟಿ ಸುರು... ಆಗಲಿಲ್ಲ ಹೋಗತ್ತಗೆ."

"ಆ ಸಿಟ್ಟಿಗೆ ಕಣೊ ಕೋರ್ಟಿಗೋಯ್ತಿನಿ ಅಂದಿರು...

"ಕೋರ್ಟಿಗಾರ ಹೋಗ್ಲಿ, ಕ್ವಾಣೆಗಾರ ಹೋ... ಚಾಮುಂಡೇಶ್ವರಿಲಿ ಕುರುಬ್ರು, ಒಕ್ಕಲಿಗರು ಅಣ್ಣತಮ... ರಂಗಿದ್ರು. ಕಷ್ಟ ಸುಖ ಹಂಚಿಗಳರು. ಕುರಿಕಾಯೋ... ದನಕಾಯೋರು, ಜ್ಯತಿಯಾದಂಗೆ ಒಂದು ತಾ... ಮಕ್ಕಳಂಗಿದ್ರು. ಅಂತ ಜನಗಳ ಮನಸ ವಡ... ಬುಟ್ಟನಲ್ಲಯ್ಯ ಈ ಯೂಜ್‌ಲೆಸ್ ಫೆಲೊ."

"ಯಂತ ಟೇಂ ಬಂದ್ರು ಜಾತಿ ವಡಿಬಾದ... ಕಣೊ. ನೋಡು ಆ ಇಂಗ್ಲೀಸ್‌ನೋರು ಸಾಬರಿ... ನಮಿಗೂ ತಂದಾಕಿದ್ರಂತೆ. ಇವತ್ತಿನವರಿಗೂ ... ಮಾಡಕ್ಯಾಗಲೇಯಿಲ್ಲ."


"ಆದ್ರು ನಾವು ಸರಿಮಾಡನ ಬುಡೊ. ದ್ಯಾವೇಗೌಡ ಮಾಡೊ ಕ್ಯಲಸನ ನಾವು ಸರಿ ಮಾ... ಬುಡು, ಡೊಂಟ್ ವರಿ."

"?! "

-ಬಿ.ಚಂದ್ರೇಗ...

Zero Hour ಮುನ್ನಿ

1. ಸಾಹಿತ್ಯವಷ್ಟೇ ಸಾಲದು: ಸಾಹಸ ಪ್ರವೃತ್ತಿಯೂ ಬೇಕು'-ಎಸ್.ಎಲ್. ಭೈರಪ್ಪ. ಏನಿದು ಸಾಹಸ ಪ್ರವೃತ್ತಿ?
   a) ಸಂಘ ಪರಿವಾರದ ಕ್ರೂರ ಸಿದ್ಧಾಂತಗಳನ್ನು ಜಾರಿಗೆ ತರುವುದಂತೆ
   b) ಮಂಗಳೂರಿನಲ್ಲಿ ಗಲಭೆ ಎಬ್ಬಿಸಿದವರು ಸಾಹಸಿಗಳಂತೆ
   c) ಸಂಧ್ಯಾವಂದನೆಯಲ್ಲೂ 'ಸಾಹಸ' ಮಾಡಬೇಕಂತೆ
   d) ಭೈರಪ್ಪನನ್ನು ಸಹಿಸಿಕೊಂಡಿದ್ದೇವಲ್ಲ; ಅದೇ ದೊಡ್ಡ ಸಾಹಸ
2. 'ಇನ್ಫೋಸಿಸ್ ಗೋಪುರ ಕುಸಿದು ಐವರು ಕಾರ್ಮಿಕರ ಸಾವು'- ಸುದ್ದಿ, ವಿವಾಸ್ತ್ರೀರಾ?
   a) ನಿತ್ಯ ಕಾರ್ಮಿಕರನ್ನು ಕೊಲ್ಲುವ ಇನ್ಫೋಸಿಸ್‌ಗೆ ಇದು ಮಾಮೂಲಿ ಸುದ್ದಿ
   b) 'ಹೃದಯ ಸಮಾಜವಾದಿ' ಎನ್ನೋ ವ್ಯಾಪಾರಿ ನಾರಾಯಣಮೂರ್ತಿ 'ಏನೂ ಮಾತಾಡ್ತಾನೇ ಇಲ್ಲ
   c) ಎಲ್ಲದಿಟ್ಟೆ ಸುಧಮ್ಮತ್ತಿ? ಸ್ವಲ್ಪ 'ಮನಿ' ಬಿಟ್ ಹೊರ್‍ಗ ಬಾರಬೆ!
   d) ಕೊಲೆಗಾರ ಶೋಭಾ ಡೆವಲಪರ್ಸ್ ಹಿಂದೆ ಇನ್ಫೋಸಿಸ್!



3. ತೋಟಗಾರಿಕೆ ಇಲಾಖೆ ನೇಮಕಾತಿಯಲ್ಲೂ ತಿಂದು ತೇಗಿದ ಕೆಪಿಎಸ್‌ಸಿ ಬಗ್ಗೆ ಕಾಮೆಂಟ್ ಮಾಡಿ
   a) ತೋಟವಿರಲಿ, ಕಾಂಗ್ರೆಸ್ ಕಸ ಸಿಕ್ಕರೂ ತಿನ್ನುತ್ತದೆ ಕೆಪಿಎಸ್‌ಸಿ
   b) ಒಳಚರಂಡಿ ಮಂಡಳಿಗೆ ನೇಮಕಾತಿ ನಡೆದರೆ ಒಳಚರಂಡಿಯಲ್ಲೂ ತಿನ್ನುತ್ತದೆ ಕೆಪಿಎಸ್‌ಸಿ
   c) ಕಳ್ಳ ಕೃಷ್ಣ ಇರುವವರೆಗೆ ಅರ್ಹರಿಗೆ ಗೇಟ್ ಬಂದ್
   d) ನೌಕರಿಗಳನ್ನು ಹರಾಜಿಗಿಟ್ಟ ಏಕೈಕ ಸಂಸ್ಥೆ ಕೆಪಿಎಸ್‌ಸಿ
4. ನಾಗಾರ್ಜುನ ಸ್ಥಾವರ ಸ್ಥಾಪನೆ ಕುರಿತು ಪೇಜಾವರರೊಂದಿಗೆ ಸಿ. ಎಮ್. ಚರ್ಚಿಸುವ ಅಗತ್ಯವೇನಿತ್ತು?
   a) ಉಡುಪಿ ಮಠದ ಪಾಲನ್ನು ನಾಗಾರ್ಜುನ ಕೊಟ್ಟಿತಾ ಎಂದು ವಿಚಾರಿಸಿರಬೇಕು
   b) ನೀವು ಆಶೀರ್ವಾದ ಮಾಡಿ 257 ವೋಟುಗಳಲ್ಲಿ ಸಿದ್ದುನ ಗೆಲ್ಲಿಸಿದ್ದು ತಪ್ಪು ಅಂದರಂತೆ
   c) ಇದೆಲ್ಲ 'ಕರೆಂಟ್' ಅಫೇರ್ಸ್ ಈಗ!
   d) ನಾಗಾರ್ಜುನ, ಸುಜಲಾನ್‌ಗಳ ವಕ್ತಾರರು ಈ ಸಿ.ಎಮ್, ಪೇಜಾವರರು!
5. 'ಕೇಳಿದ್ದೆಲ್ಲಾ ಕೊಡೋಕೆ ನಾನೇನು ಕೃಷ್ಣದೇವರಾಯನಾ?' ಎಂದಿದ್ದಾರಲ್ಲ ಎಂ.ಪಿ. ಪ್ರಕಾಶ್?
   a) ಸ್ವಾಮಿ ಪ್ರಕಾಶ್, ಆ ಪುಣ್ಯಾತ್ಮ ಕೃಷ್ಣ ದೇವರಾಯನೇ ನಿಮಗೆ ಆದರ್ಶವಾದನೆ?
   b) ಪ್ರಭುತ್ವವನ್ನು ಆರಾಧಿಸುವವರು ಹೇಳೋ ಮಾತಿದು!
   c) ಸರ್ಕಾರದ ಸೌಲಭ್ಯ ಕೇಳ್ತಿದಾರೆ ಜನ, ಅದೇನು ನಿಮ್ಮ ಮನೆ ಆಸ್ತಿಯುಲ್ಲವಲ್ಲ ಪ್ರಕಾಶ್‌ರಾಯರೇ.
   d) ಕೇಳಿದ್ದು ಕೊಡೋಕಾಗಲ್ಲಂದ್ರೆ, ಮನೆಗೆ ಹೋಗಿ ಪ್ರಕಾಶ್



ಬೃಂದಕ್ಕ,



ಯವ್ವಾ ಯವ್ವಾ ನೀ ಯಾಕ್ಹಿಂಗ್ ಆಡ್ತಿಬೆ? ನಿನ್ಗೇನು ಅಂತಾ ಜರೂರತ್ತು ಇತ್ತು ಸಿಪಿಎಂ ಸರ್ಕಾರ ಬೆಂಬಲಿಸಿ ಮಾತಾಡೋದು... ಸಿಂಗೂರಿನ ರೈತರು ಸಾಯಾಕಾ ಹತ್ಯಾರ... ನೀ ಅಲ್ಲಿ ದಿಲ್ಲಾಗ ಕುಳಿತು ಏನೇನರ ಸಮಜಾಯಿಷಿ ಕೊಡಬೇಡವಾ...

AIDYO ದಾಗ, AIMSS ನ್ಯಾಗ ನೀ ರೂಪಿಸಿದ ಹೋರಾಟ ನಾವು ಹ್ಯಂಗ ಮರೆಯೋಕಾಗುತ್ತ? ಆದ್ರ ನೀ ಈಗ ಪಾಲಿಟ್‌ಬ್ಯುರೋ ಮೆಂಬರು ಆದ ಮ್ಯಾಲ ಬಾಳ ಚೇಂಜ್ ಆಗಾಕ ಹತ್ತಿಯವಾ...

ಅಲ್ಲಬೆ ಟಾಟಾ, ಬಿರ್ಲಾ ಅಂದ್ರ ಆವಾಗ ಉರಕೊಂಡು ಬೀಳತ್ತಿ... ಈಗ ಟಾಟಾಗೆ ಕಮ್ ಕಮ್ ಅನ್ನೋದು ಬಾಳ ಅಸಹ್ಯವಾ...

ಅಂದಂಗ ಬೃಂದಕ್ಕ, ಮೊನ್ನೆ ನೀನು ಹನ್ನೊಂದು ಕೆಂಪು ಸೀ... ತೊಗೊಂಡ್ಯಂತ.....?

-ಇತಿ ಮುನ್ನಿ, ಧಾರವಾ...

ಒಂದು 'ಗಾದಿ' ಮಾತು

ಕಮ್ಯುನಿಸಂ ಹೇಳೋಕೆ
ಟಾಟಾ ತಬ್ಕೋಕೆ!

ಉತ್ತರಗಳು: 1) d, 2) a, 3) b, 4) d, 5) b


ಹಣ ಇಲ್ಲದವನನ್ನು ಯಾರು ತಿಳಿಯರು ಹಣ ಇರುವವನು ತನ್ನನ್ನು ತಾನೇ ತಿಳಿಯ -ಜರ್ಮನ್ ಗಾದೆ

ಸುಧಾರಣೆಗೆ ಕೊಳ್ಳ



ಅದೊಂದು ಕೃತಕೃತ್ಯ ಗಳಿಗೆ. ಕ್ರಾಂತಿಗೆ ಹೊಸ ಕಳೆ ಬರುತ್ತಿದ್ದ ಗಳಿಗೆ. ಕಮ್ಯೂನಿಸಂನ ಇಕ್ಕಟ್ಟಿನಿಂದ ಸ್ವಲ್ಪ ಬಿಡಿಸಿಕೊಂಡು ಸುಧಾರಣೆ, ಸೃಜನಶೀಲತೆಯನ್ನು ಜೆಕೋಸ್ಲಾವಾಕಿಯಾ ಗಳಿಸಿಕೊಳ್ಳುತ್ತಿದ್ದ ಗಳಿಗೆ. ವರ್ಷ 1968. ಆ ದೇಶದ ರಾಜಧಾನಿ ಪ್ರೇಗ್ ಅವರಿಗೆ "ಪ್ರೇಗ್ ವಸಂತ"ವನ್ನು ನೀಡಿತ್ತು; ಎಲ್ಲರಿಗೆ ನೀಡಿದಂತೆಯೇ ಜೇರಿ ರುಮ್ಲ್ ಎಂಬ ಪತ್ರಕರ್ತನಿಗೆ ಕೂಡ ಸ್ವಾತಂತ್ರ್ಯ ನೀಡಲಾಗಿತ್ತು. ಆದರೆ ಅದು ಮರೀಚಿಕೆಯಾಯಿತು. ಅದೇ ವರ್ಷದ ಆಗಸ್ಟ್‌ನಲ್ಲಿ ರಷ್ಯದ ಸೈನ್ಯ ಪ್ರೇಗ್ ನಗರವನ್ನು ಪ್ರವೇಶಿಸಿತು. ಹಬ್ಬುತ್ತಿದ್ದ ಮಬ್ಬನಂತೆ ಜೆಕೋಸ್ಲಾವಾಕಿಯಾ ಸುತ್ತಾ ಓಡಾಡುತ್ತಿದ್ದ ವಾರ್ಸಾ ಸೈನ್ಯ ನುಗ್ಗಿತು. ಕೇವಲ ಸುಧಾರಣೆಗಾಗಿ ಒತ್ತಾಯಿಸುತ್ತಿದ್ದ ರುಮ್ಲ್ ತರಹದವರನ್ನು ದಸ್ತಗಿರಿ ಮಾಡಿತು. ವಾಕ್‌ಸ್ವಾತಂತ್ರ್ಯ ಸರ್ಕಾರದ ತಪ್ಪುಗಳನ್ನು ವಿವರಿಸುವ ಸ್ವಾತಂತ್ರ್ಯ ಇಲ್ಲವಾಯಿತು. ರುಮ್ಲ್ ಕ್ಷಮೆ ಕೇಳಲಿಲ್ಲ, ತನ್ನದು ತಪ್ಪೆಂಬುದು ಅವನಿಗೆ ಗೊತ್ತಿರಲಿಲ್ಲ. ಅವನನ್ನು ಜೈಲಿನಿಂದ ಜೈಲಿಗೆ ಸಾಗಿಸಲಾಯಿತು; ಬುಲ್ಡೋಜರ್ ಕೆಲಸಕ್ಕೆ ಹಚ್ಚಲಾಯಿತು; ಪೆನ್ನು ಕಾಗದದಿಂದ ದೂರ ಇಡಲಾಯಿತು. ಇಪ್ಪತ್ತು ವರ್ಷ ಹೀಗೆ ಕಳೆಯಿತು. ಆದರೆ ರುಮ್ಲ್ ತನ್ನ ನಿಲುವು ಬದಲಿಸಲಿಲ್ಲ.

ಈಗ ಗೊರ್‌ಬಚೇವ್ ಅವರ ಗ್ಲಾಸ್‌ನಾಸ್ಟ್ ತನ್ನ ಸುಗಂಧವನ್ನು ಜೆಕೋಸ್ಲಾವಾಕಿಯಾದಲ್ಲಿ ಕೂಡ ಹರಡತೊಡಗಿದೆ. ರುಮ್ಲ್‌ಗೆ ಸ್ವಾತಂತ್ರ್ಯ ಬಂದಿದೆ, ಆದರೆ ಆತನ ದುಗುಡ ಕಮ್ಮಿಯಾಗಿಲ್ಲ, ಕಮ್ಯೂನಿಸ್ಟ್ ವರಸೆಯ ಬಗ್ಗೆ ಅನುಮಾನ ಹೋಗಿಲ್ಲ, ಗೊರ್‌ಬಚೇವ್ ನಡೆಸುತ್ತಿರುವ ಸುಧಾರಣೆಯ ಪ್ರಯೋಗದ ಬಗ್ಗೆ ಈ ಸೂಕ್ಷ್ಮಜೀವಿ ಹೇಳುತ್ತಾನೆ: "ಯಾವ ಸಮಾಜವಾದರೂ ಸುಧಾರಣೆ ಒಪ್ಪಿಕೊಂಡೀತು- ಆದರೆ ಕಮ್ಯುನಿಸ್ಟ್ ಪಕ್ಷ ಸುಧಾರಿಸುವುದು ಕಷ್ಟ. ಯಾಕೆಂದರೆ ಈ ಪಕ್ಷ ಇತರರೊಂದಿಗೆ ಅಧಿಕಾರದಲ್ಲಿ ಪಾಲುಗೊಳ್ಳಲು ನಿರಾಕರಿಸುತ್ತದೆ."



ಸೆಪ್ಟಂಬರ್ 4, 1988

ಜಾತಿಯ ಸೊಲ್ಲು ಎತ್ತಬೇಕೆ?

ಈಗಲೇ ಈ ವಿಷಯ ಹೇಳುವುದು ಒಳ್ಳೆಯದು.

ಮೊನ್ನೆ ಕೋಲಾರ ಜಿಲ್ಲೆಯ ಕೆಲವು ತರುಣರು ಬಂದಿದ್ದರು. ಕೋಲಾರದ ಒಕ್ಕಲಿಗರು, ರೆಡ್ಡಿಗಳ ಮಾತು ಬಂತು. ಅವರು ಹೇಳುವುದನ್ನೆಲ್ಲ ನಾನು ಕೇಳುತ್ತಿದ್ದೆ. ಮಾತಿನ ಮಧ್ಯೆ ಒಬ್ಬ ತರುಣ, "ನಾವಾದರೂ ಜಾತಿಯನ್ನು ಮರೆತು ರಾಜಕೀಯ ಮಾಡುವುದು ಒಳ್ಳೆಯದಲ್ಲವೆ?" ಎಂದು ಇನ್ನೊಬ್ಬನಿಗೆ ಹೇಳಿದ.

ನಾನು ಆತನಿಗೆ ಹೇಳಿದೆ: "ಇದೊಂದು ಸರಳ ವಿಚಾರ. ನಮ್ಮ ಜನಕ್ಕೆಲ್ಲ ಇದು ಗೊತ್ತಾಗಬೇಕಾಗಿರುವುದರಿಂದ ಹೇಳುತ್ತಿದ್ದೇನೆ. ಜಾತೀಯತೆಯ ದುರಂತ ನಮ್ಮ ಜನಕ್ಕೆ ಗೊತ್ತಿಲ್ಲ. ಯಾವುದೋ ಒಂದು ಜಾತಿಯಲ್ಲಿ ಹುಟ್ಟಿರುವ ಕಾರಣಕ್ಕೇ ಒಬ್ಬ ಮನುಷ್ಯ ಬಡತನ, ಅವಮಾನ, ಅಸಹಾಯಕತೆ ಪಡೆಯುತ್ತಾನೆ; ಇನ್ನೊಂದು 'ಉತ್ತಮ' ಜಾತಿಯಲ್ಲಿ ಹುಟ್ಟಿದ್ದಕ್ಕೆ ಇನ್ನೊಬ್ಬ ಗೆಲುವು, ರಕ್ಷಣೆಯನ್ನೇ ಕಟ್ಟಿಕೊಂಡು ಬಂದಿರುತ್ತಾನೆ; ಆದ್ದರಿಂದಲೇ ಇಲ್ಲಿ ಜಾತಿ ತಿಳಿವಳಿಕೆ ಬೇಕು. ಸರ್ಕಾರ ವೊಂದು ಸವಲತ್ತು ನೀಡುವಾಗ ಜಾತಿಯನ್ನು ಅರಿಯಬೇಕಾಗುತ್ತದೆ. ಪಕ್ಷವೊಂದು ರಾಜಕೀಯ ಮಾಡುವಾಗ ಜಾತಿಯನ್ನು ತಿಳಿದಿರಬೇಕಾಗುತ್ತದೆ. ಮೇಲು ಜಾತಿಯವನೊಬ್ಬನಿಗೆ ಕೊಟ್ಟ ಹತ್ತು ಸಾವಿರದ ಮೌಲ್ಯ ಕೆಳಜಾತಿಯವನಿಗೆ ಕೊಟ್ಟ ಹತ್ತು ಸಾವಿರದ ಮೌಲ್ಯಕ್ಕಿಂತ ಹೆಚ್ಚಾಗಿರುತ್ತದೆ. ನಮ್ಮಲ್ಲಿ ಅನೇಕ ಜಾತಿಗಳು ಊರೊಟ್ಟಿನ ಬಾವಿಯ ನೀರಿನಿಂದ ಹಿಡಿದು ಎಣ್ಣೆ ಧಾನ್ಯ ಆಹಾರ, ವೈದ್ಯಕೀಯದ ವೃತ್ತಿಗಳಿಂದ ಕೂಡ ವಂಚಿತವಾಗಿವೆ. ಆದ್ದರಿಂದ ಜಾತ್ಯತೀತ ರಾಜಕೀಯ ಮಾಡುವವರು ಜಾತಿಗಳ ಬಗ್ಗೆ ತಿಳಿದು ತಮ್ಮ ಕ್ರಮದಲ್ಲಿ ನಿಷ್ಠುರವಾಗಿರಬೇಕು; ದಿಟ್ಟವಾಗಿರಬೇಕು. ಎಲ್ಲ ಜಾತಿಗಳೂ ಆರ್ಥಿಕ, ಸಾಮಾಜಿಕ, ಸಮಾನತೆಯ ಹತ್ತಿರ ಬರುವಂತೆ ಪ್ರಯತ್ನಿಸಬೇಕು. ಜಾತ್ಯತೀತ ಸಮಾಜ ಸೃಷ್ಟಿಸುವ ದಾರಿ ಇದು."

ಬೆಳೆವ ಜಾತೀಯತೆ


ಇದನ್ನು ಎಂ.ವಿ. ಸೀತಾರಾಮಯ್ಯನವರ ಉದಾಹರಣೆ ತೆಗೆದುಕೊಂಡೇ ಹೇಳಬೇಕಿರಲಿಲ್ಲ, ಈ ವ್ಯಕ್ತಿಯ ಒಳ್ಳೆಯತನ ಅರಿತೇ ಉದಾಹರಣೆಯಾಗಿ ಮಾತ್ರ ಹೇಳುತ್ತಿದ್ದೇನೆ. ಇವರು ಬಿ.ಎಂ. ಶ್ರೀಕಂಠಯ್ಯನವರ ನೆನಪನ್ನು ಉಳಿಸಲು ಕೆಲಸ ಮಾಡುತ್ತಿದ್ದಾರೆ. ಬಿ.ಎಂ.ಶ್ರೀ ಸ್ಮಾರಕ, ಗ್ರಂಥಭಂಡಾರ ಇತ್ಯಾದಿಯನ್ನು ರೂಪಿಸಲು ಪ್ರಯತ್ನಿಸುತ್ತಿದ್ದಾರೆ. ಬಿ.ಎಂ.ಶ್ರೀ ಎಂಥ ಪ್ರತಿಭಾವಂತರಾದ, ಕನ್ನಡದ ಹೊಸ ಹುಟ್ಟಿನ ಕಾಲದಲ್ಲಿ ಕೆಲಸ ಮಾಡಿದ ಐತಿಹಾಸಿಕ ವ್ಯಕ್ತಿಯೆಂಬುದನ್ನು ಎಲ್ಲರೂ ಬಲ್ಲರು. ಆದರೆ ಬೊಬ್ಬೂರು ಕಮ್ಮೆ ಬ್ರಾಹ್ಮಣರಾದ ಬಿ.ಎಂ.ಶ್ರೀಯವರ ಬಗ್ಗೆ ಅಪಾರ ಉತ್ಸಾಹವನ್ನು ಅವರ ಸಂಬಂಧಿಯಾದ ಬೊಬ್ಬೂರು ಕಮ್ಮೆ ಬ್ರಾಹ್ಮಣರಾದ ಎಂ.ವಿ. ಸೀತಾರಾಮಯ್ಯನವರೇ ತೋರಬೇಕಾಗಿರುವುದು ವಿಚಿತ್ರ. ಈ ದೇಶದ ಜಾತೀಯತೆ, ನಿರ್ಲಕ್ಷ್ಯ ಎಷ್ಟು ಘೋರವಾದದ್ದು. ಬಸವಣ್ಣನ ಅರ್ಥ ನಮ್ಮ ಜನಕ್ಕೆ ಹೊಳೆದಿದ್ದರೆ ಲಿಂಗಾಯತರು ಬಸವ ಭವನ ನಡೆಸಬೇಕಾದ್ದಿಲ್ಲ; ಆತನನ್ನು ವ್ಯವಸ್ಥೆಯ ಚೌಕಟ್ಟಿನಲ್ಲಿ ಹೊಸಕಿ ಹಾಕಬೇಕಿರಲಿಲ್ಲ. ಬಸವಣ್ಣ ನಿಜಕ್ಕೂ ಹರಿಜನರ ವ್ಯಕ್ತಿ. ಅವರಲ್ಲಿ ಆತ್ಮಗೌರವ, ಧೈರ್ಯ ತುಂಬಲು ಯತ್ನಿಸಿದವನು.



ಅಷ್ಟು ದೂರ ಹೋಗಬೇಕಿಲ್ಲ, ಇಲ್ಲಿಯ ಮನಸ್ಸುಗಳು ಯಾವ ರೀತಿ ಕೆಲಸ ಮಾಡುತ್ತವೆ ಅಂದರೆ, ಕೆಲವು ವರ್ಷದ ಹಿಂದೆ ಕೃಷ್ಣಸ್ವಾಮಿ ಎಂಬ ಅಯ್ಯಂಗಾರರೊಬ್ಬರು 'ಸುಬ್ಬಾಶಾಸ್ತ್ರಿ' ಎಂಬ ಚಿತ್ರ ಮಾಡಿದರು; ಅಯ್ಯಂಗಾರ್‍ರೇ ಆ ಚಿತ್ರದ ನಾಯಕ. ಇನ್ನೊಬ್ಬ ಬೊಬ್ಬೂರು ಕಮ್ಮೆ ಬ್ರಾಹ್ಮಣ ತೇಜಸ್ವಿಯವರ ಒಂದು ಕತೆಯನ್ನು ಚಿತ್ರೀಕರಿಸಿದರು; ಬೊಬ್ಬೂರು ಕಮ್ಮೆಯೇ ಅದರ ನಾಯಕ. ಇದೆಲ್ಲದರ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದ ಈ ನಾಯಕ ನಮ್ಮ ಬಿ.ಎನ್. ನಾಣಿ.

ಇಲ್ಲಿ ಎಲ್ಲರೂ ಒಟ್ಟಿಗೆ ಬದುಕಿ ಅರ್ಥ ಹೊಮ್ಮಿಸುವ ಸಂತೋಷ ಸಾಧ್ಯವೆ?

ಕಾಮ ಕತ್ತಲೆಯನ್ನು ಬಯಸುವುದೇಕೆ?



ಡಿ.ಎಲ್. ಶ್ವೇತಾ, ಹರಪನಹಳ್ಳಿ
ಕುಮಾರಸ್ವಾಮಿ ಇಂದಿನ ಶ್ರವಣ ಕುಮಾರನೇ?
* ಇಲ್ಲ ಉತ್ತರಕುಮಾರ!

ಸಂಚಾಲಿ ಗುರುರಾಜಚಾರ್, ಬಳ್ಳಾರಿ
ಜಗತ್ತಿನಲ್ಲಿ ತೀರಿಸಲಾಗದ ಋಣ ಯಾವುದು?
* "ಮೇಷ್ಟ್ರ"ದ್ದು!

ಶ್ರೀಕ್ಕರ್ ಸಿ. ಕಾಲಿಮಿರ್ಚಿ, ಭಾಗ್ಯನಗರ
ಲಂಕೇಶ್ ಇದ್ದಿದ್ದರೆ ಚಾಮುಂಡೇಶ್ವರಿ ಉಪಚುನಾವಣೆ ಕುರಿತು ಹೇಗೆ ವಿಮರ್ಶಿಸುತ್ತಿದ್ದರು?
* 'ಗೌಡಾಸುರ ಸಂಹಾರ' ನೋಡಿ ಭೇಷ್ ಎನ್ನುತ್ತಿದ್ದರು ಎಂಬುದು ನಮ್ಮ ಗೆಳೆಯರ ಅಭಿಪ್ರಾಯ.

ಎಂ. ಪರಶಿವಮೂರ್ತಿ, ಬೆಂಗಳೂರು
ಆದರ್ಶ ಸತಿ ಅಂದ್ರೆ ಹೆಂಗಿರ್ತಾಳೆ?
* ನಿಮ್ಮ ಹೆಂಡತಿಯ ಮುಂದೆ ಅವಳು ಯಾವ ಲೆಕ್ಕಕ್ಕೂ ಇಲ್ಲ ಬಿಡಿ.



ಎ. ಸಂತೋಷ್, ಕಂಪ್ಲಿ
ಮನುಷ್ಯನಿಗೆ ಕೆಲವೊಮ್ಮೆ ಸಣ್ಣ ಸಣ್ಣ ಸಂಗತಿಗಳೇ ಬದುಕನ್ನು ಸಿಂಗಾರಗೊಳಿಸುವುದ್ಯಾಕೆ?
* "ಚಿಕ್ಕ ಚಿಕ್ಕ ಆಶೆ" ಹಾಡು ಕೇಳಿದ್ದೀರಾ.

ಚಂದ್ರಶೇಖರ್, ಶೋರಾಪೂರ
ಹೆಣ್ಣಿಗೆ ಸಿಂಧೂರ ಚಂದ! ಗಂಡಿಗೆ?
* ಸಿಂಧೂರದ ಅಕ್ಕಪಕ್ಕದಲ್ಲಿರುವುದು ಇದ್ದರೆ ಅಂದ.

ಅಮರಯ್ಯಾಸ್ವಾಮಿ, ಸುರಪೂರ
ನೀರು ತಂಪು ಮಾಡಿದಾಗ ಮಂಜು ಗಡ್ಡೆಯಾಗುತ್ತದೆ. ನೀರೆಯನ್ನು ತಂಪು ಮಾಡಿದರೆ?
* ನಿಮ್ಮ ಜೀವನ ಹಿಮಗಡ್ಡೆ ಆಗುವುದು ಗ್ಯಾರಂಟಿ.

ಪಾರ್ವತಿ ಎಂ.ಎಸ್., ಕುಮಟಾ
ಪಿತಾಮಹ ಭೀಷ್ಮ ತ್ಯಾಗಮಯಿ. ದೇವೇಗೌಡ?
* "ಸ್ವಾರ್ಥ" ಪತಿ?

ಕವಿತಾ ಮಧುಸೂದನ, ದಾವಣಗೆರೆ
ಪೊಲೀಸ್ ಚನ್ನಿಗಪ್ಪನಿಗೂ, ಸಚಿವ ಚನ್ನಿಗಪ್ಪನಿಗೂ ಏನು ವ್ಯತ್ಯಾಸ?
* ಆತ ಪೇದೆ, ಈತ ಪೆದ್ದ.

ಎ.ಎಸ್. ಸ್ವಾಮಿ, ಸುರಪೂರ
ಆಲ್-ಔಟ್ ಆಗೋದ್ಯಾವಾಗ?
* ಆಪರೇಷನ್ ಮಾಡಿಸಿಕೊಂಡಾಗ.

ಅಭಿನಂದನ್ ಎಂ., ಕೊತ್ತತ್ತಿ
ಪ್ರೇಮಕ್ಕಿಂತ ಕಾಮಕ್ಕೆ ಹೆಚ್ಚು ಪ್ರಾಶಸ್ತ್ಯ?
* 'ಪ್ರೇಮಸೂತ್ರ' ಎಂಬ ಮಾರ್ಗದರ್ಶಿ ಪುಸ್ತಕ ಇಲ್ಲದಿರುವುದರಿಂದ.

ಆಸೀಯಾ ಬೇಗಂ, ಮಾನ್ವಿ
ಭಂಡ ಶಾಸಕ ಸಿ.ಟಿ.ರವಿಗೆ ಪುಂಡ ಭಜರಂಗಿಗಳ ಮೇಲೆ ಯಾಕೆ ಪ್ರೀತಿ?
* ಮಂಗಗಳ ತಂಡದ ನಾಯಕ ಆತ.

ದಿ.ಎಸ್. ಪ್ರವೀಣ, ದುಮ್ಮೇನಹಳ್ಳಿ
ಈಗಿನ ಹುಡುಗಿಯರ ಮನಸ್ಸಿಗೂ ಹುಡುಗರ ಮನಸ್ಸಿಗೂ ಯಾವ ವ್ಯತ್ಯಾಸ?
* ಉತ್ತರಕ್ಕಾಗಿ ಈ ವಾರದಿಂದ ಪ್ರಾರಂಭವಾಗುತ್ತಿರುವ 'ಸೀತಾಯಣ' ಓದಿ!

ಕುಬೇರಪ್ಪ ಎಂ. ವಿಭೂತಿ, ಹರಿಹರ
ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನಲು ಗೌಡರಿಗೆ ಮೀಸೆಯೆ ಇಲ್ಲವಲ್ಲ?
* ಅವರ ಪಂಚೆ ಮಣ್ಣು ಮಣ್ಣಾಗಿದೆಯಲ್ಲ, ಅದೇ ಸಾಕು.

ಎಂ. ಶಿವಸ್ವಾಮಿ, ಬೆಂಗಳೂರು
ಅಳು ಹೆಣ್ಣಿಗೆ ಸಹಜ, ಆದರೆ ಗಂಡಿಗೇಕದು?
* ಆತನೂ ಜೀವಂತ ಪ್ರಾಣಿ ಎಂದು ತೋರಿಸಲು.

ಅಂಬುಜಾ, ಶೋರಾಪೂರ
ಹೆಣ್ಣು ಮಾವಿನ ಹಣ್ಣು, ಗಂಡು?
* ಗಿಡದಿಂದ ಕೀಳುವವರೆಗೂ ಹಣ್ಣಾಗದ ಸಪೋಟ ಎನ್ನುವವರಿದ್ದಾರೆ, ನೀವೇನಂತೀರಿ.

ಬಹುಮಾನಿತ ಪ್ರಶ್ನೆ

ಖಾಂದಪಾಶಾ, ದೇವದುರ್ಗ
ಕಾಮ ಕತ್ತಲೆಯನ್ನು ಬಯಸುವುದೇಕೆ?
* ಬೆಳಕಿನಲ್ಲಿ ಅದು ಮಂಕಾಗಿರುತ್ತದೆ.

ಛೀ ತುಂಟಿ!

ಒತ್ತಾಯಕ್ಕವನು ಮಾವನ ಮಗಳನ್ನೇ ಮದುವೆಯಾದ. ಅವಳು ಸ್ವಲ್ಪ ಕಾಲೆಳೆದು ಹಾಕೋಳು. ರಾತ್ರಿಯಿಡೀ 'ನಿಂದೆಲ್ಲ ಸೊಟ್ಟಗೆ' ಅಂತ ಬಯ್ತಾ ಟೈಮ್ ಮಾಡ್ತಿದ್ದ.

ಅವಳಿಗೂ ಕೇಳಿಕೇಳಿ ಸಿಟ್ಟು ಬಂತು. ಒಂದಿನಾ ಅವನು ಹೊಲಕ್ಕೆ ಹೋದ್ಮೇಲೆ ಇವಳು ಕಮ್ಮಾರನ ಹತ್ರ ಹೋದ್ಲು.

ಅವತ್ತು ಗಂಡ ಬಂದು ರಾತ್ರಿ ಅದೇ ರಾಗ ಹಾಡ್ದ. ಅವಳಿಗೆ ತಡೆಯೋಕಾಗ್ಲಿಲ್ಲ.... "ಬೆಳಿಗ್ಗೆ ಕಮ್ಮಾರ ರಿಪೇರಿ ಮಾಡಿದಾಗ ನೆಟ್ಟಗೆ ಇತ್ತಲ್ಲ" ಅಂದ್ಲು. ಅವತ್ತಿಂದ ಸೊಟ್ಟ ಗಿದೆ ಅನ್ನೋದನ್ನ ಬಿಟ್ಟಾಂತ ಮೊನ್ನೆ ಅವಳೇ ಹೇಳಿದ್ಲು.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:


ಇನ್‌ಫೋಸಿಸ್ ಸ್ವರ್ಗದಲ್ಲಿ ಕಟ್ಟಡ ಕಾರ್ಮಿಕರಿಗೆ ಜಾಗ ಸಿಗುವುದು ಯಾವಾಗ?

ಡಿಸೆಂಬರ್ 13ರ ಸಂಚಿಕೆಯ ನಮ್ಮ ಪ್ರಶ್ನೆ: ದೇವೇಗೌಡರ ಮಗನ ಹೆಸರು ಭಕ್ತ ಮಾರ್ಕಂಡೇಯನೋ? ಭಕ್ತ ಪ್ರಹ್ಲಾದನೋ?


ನಿಮ್ಮ ಉತ್ತರ: ಎರಡೂ ಅಲ್ಲ. ಭ್ರಷ್ಟ ಬೀಜಾಸುರ ಗೌಡ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಕೆ.ಶ್ರೀನಿವಾಸ್, ಮಂಡ್ಯ

ಹಾಗೇ ರಾಜೇಂದ್ರನನ್ನು ಅಷ್ಟೊಂದು ಬರ್ಬರವಾಗಿ ಕತ್ತರಿಸಿ ಹಾಕಿದ್ದೇ ಪಿಸರೆ ಉರ್ಫ್ ಬಲರಾಮ ಎಂಬ ಸಂಗತಿ ಅದಾಗಿ ಎಷ್ಟೋ ವರ್ಷಗಳ ನಂತರ ಸಿಸಿಬಿ ಪೊಲೀಸರಿಗೆ ಗೊತ್ತಾಯಿತಾದರೂ ಆ ಹೊತ್ತಿಗೆ ರಾಜೇಂದ್ರನ ಕೊಲೆ ಕೇಸೇ ಬಿದ್ದುಹೋಗಿತ್ತು. ಮಾರ್ಕೆಟ್ ದೇವಿಯೇ ನಿಂತು ರಾಜೇಂದ್ರನ ಪತ್ನಿಗೆ ಧಮಕಿ ಹಾಕಿ ಕೋರ್ಟಿಗೆ ಬಂದು ಸಾಕ್ಷಿ ಹೇಳದಂತೆ ಮಾಡಿದ್ದ!


ಕುಟ್ಟಿ


ಕುಟ್ಟಿ & ರಾಜಾ: ರಕ್ಕಸ ಬ್ರದರ್ಸ್


ರಾಜಾ

ಅದು 2003ರ ಜನವರಿ 25ರ ಸಂಜೆ 7.30ರ ಸಮಯ.

ಆಂಜನಪ್ಪ ಗಾರ್ಡನ್ನಿನ ನ್ಯೂಲೇಔಟ್‌ನ ಮುಖ್ಯ ರಸ್ತೆಯಲ್ಲಿ ಮಾರುತಿ ಕಾರೊಂದರಲ್ಲಿ ತನ್ನ ಪತ್ನಿಯನ್ನು ಪಕ್ಕದಲ್ಲೇ ಕೂಡಿಸಿಕೊಂಡು ಗಂಡ ಡ್ರೈವ್ ಮಾಡುತ್ತಿದ್ದರೆ ಆತನ ಮೂರು ಮಕ್ಕಳು ಹಿಂದಿನ ಸೀಟಿನಲ್ಲಿ ಕೂತಿದ್ದರು. ಇನ್ನೇನು ಆಂಜನಪ್ಪ ಗಾರ್ಡನ್ ಕೊಂಪೆಯನ್ನು ಹೊಕ್ಕಬೇಕೆನ್ನುವಷ್ಟರಲ್ಲಿ ಯಾರೋ ಛಪ್ಪರ್ ಹುಡುಗನೊಬ್ಬ ಸೈಕಲ್ ತಳ್ಳಿಕೊಂಡು ಆ ಕಾರಿಗೆ ಅಡ್ಡಬಂದ. ಕಾರು ನಿಂತಿದ್ದೇ ತಡ ಅದೆಲ್ಲಿದ್ದರೋ; ಸರಿಸುಮಾರು ಐವತ್ತು ಮಂದಿ ಇಡೀ ಕಾರನ್ನು ಮುತ್ತಿಕೊಂಡರು. ಪಕ್ಕದ ಬಿಲ್ಡಿಂಗ್ ಮೇಲಿನಿಂದ ಸೈಜುಗಲ್ಲೊಂದು ಕಾರಿನ ಮೇಲೆ ಬಿದ್ದು ಅದರ ಛಾವಣಿಯನ್ನೇ ಜಜ್ಜಿ ಹಾಕಿತ್ತು. ಗಜಗಾತ್ರದ ದೊಣ್ಣೆಯೊಂದರಿಂದ ಯಾರೋ ಕಾರಿನ ಮುಂದಿನ ಗ್ಲಾಸಿಗೆ ಹೊಡೆದ.

ಅಷ್ಟೇ; ಲಾಂಗು, ರಾಡು, ಹಾಕಿ ಸ್ಟಿಕ್‌ಗಳನ್ನು ಹಿಡಿದಿದ್ದ ದಾಳಿಕೋರರು ಡ್ರೈವರ್ ಸೀಟಿನಲ್ಲಿದ್ದವನನ್ನು ಹೊರಕ್ಕೆಳೆದಿದ್ದೇ ಸತ್ತ ಕೋಳಿಯನ್ನು ಕತ್ತರಿಸುವಂತೆ ಕತ್ತರಿಸಿದ್ದರು!


ಕವಳ

ಅದು ಜೋಪಡಿ ರಾಜೇಂದ್ರನೆಂಬ ತಮಿಳು ರೌಡಿಯ ಬದುಕಿನ ಅಂತಿಮ ಕ್ಷಣ. ಕಾರಿನಲ್ಲಿದ್ದ ತನ್ನ ಮೂರೂ ಮಕ್ಕಳನ್ನು ಸೀಟಿನ ಕೆಳಕ್ಕೆ ನೂಕಿದ ಆತನ ಪತ್ನಿ ಪಳನಿಯಮ್ಮ ಗಂಡನ ಪ್ರಾಣ ಉಳಿಸುವಂತೆ ಪರಿಪರಿಯಾಗಿ ಬೇಡುತ್ತಿದ್ದರೆ, ಆವತ್ತು ದಾಳಿಯ ನೇತೃತ್ವ ವಹಿಸಿದ್ದ ಸಾರಾಯಿ ರಾಣಿ ಮಾಲಾ ಆಕೆಯ ಬೆನ್ನಿಗೆ ಭೀಕರವಾಗಿ ಇರಿದಳು. ರಾಜೇಂದ್ರ 'ಬ್ಯಾಡ್ರೋ, ನನ್ನ ಹೆಂಡ್ತಿ ಮಕ್ಕಳನ್ನು ಮನೆಗೆ ಬಿಟ್ಟು ಬರ್ತೀನಿ. ಆಮೇಲೆ ಬೇಕಿದ್ರೆ ನನ್ನನ್ನ ಚಿಂದಿ ಮಾಡಿ' ಎಂದು ಬೇಡಿಕೊಳ್ಳುತ್ತಿದ್ದದ್ದು ಯಾರಿಗೂ ಕೇಳಿಸಲೇ ಇಲ್ಲ. ಆವತ್ತು ಸಾರಾಯಿ ರಾಣಿ ಮಾಲಾ ಇಡೀ ದಾಳಿಯ ನೇತೃತ್ವ ವಹಿಸಿದ್ದರೆ ಅದಕ್ಕೆ ದಳಪತಿಯಂತಿದ್ದವನು ಆಕೆಯ ತಮ್ಮ ಕದಿರೇಶ. ಕುಮರೇಶ, ಸುರೇಶ, ಶೀನ ಮುಂತಾದವರೆಲ್ಲರೂ ಆಕೆಯ ಜೊತೆಗಿದ್ದರು. ಕಾರಿನಲ್ಲಿದ್ದ ರಾಜೇಂದ್ರನ ಮಗಳ ಕೈಯನ್ನೂ ಕತ್ತರಿಸಿದ್ದರು.

ನಿಮಿಷಾರ್ಧದಲ್ಲೇ ರಾಜೇಂದ್ರ ನೆಲಕ್ಕೆ ಬಿದ್ದು ಹೆಣವಾಗಿದ್ದರೂ ಕದಿರೇಶನ ಗ್ಯಾಂಗ್ ಆತನ ತಲೆ ಮೇಲೆ ಸೈಜುಗಲ್ಲುಗಳನ್ನು ಎತ್ತಿಎತ್ತಿ ಹಾಕುತ್ತಲೇ ಇತ್ತು. ಅದು ಆಂಜನಪ್ಪ ಗಾರ್ಡನ್ನಿನ ಕ್ರೌರ್ಯದ ಪರಮಾವಧಿ. ಪ್ರಾರಂಭದಲ್ಲಿ ಗಾರ್ಡನ್ ಮಣಿಯನ್ನು ಆತನ ಹೆಂಡತಿ ಮಕ್ಕಳ ಮುಂದೇ ಚಾಮನ ಗ್ಯಾಂಗ್ ಕೊಚ್ಚಿ ಹಾಕಿತ್ತು. ಅಲ್ಲೆಮಣಿ ನೆರೆದ ನೂರಾರು ಜನರ ಮುಂದೆ ಮುಬಾರಕ್‌ನ ಇಬ್ಬರು ತಂಗಿಯರನ್ನು ನೆಲಕ್ಕೆ ಕೊಡವಿ ಪೀಡಿಸಿದ್ದ. ಸಾಲದ್ದಕ್ಕೆ ಬೆಂಗಳೂರಿನ ಎರಡೂವರೆ ಡಜನ್ ಹೆಂಗಸರ ಬದುಕಿಗೆ ಕೊಳ್ಳಿಯಿಟ್ಟಿದ್ದ. ಗಾರ್ಡನ್ ದಾಸ್‌ನನ್ನು ಮಾಲಾಳೇ ನಿಂತು ಕೊಲ್ಲಿಸಿದ್ದಳು. ಇದಕ್ಕೂ ಮುನ್ನ ಮತ್ತೊಬ್ಬ ಸಾರಾಯಿ ರಾಣಿ ತಮಿಳ್ ಕುಡಿಯ ಅಕ್ಕ ಭವಾನಿ ಇಪ್ಪತ್ತು ಮಂದಿ ಹುಡುಗರನ್ನು ಕಟ್ಟಿಕೊಂಡು ಕೌನ್ಸಿಲರ್ ಸಂಪಂಗಿಯ ಮನೆಗೆ ನುಗ್ಗಿ ಆತನನ್ನು, ಆತನ ತಮ್ಮನನ್ನು ಕತ್ತರಿಸಿದ್ದಳು. ಈಗ ಜೋಪಡಿ ರಾಜೇಂದ್ರನನ್ನು ಆತನ ಹೆಂಡತಿ ಮಕ್ಕಳ ಎದುರಿಗೇ ಅಮಾನುಷವಾಗಿ ತುಂಡರಿಸಿದ್ದು ಇಡೀ ಬೆಂಗಳೂರಿನ ಕ್ರೈಂ ಜಗತ್ತನ್ನೇ ತಲ್ಲಣಿಸಿದ ಘಟನೆಗಳಾಗಿದ್ದವು.

Of course ರಾಜೇಂದ್ರ, ಕಳ್ಳಭಟ್ಟಿ ರಾಣಿ ಮಾಲಾಳ ಪಾಲಿಗೆ ಸಿಂಹಸ್ವಪ್ನದಂತೆ ಅವತರಿಸಿದ್ದ. ಒಂದಾನೊಂದು ಕಾಲಕ್ಕೆ, ಆಕೆಯ ತಮ್ಮ ಕದಿರೇಶ ಮತ್ತು ರಾಜೇಂದ್ರ ಇಬ್ಬರೂ ಸ್ನೇಹಿತರೆ. ನಡುವೆ ಯಾವುದೋ ಚಿಲ್ಲರೆ ಜಗಳದಲ್ಲಿ ದೂರಾದ ಕದಿರೇಶನಿಗೆ ತಾನು ರಾಜೇಂದ್ರನಿಗಿಂತಲೂ ದೊಡ್ಡ ಹೆಸರು ಮಾಡಬೇಕೆಂಬ ಹುಚ್ಚಿತ್ತು, ಅದೇ ಹೊತ್ತಿಗೆ 1999ರ ಚುನಾವಣೆ ಬಂತು. ರಾಜೇಂದ್ರ ಬಿಜೆಪಿಯ ಶಾಸಕ ಪಿ.ಸಿ. ಮೋಹನ್ ಬೆನ್ನಿಗೆ ನಿಂತರೆ ಕದಿರೇಶ ಕಾಂಗ್ರೆಸ್ಸಿನ ಮಾರ್ಕೆಟ್ ದೇವಿಗೆ ಬಂಟನಾಗಿದ್ದ. ದೇವಿಯ ಆದೇಶದ ಮೇರೆಗೆ ಕದಿರೇಶ ಪಿ.ಸಿ. ಮೋಹನ್ ಎದುರಾಳಿ ಕಾಂಗ್ರೆಸ್ಸಿನ ಸತ್ಯನಾರಾಯಣಸ್ವಾಮಿಯನ್ನು ಬೆಂಬಲಿಸಿದ್ದ. ಆನಂತರ ಬಂದ ಕಾರ್ಪೊರೇಷನ್ ಚುನಾವಣೆಯಂತೂ ಇಬ್ಬರ ನಡುವೆ ಇನ್ನಷ್ಟು ವೈಷಮ್ಯಕ್ಕೆ ಕಾರಣವಾಗಿತ್ತು. ಕದಿರೇಶ ಮಾಜಿ ಕೌನ್ಸಿಲರ್ ಲೀಲಾವತಿಯ ಅಣ್ಣ ಅಣ್ಣಾಡಿಎಂಕೆಯ ಸೂರಿಯನ್ನು ಬೆಂಬಲಿಸಿದರೆ ರಾಜೇಂದ್ರ ಆತನ ವಿರುದ್ಧ ತನ್ನ ಶಿಷ್ಯ ನಾಗರಾಜ್‌ನನ್ನು ಸೈಕಲ್ ಗುರುತಿನಲ್ಲಿ ನಿಲ್ಲಿಸಿ, ಕೊನೆಗೆ ಆತನಿಗೂ ಚಕ್ಮಾ ಕೊಟ್ಟು ಕಾಂಗ್ರೆಸ್ಸಿನ ಸೈಯದ್ ಜಲೀಲ್‌ನನ್ನು ಗೆಲ್ಲಿಸಿಬಿಟ್ಟ.


ಭಟ್ಟಿ ಸಾರಾಯಿಗೋಸ್ಕರ ಬಡಿದಾಡಿಕೊಳ್ಳುತ್ತಿದ್ದ ಆಂಜನಪ್ಪ ಗಾರ್ಡನ್ನಿನ ಘಾತಕಿಗಳು 1999ರ ಚುನಾವಣೆಯಿಂದ ರಾಜಕೀಯವಾಗಿ ಯುದ್ಧಕ್ಕಿಳಿದಿದ್ದರು.

ಈ ಮಧ್ಯೆ ರಾಜೇಂದ್ರ ಮತ್ತು ಕದಿರೇಶನ ನಡುವೆ ಭೀಕರ ರಸ್ತೆ ಕಾಳಗಗಳಾದವು. 1999ರ ಜೂನ್‌ನಲ್ಲಿ ಗಾರ್ಡನ್‌ನ ಫುಟ್‌ಪಾತ್ ಹೋಟೆಲೊಂದರ ಮುಂದೆ ನಿಂತಿದ್ದ ಕದಿರೇಶನ ಮೇಲೆ ರಾಜೇಂದ್ರನ ಗ್ಯಾಂಗ್ ದಾಳಿ ನಡೆಸಿ ಮೈಕೈ ಮುಖವನ್ನೆಲ್ಲ ಕುಯ್ದು ಹಾಕಿತು. ಆಸ್ಪತ್ರೆ ಸೇರಿ ಬದುಕುಳಿದ ಕದಿರೇಶನ ಮೇಲೆ ಇದಾಗಿ ಎರಡೇ ತಿಂಗಳಿಗೆ ರಾಜೇಂದ್ರನ ಗ್ಯಾಂಗ್ ಮತ್ತೊಂದು ಅಟ್ಯಾಕ್ ಮಾಡಿ ಆತ ಟೀವಿ ನೋಡುತ್ತ ಕೂತಿದ್ದ ಗೆಳೆಯನ ಮನೆಯನ್ನೇ ಚಿಂದಿಯೆಬ್ಬಿಸಿತು. ಕದಿರೇಶನೂ ತಿರುಗಿಬಿದ್ದು ರಾಜೇಂದ್ರನ ತಂಡದ ಮೇಲೆ ಪದೇಪದೇ ದಾಳಿ ನಡೆಸಿದ. ಈ ದಾಳಿ, ಮರುದಾಳಿಯಲ್ಲಿ ಕದಿರೇಶನ ಕಡೆಯ ಶೀನ ಎಂಬ ಹುಡುಗ ಮಾರಕವಾಗಿ ಗಾಯಗೊಂಡರೆ, ರಾಜೇಂದ್ರನ ಬಂಟ ರಮೇಶನನ್ನು ಕದಿರೇಶನ ಗ್ಯಾಂಗ್ ಕೊಂದೇ ಹಾಕಿತ್ತು.

ರಿವೇಂಜ್ ಕಿಲ್ಲಿಂಗ್ಸ್ 9


ರಾ. ಸೋಮನಾಥ್

ಈ ಕೇಸಿನಲ್ಲಿ ಎರಡೂ ಕಡೆಯವರು ಜೈಲು ಪಾಲಾಗಿ ಒಂದೆರಡು ತಿಂಗಳಲ್ಲಿ ರಾಜೇಂದ್ರ ಮತ್ತು ಕದಿರೇಶ ಇಬ್ಬರೂ ಜೈಲಿಂದ ಹೊರಬರುತ್ತಿದ್ದಂತೆಯೇ, ಕಾಟನ್‌ಪೇಟೆಯ ಇನ್ಸ್‌ಪೆಕ್ಟರ್ ಯಶವಂತ ಸಾವರ್ಕರ್ ಇಬ್ಬರನ್ನೂ ಕರೆದು ರಾಜಿ ಮಾಡಿಸಿ "ಇನ್ನೇನಾದ್ರೂ ಕಿತ್ತಾಡಿದ್ರೆ, ಇಬ್ಬರನ್ನೂ ಶೂಟ್ ಮಾಡಿ ಕೊಲ್ತೀನಿ" ಎಂದು ಎಚ್ಚರಿಸಿದ್ದರು. ಆವತ್ತು ಇಬ್ಬರೂ ಶೇಕ್ ಹ್ಯಾಂಡ್ ಕೊಟ್ಟುಕೊಂಡೇ ಠಾಣೆಯಿಂದ ಬಂದಿದ್ದರು. ನಂಬಿದ ರಾಜೇಂದ್ರ ನಿರುಮ್ಮಳವಾಗಿ ಪ್ರೇಮ್‌ನ 'ಕರಿಯ' ಚಿತ್ರದ ಶೂಟಿಂಗ್‌ನಲ್ಲಿ ಭಾಗವಹಿಸಿದ್ದ. ಆವತ್ತು ರಾಜೇಂದ್ರನ ಖ್ಯಾತಿಯೇ ಆ ಮಟ್ಟಕ್ಕಿತ್ತು. ಚಿತ್ರ ನಿರ್ದೇಶಕ ಪ್ರೇಮ್ ದರ್ಶನ್‌ನ ಕರಿಯ ಚಿತ್ರಕ್ಕೆ ಬೆಂಗಳೂರಿನ 23 ಮಂದಿ ಕುಖ್ಯಾತ ರೌಡಿಗಳನ್ನು ಹಾಕಿಕೊಂಡಿದ್ದ. ಅಷ್ಟೂ ಮಂದಿ ರೌಡಿಗಳ ಮಧ್ಯೆ ಶೂಟಿಂಗ್‌ನಲ್ಲಿ ಭಾಗವಹಿಸಿದ್ದ ರಾಜೇಂದ್ರ, ಪೊಲೀಸರೆದುರು ಕದಿರೇಶ ರಾಜಿಯಾಗಿದ್ದನ್ನು ನಂಬಿ ಅಂತಿಮವಾಗಿ ತನ್ನ ಹೆಂಡತಿ ಮಕ್ಕಳ ಕಣ್ಣೆದುರಲ್ಲೇ ಹೆಣವಾಗಿ ಹೋದ.


ಮಾರ್ಕೆಟ್ ದೇವಿ

ಆದರೆ ಯಾರ ಗಮನಕ್ಕೂ ಬಾರದ ಸಂಗತಿಯೊಂದಿತ್ತು. ಅದು ಕದಿರೇಶನಿಗೂ ಕಲಾಪಿಪಾಳ್ಯದ ಮತ್ತೊಬ್ಬ ರೌಡಿ ಮಾರ್ಕೆಟ್ ವೇದಿಗೂ ಏರ್ಪಟ್ಟ ನಿಗೂಢ ಸಂಬಂಧ. ಆ ಹೊತ್ತಿಗೆ ವೇದಿ ಬೆಕ್ಕಿನ್‌ಕಣ್ ರಾಜೇಂದ್ರನ ಹಂತಕ ಸುನೀಲನ ಬಲಗೈ ಬಂಟ. ಸುನೀಲನ ತಂಡದಲ್ಲಿದ್ದ ಅಪಾಯಕಾರಿ ಹಂತಕ ಬಲರಾಮ ಉರ್ಫ್ ಪಿಸರೆ ಕೂಡ ಆವತ್ತಿನ ರಾಜೇಂದ್ರನ ಹತ್ಯೆಯಲ್ಲಿ ಕೈಜೋಡಿಸಿದ್ದ.


ಹಾಗೇ ರಾಜೇಂದ್ರನನ್ನು ಅಷ್ಟೊಂದು ಬರ್ಬರವಾಗಿ ಕತ್ತರಿಸಿ ಹಾಕಿದ್ದೇ ಪಿಸರೆ ಉರ್ಫ್ ಬಲರಾಮ ಎಂಬ ಸಂಗತಿ ಅದಾಗಿ ಎಷ್ಟೋ ವರ್ಷಗಳ ನಂತರ ಸಿಸಿಬಿ ಪೊಲೀಸರಿಗೆ ಗೊತ್ತಾಯಿತಾದರೂ ಆ ಹೊತ್ತಿಗೆ ರಾಜೇಂದ್ರನ ಕೊಲೆ ಕೇಸೇ ಬಿದ್ದುಹೋಗಿತ್ತು. ಮಾರ್ಕೆಟ್ ದೇವಿಯೇ ನಿಂತು ರಾಜೇಂದ್ರನ ಪತ್ನಿಗೆ ಧಮಕಿ ಹಾಕಿ ಕೋರ್ಟಿಗೆ ಬಂದು ಸಾಕ್ಷಿ ಹೇಳದಂತೆ ಮಾಡಿದ್ದ!


ದೀಡಿ ರವಿ

ಮುಂದೆ ರಾಜೇಂದ್ರನ ಶಿಷ್ಯರಾರೂ ಕದಿರೇಶನ ವಿರುದ್ಧವಾಗಲಿ ಆತನ ಅಕ್ಕ ಸಾರಾಯಿ ರಾಣಿ ಮಾಲಾ ವಿರುದ್ಧವಾಗಲಿ ಹಗೆ ಸಾಧಿಸುವಷ್ಟು ಶಕ್ತರಾಗಲೇ ಇಲ್ಲ. ಅಲ್ಲಿಗೆ ಕಳ್ಳಭಟ್ಟಿ ರಾಣಿಯರಿಬ್ಬರ ಸಾರಾಯಿ ಸಾಮ್ರಾಜ್ಯ ಅಭಾದಿತವಾಯಿತಾದರೂ ಅದಕ್ಕೆ ಪರ್ಯಾಯವಾಗಿ ಈ ಎರಡೂ ಗ್ಯಾಂಗ್‌ಗಳಿಗಿಂತ ಪ್ರಬಲ ರೌಡಿ ಗ್ಯಾಂಗೊಂದು ಆಂಜನಪ್ಪ ಗಾರ್ಡನ್ನಿನಲ್ಲಿ ತಲೆ ಎತ್ತಿತ್ತು. ಅದು ಹಾಲಿ ಬೆಂಗಳೂರಿನ ಅತ್ಯಂತ ಕುಖ್ಯಾತ ಮತ್ತು ಸಶಕ್ತ ರೌಡಿಪಡೆಯಾದ ಕುಟ್ಟಿ-ರಾಜಾ ಎಂಬ ಖತರ್‌ನಾಕ್ ಸಹೋದರರ ರಕ್ಕಸ ಪಡೆ.

ಇದೇ ಆಂಜನಪ್ಪ ಗಾರ್ಡನ್ನಿನ ಸಿದ್ಧಾರ್ಥ ನಗರ ಸ್ಲಮ್ಮಿನ ಮುನಿಸ್ವಾಮಿ ಎಂಬ ಸ್ಕ್ರಾಪ್ ಕಳ್ಳನ ಮಕ್ಕಳಾದ ಕುಟ್ಟಿ ಮತ್ತು ರಾಜಾ ಕೂಡ ಪ್ರಾರಂಭದಲ್ಲಿ ಅಪ್ಪನಂತೆ ಕಬ್ಬಿಣ ಕದ್ದು ಮಾರುತ್ತಿದ್ದರು. ಕ್ರಮೇಣ ರಾಬರಿಗಿಳಿದರು. ಮೀಸೆ ಮೊಳೆಯುವ ಹೊತ್ತಿಗೇ ಏರಿಯಾದ ರೌಡಿ ಚಾಮನ ಜೊತೆ ಸೇರಿ ಗಾರ್ಡನ್ ಮಣಿ ಕೊಲೆ ಕೇಸಿನಲ್ಲಿ ಜೈಲು ಕಂಡರು. ತಿದ್ದಬೇಕಿದ್ದ ಜೈಲು ಅವರನ್ನು ಮತ್ತಷ್ಟು ಪಾಪಿಗಳನ್ನಾಗಿ ರೂಪಿಸಿತ್ತು. ಹೊರಬರುತ್ತಿದ್ದಂತೆ ಡೆಡ್ಲಿ ಸೋಮನ ಶಿಷ್ಯ ಕವಳ ಜೊತೆಯಾದ. ಆತನ ಮೂಲಕ ಪರಿಚಯವಾದವನು ವಿವೇಕನಗರದ ನಟೋರಿಯಸ್ ಪಾತಕಿ ಮತ್ತು ಬ್ಯಾಂಕ್ ವಂಚಕ ದೀಡಿ ರವಿ.

ಮೊದಮೊದಲು ಕುಟ್ಟಿ-ರಾಜಾ ಎಂದರೆ ಅದು ಒಬ್ಬನೇ ರೌಡಿಯ ಹೆಸರೆಂದು ಪೊಲೀಸರು ಭಾವಿಸಿದ್ದರು. ಈ ಪೈಕಿ ಕುಟ್ಟಿಯ ಹೆಸರು ತಿರುಕುಮಾರ್. ಈತನ ಅಣ್ಣ ರಾಜನ ಹುಟ್ಟು ಹೆಸರು ತಿರುಮಾರನ್. 1994ರಲ್ಲಿ ಬಾಲ್ಡ್‌ವಿನ್ ಸ್ಕೂಲಿಗೆ ತನ್ನ ಮಗಳನ್ನು ಬಿಡಲೆಂದು ಬಂದಿದ್ದ ತ್ಯಾಗರಾಜನಗರದ ಫೈನಾನ್ಸಿಯರ್ ಒಬ್ಬನನ್ನು ಆತನ ಕಾರಿನ ಸಮೇತ ಅಪಹರಿಸಿದ ಕುಟ್ಟಿ-ರಾಜ ಬರ್ಬರವಾಗಿ ಕೊಂದು ಹಾಕಿದ್ದರು. ಆದಾಗಿ ಎರಡೇ ತಿಂಗಳಿಗೆ ಭಾರತಿನಗರದಲ್ಲೊಂದು ಮರ್ಡರ್ ಮಾಡಿ ತಮಿಳುನಾಡಿಗೆ ಪರಾರಿಯಾದರು. ಹಾಗೇ ಎಸ್ಕೇಪಾಗಿದ್ದೇ


ಪಿ.ಸಿ. ಮೋಹನ್

ರಾಮಮೂರ್ತಿನಗರದ ವಿಜಯೇಂದ್ರ ಎಂಬ ... ತರಗತಿಯ ಬಾಲಕನೊಬ್ಬನನ್ನು ಅಪಹರಿಸಿ ... ಶ್ರೀಮಂತ ತಂದೆಗೆ ಐವತ್ತು ಲಕ್ಷ ಕೊಡು ... ಫೋನ್ ಮಾಡಿದ್ದಾರೆ. ಬಹುಶಃ ಹುಡುಗ ಬ... ಹೆಚ್ಚೂಕಮ್ಮಿ ದುಡ್ಡು ಸಿಗುತ್ತಿತ್ತೇನೊ. ಆದರೆ ಹೊ... ವಾಗಲೇ ಬಾಲಕ ವಿಜಯೇಂದ್ರ ಸಿಕ್ಕಾಪಟ್ಟೆ ... ಮಾಡಿಬಿಟ್ಟ. ಬದುಕಿಬಿಟ್ಟರೆ ಎಲ್ಲಿ ... ಗುರುತಿಸುತ್ತಾನೋ ಎಂದು ಸದ್ದಿಲ್ಲದೇ ಆತನನ್ನು ... ಹೊಸೂರು ರಸ್ತೆಯ ಹುಳಿಮಾವು ಕೆರೆಗೆ ... ನಾಪತ್ತೆಯಾಗಿದ್ದರು ಕುಟ್ಟಿ-ರಾಜಾ.

ಬಾಲಕ ವಿಜಯೇಂದ್ರನ ಅಪಹರಣ ... ಕೊಲೆಯಿಂದ ಪೊಲೀಸರು ಅದೆಷ್ಟು ಕಂಗಾಲಾ... ಇದೊಂದೇ ಕೃತ್ಯದ ಜಾಡು ಹಿಡಿದು ಬೆಂ... ಸಿಸಿಬಿ ಸೇರಿದಂತೆ ಒಟ್ಟೂ ಹನ್ನೆರಡು ... ತಂಡಗಳು ಆರು ತಿಂಗಳುಗಳ ಕಾಲ ... ಅಲೆದು ಸುಸ್ತೆದ್ದವು. ಅಂತಿಮವಾಗಿ ಕುಟ... ಸಿಕ್ಕಿಬಿದ್ದದ್ದು ಆಗ ಉಪ್ಪಾರಪೇಟೆಗೆ ಸ... ಪೆಕ್ಟರ್ ಆಗಿದ್ದ ಎಸ್.ಕೆ. ಉಮೇಶ... ಏನೆಲ್ಲಾ ವಿದ್ಯೆ ಪ್ರಯೋಗಿಸಿದರೂ. ಕುಟ... ಬಾಯಿಬಿಡಲೇ ಇಲ್ಲ. ಕ... ವಿಜಯೇಂದ್ರನ ಕಿಡ್ನಾಪ್... ಮರ್ಡರ್ ನಿಗೂಢವಾ... ಉಳಿಯಿತು.

ಯಾವತ್ತು ಡೆಡ್ಲಿ ಸೋಮನ ಶಿಷ್ಯ ಕವಳ ಜೊ... ದನೋ ಕುಟ್ಟಿ-ರಾಜಾ ಹೆಸರಿಗೆ ವಿಚಿತ್ರ ನ... ಯೊಂದು ಪ್ರಾಪ್ತಿಯಾಯಿತು. ಆ ಹೊತ್ತಿ... ವಿವೇಕ್‌ನಗರದ ಪಾತಕಿ ದೀಡಿ ರವಿ ನಕಲಿ ದೀ... ಮಾಡಿ ಬ್ಯಾಂಕುಗಳಿಗೆ ಕೋಟ್ಯಂತರ ರೂಪಾಯಿ ... ವಂಚಿಸಲಾರಂಭಿಸಿದ್ದ. ಅದು ದೊಮ್ಮಲೂರಿನ ... ರೌಡಿ ಷಣ್ಮುಗನಿಗೆ ಗೊತ್ತಾಗಿ ಆತ ದುಡ್ಡಿಗಾ... ಪದೇ ದೀಡಿ ರವಿಯನ್ನು ಪೀಡಿಸುತ್ತಿದ್ದ. ಪಾಖಂ... ರವಿ ಕೇಳಬೇಕೆ? ತನ್ನ ತಮ್ಮ ಉಮಾಶಂಕರ... ಕುಟ್ಟಿ-ರಾಜಾರನ್ನು ಜೊತೆ ಮಾಡಿ ಷಣ್ಮುಗನಿಗೆ ಮ... ನಿಗದಿ ಮಾಡಿಯೇ ಊರು ಬಿಟ್ಟ. ದುಡ್ಡು ಕೊಡು... ದೀಡಿ ರವಿ ಕರೆದಿದ್ದನ್ನೇ ನಂಬಿ ಬಂದ ಷಣ್ಮು... ವಾಪಸ್ಸಾಗಿದ್ದು ಹೆಣವಾಗಿ. ಷಣ್ಮುಗನ ಕೊಲೆ ... ಜೈಲು ಸೇರುವ ಹೊತ್ತಿಗಾಗಲೇ ಕುಟ್ಟಿ-ರಾಜಾ ... ಭಾರತಿನಗರದ ಕೊಲೆ ಕೇಸಿನಲ್ಲಿ ಕೋರ್ಟು ಜೀ... ಶಿಕ್ಷೆ ವಿಧಿಸಿತ್ತು. ಅದರ ವಿರುದ್ಧ ಹೈಕೋರ್ಟಿಗೆ ... ಹೋದವರು ಕ್ರಮೇಣ ಹಳೇ ರೌಡಿ ಚಾಮನ... ಸೇರಿ ಜೆಡಿಎಸ್ ನಾಯಕ ಕುಮಾರಸ್ವಾ... ಬಾಡಿಗಾರ್ಡ್‌ಗಳಂತೆ ಓಡಾಡಿಕೊಂಡಿದ್ದು ... ಗಾರ್ಡನ್ನನ್ನೇ ತೊರೆದು ಕಮ್ಮನಹಳ್ಳಿಯ ಕಲ್ಯಾ... ಬಂದು ಬಂಗಲೆ ಕಟ್ಟಿಸಿಕೊಂಡರು.

ಇಲ್ಲಿಗೆ ವರ್ಷದ ಹಿಂದೆ ಟ್ಯಾನರಿ ರಸ್ತೆಯ ... ಸಮಾಜ ಪಕ್ಷದ ನಾಯಕ ಸತ್ತಿವೇಲು ಹತ್ಯೆಯಲ್ಲಿ ... ಇದೇ ಕುಟ್ಟಿ-ರಾಜಾ. ಫ್ರೇಜರ್ ಟೌನ್‌ನ ಕೇಬಲ್ ... ಶ್ರೀಧರನೇ ಈ ದೈತ್ಯ ಸಹೋದರರ ನೆರವಿಗೆ ... ಸಾಲದ್ದಕ್ಕೆ ಆಂಜನಪ್ಪ ಗಾರ್ಡನ್ನಿನ ಕದಿರೇಶ, ... ರಾಣಿ ತಮಿಳ್ ಕುಡಿಯ ತಮ್ಮ ರೌಡಿ ಗುಪ್ತ... ರೌಡಿ ಚಾಮ, ಮತ್ತೊಬ್ಬ ರೌಡಿ ... ಮುಂತಾದವರೆಲ್ಲರೂ ಕುಟ್ಟಿ-... ಬ್ರದರ್‌ಗಳ ನೆರಳಿಗೇ ಬಂದರು. ಸದ್ಯ ... ಗಾರ್ಡನ್ನಿನ ಅಷ್ಟೂ ರೌಡಿಗಳ ... ಕಚ್ಚಾಟವಿಲ್ಲ ನಿಜ. ಹಾಗಂತ ಬೆಂ... ನೆಮ್ಮದಿಯಿಂದೇನಲ್ಲ. ಈ ಅಷ್ಟೂ ... ರೌಡಿಗಳು ಈಗ ತಮ್ಮತಮ್ಮಲ್ಲೇ ... ನಿಲ್ಲಿಸಿ ಬೇರೆಬೇರೆ ಏರಿಯಾಗಳ ... ಕೈಯಿಟ್ಟಿದ್ದಾರೆ ಮತ್ತು ಲ್ಯಾಂಡ್ ... ನಿಂತಿದ್ದಾರೆ. ಮುಂದೊಮ್ಮೆ ಬೆಂ... ನೆಮ್ಮದಿಗೆ ದೊಡ್ಡ ಅಪಾಯ ಅಂತಿದ್ದ... ಆಂಜನಪ್ಪ ಗಾರ್ಡನ್ನಿನ ರೌಡಿಗಳೇ....1

(ಮುಂದುವರೆಯು...

ಮಾರ್ಗದರ್ಶಿ ಚಿಟ್ ಫಂಡ್ ಮುಳುಗಿತಾ?

ಮಾರ್ಗದರ್ಶಿ ಚೀಟಿ ಕಂಪನಿ ಮಾರ್ಗ ತಪ್ಪುತ್ತಿದೆಯಾ?

ರಿಸರ್ವ್ ಬ್ಯಾಂಕಿನ ನಿಯಮ ಉಲ್ಲಂಘಿಸಿ ಸಿಕ್ಕಿಬಿದ್ದಿದೆಯಾ?

ಹೌದು....!

ಆಂಧ್ರ, ಕರ್ನಾಟಕ, ತಮಿಳು ನಾಡಿನಲ್ಲೆಲ್ಲಾ ಸಾವಿರಾರು ಕೋಟಿ ಲೆಕ್ಕದಲ್ಲಿ ಚೀಟಿ ವ್ಯವಹಾರ ನಡೆಸುತ್ತಿರುವ ಮಾರ್ಗದರ್ಶಿ ವಿರುದ್ಧ ಆಂಧ್ರ ಸರ್ಕಾರ ಈಗ ಜಗಳಕ್ಕೆ ಬಿದ್ದಿದೆ.

'ಮಾರ್ಗದರ್ಶಿ ಚಿಟ್ ಫಂಡ್ ಕಂಪನಿಗೆ ಕನಿಷ್ಠ 1 ಸಾವಿರ ಕೋಟಿ ರೂಪಾಯಿ ಲಾಸ್ ಆಗಿದೆ.'

'ಮಾರ್ಗದರ್ಶಿ ಚಿಟ್ ಫಂಡ್ ಕಂಪನಿ ರಿಸರ್ವ್ ಬ್ಯಾಂಕ್ ನೀತಿಗಳನ್ನು ಉಲ್ಲಂಘಿಸುತ್ತಿದೆ'


ರಾಮೋಜಿರಾವ್

ಎಂದು ಅಲ್ಲಿನ ಕಾಂಗ್ರೆಸ್ ಸಂಸದರು ಬೀದಿ ಜಗಳಕ್ಕೆ ನಿಂತು ಬಿಟ್ಟಿದ್ದಾರೆ. ಮಾರ್ಗದರ್ಶಿಯ ತಂದೆಯೂ ಈನಾಡು ಡೈಲಿ, ಈಟೀವಿ, ರಾಮೋಜಿ ಫಿಲಂ ಸಿಟಿ, ಪ್ರಿಯಾ ಉಪ್ಪಿನಕಾಯಿಗಳ ತಯಾರಕನೂ ಆಗಿರುವ ವಯೋವೃದ್ಧ ಮಾಲೀಕ ರಾಮೋಜಿ ರಾವ್ ವಿರುದ್ಧ ಸ್ವತಃ ಆಂಧ್ರ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯೇ ತೊಡೆ ತಟ್ಟಿಕೊಂಡು ಕುಸ್ತಿಗಿಳಿದು ಬಿಟ್ಟಿದ್ದಾನೆ.

ಈ ಕದನ ಇವತ್ತು ಯಾವ ಹಂತಕ್ಕೆ ಹೋಗಿದೆ ಗೊತ್ತೆ? ರಾಮೋಜಿ ಫಿಲಂ ಸಿಟಿ ಕದ್ದುಕೊಂಡಿರುವ 2 ಸಾವಿರ ಎಕರೆ ಜಮೀನನ್ನು ವಾಪಸ್ ಕಿತ್ತುಕೊಳ್ಳಲು ಸ್ವತಃ ಸಿಎಂ ವೈಎಸ್‌ಆರ್ ತನ್ನ 600 ಚಿಲ್ಲರೆ ಎಕರೆ ಜಮೀನನ್ನು ಸರ್ಕಾರಕ್ಕೆ ಬರೆದುಕೊಟ್ಟುಬಿಟ್ಟಿದ್ದಾನೆ. "ಭೂಮಿತಿ ಕಾಯ್ದೆ ಪ್ರಕಾರ ನನಗಿದ್ದ ಹೆಚ್ಚುವರಿ ಜಮೀನನ್ನು ಸರ್ಕಾರಕ್ಕೆ ವಾಪಸ್ ಕೊಟ್ಟಿದ್ದೀನಿ, ಏಯ್ ರಾಮೋಜಿ.... ನೀನು ಫಿಲಂ ಸಿಟಿ ಹೆಸರಲ್ಲಿ ಕಬಳಿಸಿರುವ ಸರ್ಕಾರದ 2 ಸಾವಿರ ಎಕರೆ ಜಮೀನನ್ನು ಈಗ ಬಿಟ್ಟುಕೊಡು" ಎಂದು ಬಹಿರಂಗ ಸವಾಲು ಹಾಕಿದ್ದಾನೆ ರಾಜಶೇಖರ ರೆಡ್ಡಿ.

ಥೇಟ್ ತೆಲುಗು ಸಿನಿಮಾದ ಘಟನೆಗಳಂತೆ ನಡೆಯುತ್ತಿರುವ ಈ ಜಗಳದ ಹಿಂದೆ ಪರಂಪರಾನುಗತ ಕಾಂಗ್ರೆಸ್-ತೆಲುಗು ದೇಶಂ ವೈರತ್ವವಿರುವುದು ನಿಜ.


ಆದರೆ ಈ ಜಗಳ ಬರೀ ಆಂಧ್ರದ ಜನರ ಮೇಲೆ ಮಾತ್ರ ಪರಿಣಾಮ ಬೀರುವುದಿಲ್ಲ. ಮಾರ್ಗದರ್ಶಿಗೆ ಕರ್ನಾಟಕದಲ್ಲೂ 18 ಶಾಖೆಗಳಿವೆ. ಬೆಂಗಳೂರು, ಮೈಸೂರು, ಶಿವಮೊಗ್ಗ ಮುಂತಾದೆಡೆ ಸಾವಿರಾರು ಜನ ಮಾರ್ಗದರ್ಶಿಗೆ ಕೋಟಿಗಟ್ಟಲೆ ದುಡ್ಡು ಕಟ್ಟುತ್ತಿದ್ದಾರೆ. ಈ ಹಣ ಉಳಿಯುತ್ತಾ, ವಾಪಸ್ ಬರುತ್ತದಾ ಎಂಬುದನ್ನಾದರೂ ಠೇವಣಿದಾರರು ತಿಳಿದುಕೊಳ್ಳಬೇಕು ತಾನೆ?

ಈ ಮಾತು ಈಗ ಯಾಕೆಂದರೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇತ್ತೀಚೆಗೆ ಒಂದು ಆದೇಶ ಹೊರಡಿಸಿ 'ಮಾರ್ಗದರ್ಶಿ' ಜನರಿಂದ ಡಿಪಾಸಿಟ್ ಹಣ ಪಡೆಯಕೂಡದೆಂದು ಆದೇಶ ಕೊಟ್ಟಿದೆ. ರಿಸರ್ವ್ ಬ್ಯಾಂಕ್ ಕಾಂಗ್ರೆಸ್ ಅಥವಾ ತೆಲುಗು ದೇಶಂನ ಅಂಗ ಸಂಸ್ಥೆಯಲ್ಲ. ಚೀಟಿ ವ್ಯವಹಾರ, ಖಾಸಗಿ ಬ್ಯಾಂಕು, ಲೇವಾದೇವಿ ಕುರಿತಂತೆ ಬ್ಯಾಂಕು ಕೆಲವು ನಿಯಮಗಳನ್ನು ರೂಪಿಸಿದೆ. ಅಂದಾಜು ಮೂರು ಲಕ್ಷ ಚಿಲ್ಲರೆ ಚೀಟಿದಾರರನ್ನು ಹೊಂದಿರುವ ವಾರ್ಷಿಕ 3 ಸಾವಿರ ಕೋಟಿ ರೂಪಾಯಿ ಟರ್ನ್ ಓವರ್ ನಡೆಸುತ್ತಿರುವ ಮಾರ್ಗದರ್ಶಿ ರಿಸರ್ವ್ ಬ್ಯಾಂಕ್‌ನ ಕೆಲ ನಿಯಮಗಳನ್ನು ಪಾಲಿಸುತ್ತಿಲ್ಲ ಎಂಬುದು ಈಗ ಸಾಬೀತಾಗಿದೆ.

ಕಾಂಗ್ರೆಸ್‌ನವರು ಈಗ ಬೊಂಬಡ ಬಜಾಯಿಸುತ್ತಿರುವುದು ಈ ದೋಷ ಪತ್ತೆ ಹಚ್ಚಿಯೆ! ಸಾಕ್ಷಾತ್ ರಿಸರ್ವ್ ಬ್ಯಾಂಕ್ 'ಮಾರ್ಗದರ್ಶಿ'ಯ ಹಣ ಹರಿದಾಡುತ್ತಿರುವ ಮಾರ್ಗಗಳನ್ನು ಬಂದ್ ಮಾಡುವ ಆದೇಶ ಕೊಟ್ಟಿರುವುದೂ ಇದೇ ಕಾರಣಕ್ಕೇನೆ!!

ನಿಯಮಾನುಸಾರ ನೋಂದಾಯಿತ ಕಂಪನಿಯಲ್ಲ


ಮಾರ್ಗದರ್ಶಿ ವಿರುದ್ಧದ ರಿಸರ್ವ್ ಬ್ಯಾಂಕಿನ ಮುಖ್ಯ ಆರೋಪವಿದು. 1962 ರಲ್ಲಿ ಹಿಮಾಯತ್ ನಗರದಲ್ಲಿ ಇಬ್ಬರು ನೌಕರರೊಂದಿಗೆ ಬಾಡಿಗೆ ಕಟ್ಟಡದಲ್ಲಿ ರಾಮೋಜಿರಾವ್‌ರಿಂದ ಶುರುವಾದ ಮಾರ್ಗದರ್ಶಿ ಈಗ ಎಷ್ಟು ಬೆಳೆದಿದೆಯೆಂದರೆ ಅದಕ್ಕೆ ಆಂಧ್ರ, ಕರ್ನಾಟಕ, ತಮಿಳುನಾಡು ಸೇರಿದಂತೆ 120 ಶಾಖೆಗಳಿವೆ. 2300 ನೌಕರರು, 25,000 ಏಜೆಂಟರೂ, ಹಣ ಕಟ್ಟುವ ಮೂರು ಲಕ್ಷ ಚೀಟಿದಾರರಿದ್ದಾರೆ. 10 ಸಾವಿರದ ಚೀಟಿಯಿಂದ ಆರಂಭಿಸಿ 25 ಲಕ್ಷದ ಚೀಟಿಗಳೂ ಇವೆ. ಒಂದು ಚೀಟಿ ಕೂಗಿದವನಿಗೆ ಹಾಗೆ ಕೂಗಿದ 72 ಗಂಟೆಗಳಲ್ಲಿ ಹಣ ಗ್ಯಾರಂಟಿಯಾಗಿ ಸಿಗುತ್ತದೆ. ನಿಗದಿತ ಅವಧಿಯೊಳಗೆ ಬಂದು ಚೀಟಿ ಹಣ ಪಡೆಯದಿದ್ದರೆ ಅಷ್ಟೂ ದುಡ್ಡನ್ನು ಪ್ರತ್ಯೇಕವಾಗಿ ಬ್ಯಾಂಕಿನಲ್ಲಿರಿಸಿ ಸೇಫ್ ಮಾಡುತ್ತಿದೆ ಮಾರ್ಗದರ್ಶಿ. ಇದನ್ನೆಲ್ಲಾ ವ್ಯವಸ್ಥಿತವಾಗಿ ನೋಡಿಕೊಳ್ಳಲು ಶೈಲಜಾ ಕಿರಣ್ ಎಂಬಾಕೆ ಇದ್ದಾಳೆ.


ರಾಜಶೇಖರ ರೆಡ್ಡಿ

ಹೀಗೆ ವ್ಯವಹಾರಿಕತೆ, ದಕ್ಷತೆ, ಸಮಯಪಾಲನೆ ಮಾಡುತ್ತಾ ಲಕ್ಷಾಂತರ ಜನರ ನಂಬಿಕೆ ಬೆಳೆಸಿಕೊಂಡಿರುವ ಮಾರ್ಗದರ್ಶಿಗೆ ಪ್ರತಿ ಚೀಟಿ ವ್ಯವಹಾರದಲ್ಲೂ ಸಿಗುವ ಕಮಿಷನ್ 5% ನಷ್ಟು ಇದೆಲ್ಲಾ ಓಕೆ!

ಆದರೆ ಸಮಸ್ಯೆ ಯಾಕೆ ಗೊತ್ತೆ?

ಒಂದು ಚೀಟಿ ಕಂಪನಿಯಾಗಿರುವ ಮಾರ್ಗದರ್ಶಿಯ ಮಾಲೀಕತ್ವ ಈಗಲೂ ಕಂಪನಿ ನಿಯಮದ ಪ್ರಕಾರ ನೋಂದಣಿಯಾಗಿರದ 'ಅವಿಭಜಿತ ಹಿಂದೂ ಕುಟುಂಬದ 'ಒಡೆತನದಲ್ಲಿರುವುದು'! (unin-corporated entity owned by a undivided Hindu family) ಅಷ್ಟೇ ಅಲ್ಲ ರಿಸರ್ವ್ ಬ್ಯಾಂಕಿನ ಅನುಮತಿ ಪಡೆಯದೆ ಮಾರ್ಗದರ್ಶಿ ಚಂದಾದಾರರಿಂದ ಡಿಪಾಸಿಟ್ ಸಂಗ್ರಹಿಸಿ ಹಣವನ್ನೂ ಸೇರಿಸಿ ರಿಯಲ್ ಎಸ್ಟೇಟ್, ಈನಾಡು ಪತ್ರಿಕೆ, ಈಟಿವಿ, ಗಾರ್ಮೆಂಟ್ಸ್ ತಯಾರಿಕೆ- ಹೀಗೆ ನಾನಾ 'ಮಾರ್ಗ'ಗಳಲ್ಲಿ ಹರಿಸಲಾಗುತ್ತಿದೆ.



ಬಿಳಿದಾಳಿ ಈಶ

ರಿಸರ್ವ್ ಬ್ಯಾಂಕ್ ಕೊಕ್ಕೆ ಹಾಕಿರುವುದು ಈ ಕಾಯ್ದೆಬಾಹಿರ ಕೆಲಸಗಳ ಬಗ್ಗೆ. ತನ್ನ ಚೀಟಿದಾರರ ಒಪ್ಪಿಗೆ ಪಡೆದೇ ತಾನು ಈ ವ್ಯವಹಾರ ನಡೆಸುತ್ತಿರುವುದಾಗಿ ರಾಮೋಜಿ ರಾವ್ ಹೇಳುತ್ತಿದ್ದಾನೆ. ಆದರೆ ಅಷ್ಟು ಸಾಲದು ನನ್ನ ಒಪ್ಪಿಗೆ ಇರದೇ ಮಾರ್ಗದರ್ಶಿ ಹೀಗೆ ಮಾಡುವಂತಿಲ್ಲ ಎನ್ನುತ್ತಿದೆ ರಿಸರ್ವ್ ಬ್ಯಾಂಕ್.

ಮಾರ್ಗದರ್ಶಿ ಎಷ್ಟೇ ಖ್ಯಾತ, ದಕ್ಷ ಚೀಟಿ ಕಂಪನಿ ಇರಬಹುದು. ಆದರೆ ಕಾಯ್ದೆ ಪಾಲನೆ ಮಾಡದಿರುವುದು ತಪ್ಪು ತಾನೆ?

ಆಂಧ್ರದಲ್ಲಿ ಈ ಜಗಳ ದಿನೇದಿನೇ ತಾರಕಕ್ಕೇರುತ್ತಿದೆ. ಮೊನ್ನೆ ತಾನೆ ಕಡಪ ನಗರದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಮಾರ್ಗದರ್ಶಿ ಕಚೇರಿ ಎದುರು ಪ್ರತಿಭಟಿಸಿ ರಾಮೋಜಿರಾಯನ ಪ್ರತಿಕೃತಿ ಸುಟ್ಟಿದ್ದಾರೆ. ಆಂಧ್ರ ಸರ್ಕಾರದ ಕ್ಯಾಬಿನೆಟ್ ಉಪ ಸಮಿತಿ ಮಾರ್ಗದರ್ಶಿ ಬಗ್ಗೆ ತನಿಖೆ ಮಾಡಿ ಅದರ ಚೀಟಿ ಕಮಿಷನ್ ಮೊತ್ತವನ್ನು 5% ನಿಂದ 2%ಗೆ ಇಳಿಸಬೇಕೆಂದು ಶಿಫಾರಸ್ಸು ಮಾಡಿದೆ. ಅಲ್ಲಿಗೆ ರಾಮೋಜಿರಾಯನ ಆದಾಯಕ್ಕೆ ಸ್ವಲ್ಪ ಕತ್ತರಿ ಬಿದ್ದಂತಾಯಿತು. ಈಗ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ರಾಮೋಜಿ ಸಿಟಿಯ 2 ಸಾವಿರ ಎಕರೆ ಜಮೀನು ಕಿತ್ತುಕೊಳ್ಳಲು ಹೊರಟಿದ್ದಾನೆ. ನಿಜ ಸಂಗತಿ ಏನೆಂದರೆ ರಾಮೋಜಿರಾಯನಿಗೆ ಆ ಜಮೀನಿನ ಮೇಲೆ ಯಾವ ಹಕ್ಕೂ ಇರಲಿಲ್ಲ. ಅದು ಅವರಪ್ಪನ ಆಸ್ತಿಯೂ ಆಗಿರಲಿಲ್ಲ. ಆವಾಗಿನ ತೆಲುಗು ದೇಶಂ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುಗೆ ಚೆನ್ನಾಗಿ ತಿನ್ನಿಸಿ ಈ ಸರ್ಕಾರಿ ಜಮೀನು ನುಂಗಿದ್ದ ರಾಮೋಜಿ. ಅದಕ್ಕೆ ಪ್ರತ್ಯುಪಕಾರವಾಗಿ ತನ್ನ ಪತ್ರಿಕೆ ಹಾಗೂ ಟಿವಿ ಚಾನಲ್ಲುಗಳನ್ನು ತೆಲುಗು ದೇಶಂ ಪಾರ್ಟಿಯ 'ಕರಪತ್ರ' ಮಾಡಿದ್ದ. ಈಗ ರಾಜಕೀಯ ದ್ವೇಷದಿಂದ ಅದನ್ನು ಕಾಂಗ್ರೆಸ್‌ನವರು ಕಕ್ಕಿಸುತ್ತಿದ್ದಾರೆ ಅಷ್ಟೇ.


ಈಗ ಆಂಧ್ರದಲ್ಲಿ ರಾಮೋಜಿರಾಯ ಅರ್ಧ ಗಂಟೆಗೊಮ್ಮೆ ತನ್ನ ಈಟಿವಿ ಚಾನಲ್ಲಿನಲ್ಲಿ ಕಾಣಿಸಿಕೊಳ್ಳುತ್ತಾ ಮಾರ್ಗದರ್ಶಿಗೆ ಚೀಟಿ ಹಣ ಕಟ್ಟುತ್ತಿರುವವರು ಗಾಬರಿಯಾಗಬಾರದೆಂದೂ, ಎಲ್ಲಾ ಸರಿಹೋಗುತ್ತದೆಂದೂ ಚೀರಿಕೊಳ್ಳುತ್ತಿದ್ದಾನೆ. ಆದರೆ ಆಶ್ಚರ್ಯ ಯಾವುದು ಗೊತ್ತೆ?

ಮಾರ್ಗದರ್ಶಿ ಕರ್ನಾಟಕದಲ್ಲೂ ಇದೆ. ಈಟಿವಿ ಕನ್ನಡ ಚಾನಲ್ಲೂ ಇದೆ. ಆದರೆ ರಿಸರ್ವ್ ಬ್ಯಾಂಕ್‌ನ ಆದೇಶ ಬಗ್ಗೆಯಾಗಲಿ, ಆಂಧ್ರ ಸರ್ಕಾರದ ಆರೋಪವಾಗಲಿ, ರಾಮೋಜಿಯ ಹೇಳಿಕೆಗಳಾಗಲಿ ಇಲ್ಲಿ ಪ್ರಸಾರವಾಗುತ್ತಿಲ್ಲ.

ಆಂಧ್ರದಲ್ಲಿ ರಾಜಕೀಯ ಕಾರಣಕ್ಕಾಗಿ ಫುಲ್ ಮೆಜಾರಿಟಿ ಇರುವ ಕಾಂಗ್ರೆಸ್ ಸರ್ಕಾರ ಹಾಗೂ ಕಾಯ್ದೆ ಉಲ್ಲಂಘನೆ ಕಾರಣದಿಂದ ರಿಸರ್ವ್ ಬ್ಯಾಂಕ್ ಈಗ ಮಾರ್ಗದರ್ಶಿಯ ಮೇಲೆ ತೀವ್ರ ದಾಳಿ ನಡೆಸುತ್ತಿವೆ. ಹಾಗಾಗಿ ನೀವು ಕಷ್ಟಪಟ್ಟು ಗಳಿಸಿದ ದುಡ್ಡನ್ನು 'ಮಾರ್ಗದರ್ಶಿ'ಯಲ್ಲಿ ಕೂಡಿಸುತ್ತಿರುವಿರಾದರೆ ಕೊಂಚ ಜೋಪಾನ. Atleast ಆಂಧ್ರದಲ್ಲಿ ಏನಾಗುತ್ತಿದೆ, ರಿಸರ್ವ್ ಬ್ಯಾಂಕ್ ಏನು ಹೇಳುತ್ತಿದೆ, ಮುಂದೇನು ಕ್ರಮ ತೆಗೆದುಕೊಳ್ಳಲಿದೆ ಎಂಬುದನ್ನಾದರೂ ಗಮನಿಸುತ್ತಿರಿ. ■

ಎಲ್ಲಿ ಹೋಗುತ್ತಿದೆ ಮಾರ್ಗದರ್ಶಿ ದುಡ್ಡು

ದಕ್ಷಿಣ ಭಾರತದಲ್ಲಿ ಬಹುಶಃ ರಾಮೋಜಿ ರಾಯನ ಹೆಸರನ್ನು ಕೇಳದವರೇ ಇಲ್ಲವೆನ್ನಬಹುದು. 1960 ರ ದಶಕದಲ್ಲಿ ಪ್ರಿಯಾ ಬ್ರಾಂಡಿನ ಉಪ್ಪಿನಕಾಯಿ ಮಾರುತ್ತಿದ್ದ ರಾಮೋಜಿ ಆಮೇಲೆ '62 ರಲ್ಲಿ ಮಾರ್ಗದರ್ಶಿ ಚೀಟಿ ಕಂಪನಿ ಶುರು ಮಾಡಿದ. ಬಹುಶಃ ಆವತ್ತಿಗೆ ದೇಶದ ಮೊದಲ ಚೀಟಿ ಕಂಪನಿ ಅದು. ಆಮೇಲೆ '74 ರಲ್ಲಿ ಈನಾಡು ಪತ್ರಿಕೆ, ಈಟೀವಿ, ಉಷಾಕಿರಣ ಟೀವಿ, '83 ರಲ್ಲಿ ಉಷಾಕಿರಣ ಮೂವೀಸ್, ಡಾಲ್ಫಿನ್ ಹೋಟೆಲ್ ಸರಣಿ, ಕಲಾಂಜಲಿ ಕರಕುಶಲ ವಸ್ತು ವ್ಯಾಪಾರ, ಮಯೂರಿ ಫಿಲಂ ಹಂಚಿಕೆ ವ್ಯವಹಾರ, ಮಾರ್ಗದರ್ಶಿ ಗಾರ್ಮೆಂಟ್ಸ್ ಮಾಡಿಕೊಂಡು ಕೊನೆಗೆ ಆಂಧ್ರ ಸರ್ಕಾರದ 2 ಸಾವಿರ ಎಕರೆ ನುಂಗಿ ರಾಮೋಜಿ ಫಿಲಂ ಸಿಟಿ ಕಟ್ಟಿದ್ದ. ಒಬ್ಬ ಉಪ್ಪಿನಕಾಯಿ ಮಾರಾಟಗಾರ ಇಷ್ಟೆಲ್ಲಾ ಸಾಧಿಸಿದನಾ ಎಂದು ಆಶ್ಚರ್ಯವಾಗುತ್ತದೆ. ಆದರೆ ಸಮಸ್ಯೆ ಏನೆಂದರೆ ರಾಮೋಜಿರಾಯನ ಈ ಬಹುಪಾಲು ವ್ಯವಹಾರಗಳಿಗೆ ದುಡ್ಡು ಹರಿದು ಬಂದಿರುವುದು 'ಮಾರ್ಗದರ್ಶಿ' ಚೀಟಿ ಕಂಪನಿಯಿಂದ.



ರಿಸರ್ವ್ ಬ್ಯಾಂಕ್ 'ತಪ್ಪು' ಎಂದು ಹೇಳಿರುವುದು ಇದನ್ನೇ. ಕಾಯ್ದೆ 45-S ಪ್ರಕಾರ ರಾಮೋಜಿ ಹೀಗೆ ಮಾಡುವಂತಿಲ್ಲ, ಆಂಧ್ರ ಪ್ರದೇಶ ಹಣಕಾಸು ಸಂಸ್ಥೆಗಳಲ್ಲಿ ಹಣ ಹೂಡಿಕೆದಾರರ ಹಿತಾಸಕ್ತಿ ರಕ್ಷಣಾ ಕಾಯ್ದೆ 1999ರ ಪ್ರಕಾರವೂ ಇದು ತಪ್ಪು ಎನ್ನುತ್ತಿದೆ ಸರ್ಕಾರ.

ಮಾರ್ಗದರ್ಶಿಯ ಮಾಲೀಕತ್ವ ಅವಿಭಜಿತ ಹಿಂದೂ ಕುಟುಂಬದ ಕೈಲಿದ್ದು ನಾಳೆ ಎಲ್ಲರೂ ಕಿತ್ತಾಡಿಕೊಂಡರೆ (ಅಥವಾ ಹಾಗೆ ನಟಿಸಿದರೆ) ಯಾವ ಆಸ್ತಿ, ಯಾವ ಕಂಪನಿ, ಯಾರಿಗೆ ಎಂಬ ಜಗಳವೂ ಬರಬಹುದು. ಅಥವಾ ರಾಮೋಜಿ ಕುಟುಂಬದವರೇ ಬೇಕಂತ ಲಾಸ್ ತೋರಿಸಿ ಕೈ ಎತ್ತಿಬಿಟ್ಟರೆ? ಜನ ಏನು ಮಾಡಬೇಕು. ಈ ಎಲ್ಲಾ ಕಂಪನಿಗಳಲ್ಲೂ ಮಾರ್ಗದರ್ಶಿಯ ಹಣ ನಿಯಮ ಬಾಹಿರವಾಗಿ ಹೂಡಿಕೆಯಾಗಿದೆ.

ಆಗ ಜನರ ಗತಿ ಏನು?

ಕರ್ನಾಟಕದ ಜನ ಈಗಾಗಲೇ ಮಣಿಪಾಲ ಪೈ ವಂಚಕ ಕುಟುಂಬದಿಂದ 'ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್' ಹೆಸರಲ್ಲಿ ಮೋಸ ಹೋಗಿದ್ದಾರೆ. ತೀರ ಇತ್ತೀಚೆಗೆ ಗುರುಟೀಕ್ ಇನ್‌ವೆಸ್ಟ್‌ಮೆಂಟ್ ಗಂಗಾಧರನಿಂದ ನೂರಾರು ಕೋಟಿ ಕಳೆಕೊಂಡಿದ್ದಾರೆ.

ಈಗ ಮಾರ್ಗದರ್ಶಿ ಸರದೀನಾ ಅಂತಾ...? ಯಾವುದಕ್ಕೂ ನೀವು ಹುಷಾರಾಗಿದ್ದರೆ ಒಳಿತು. ●




ಕುದುರೆ ರೇಸು ರೌಡಿ-ಗನ್ನು!

ನಡೆದ ವಂಚನೆ ಸಣ್ಣದೇನಲ್ಲ. ಜನ ರೊಚ್ಚಿಗೆದ್ದು ಹಿಂಸೆಗಿಳಿದದ್ದೂ ಸುದ್ದಿಯಾಗಿಲ್ಲ. ಹೆಚ್ಚೂಕಮ್ಮಿ ಮತ್ತೊಂದು ವಿನಿವಿಂಕ್ ಅಥವಾ ಅದಕ್ಕಿಂತಲೂ ಆಘಾತಕಾರಿ ಹಗಲು ದರೋಡೆಯೊಂದನ್ನು ಮಾಧ್ಯಮಗಳು, ಪೊಲೀಸರು ಮತ್ತು ಪ್ರಭಾವಿಗಳ ಒಂದು ಗುಂಪು ವ್ಯವಸ್ಥಿತವಾಗಿ ಮುಚ್ಚಿ ಹಾಕಿತೆ?

ಕಳೆದ ಡಿಸೆಂಬರ್ 8 ರ ಶುಕ್ರವಾರ ರೇಸ್‌ಕೋರ್ಸ್‌ನಲ್ಲಿ ಸಂಭವಿಸಿದ ಹಿಂಸಾಚಾರವನ್ನು ನೋಡಿದ ಯಾರಿಗಾದರೂ ಈ ಥರದ ಗುಮಾನಿ ಹುಟ್ಟಲೇಬೇಕು.

ಕುದುರೆ ಜೂಜಿನ ಬಗ್ಗೆ ಇದ್ದ ನಂಬಿಕೆಯನ್ನೆಲ್ಲ ತಲೆಕೆಳಗು ಮಾಡುವಂತೆ ಹಾಟ್ ಫೇವರಿಟ್ ಕುದುರೆ ಅಪಾಯಿಂಟ್ ಸೋತು ಹೋಗಿತ್ತು. ಅದು ಸೋತರೆ ಎಂಎಂ ರಾಮಸ್ವಾಮಿಯ ಸಿಂಪ್ಲಿ ಸ್ಪೆಕ್ಟಾಕ್ಯುಲರ್ ಎಂಬ ಮತ್ತೊಂದು ಕುದುರೆಯಾದರೂ ಗೆಲ್ಲಬೇಕಿತ್ತು. ಆದರೆ ಗೆದ್ದದ್ದು ಮಾಮೂಲಿ ಕುದುರೆ ಹಿಡಾಲ್ಗೋ!



ನಡೆದ ಮೋಸ ಕೂಡ ಸಣ್ಣದಾಗಿರಲಿಲ್ಲ. ಅಪಾಯಿಂಟ್ ಕುದುರೆಯೊಂದಕ್ಕೇ ದೇಶಾದ್ಯಂತ ಪಂಟರ್‌ಗಳು ಐವತ್ತು ಕೋಟಿ ರೂಪಾಯಿಗಳ ಬೆಟ್ಟಿಂಗ್ ಮಾಡಿದ್ದರು. ಬೆಂಗಳೂರಿನ ಟರ್ಫ್ ಕ್ಲಬ್ ಒಂದರಲ್ಲೇ ಅದರ ಮೇಲೆ 11 ಕೋಟಿಯ ಬೆಟ್ಟಿಂಗ್ ಆಗಿತ್ತು. ಅದು ಬಿಟ್ಟರೆ ಸಿಂಪ್ಲಿ ಸ್ಪೆಕ್ಟಾಕ್ಯುಲರ್ ಗೆಲ್ಲಬಹುದೆಂದು ಲೆಕ್ಕಹಾಕಿದ ಸಹಸ್ರಾರು ಜೂಜುಕೋರರು ಅದರ ಮೇಲೇ ಸರಿಸುಮಾರು 30 ಕೋಟಿಯಷ್ಟು ಜೂಜು ಕಟ್ಟಿದ್ದರು.


ರಾ. ಸೋಮನಾಥ್

ಯಾವತ್ತೂ ಗೆಲ್ಲುತ್ತಿದ್ದ ಈ ಎರಡೂ ಪ್ರಖ್ಯಾತ ಕುದುರೆಗಳನ್ನು ಹಿಂದಿಕ್ಕಿ ಏಕಾಏಕಿ ಸಾಧಾರಣ ಕುದುರೆಯೊಂದು ಗೆಲ್ಲುತ್ತದೆಯೆಂದರೆ, ಅಲ್ಲಿಗೆ ಲಕ್ಷಾಂತರ ಜೂಜುಕೋರರ ಗತಿ ಏನಾಗಬೇಡ? ಯಾವತ್ತೂ ಗೆಲ್ಲದ ಹಿಡಾಲ್ಗೋ ಕುದುರೆಯೊಂದೇ ಸರಿಸುಮಾರು ನೂರು ಕೋಟಿಯಷ್ಟು ದುಡ್ಡನ್ನು ನುಂಗಿ ಹಾಕಿದ್ದರಿಂದಲೇ ರೊಚ್ಚಿಗೆದ್ದ ಜನ ರೇಸ್‌ಕೋರ್ಸ್‌ನ ಅಷ್ಟೂ ಟೀವಿ, ಕಂಪ್ಯೂಟರ್, ಕಿಟಕಿ, ಗಾಜು, ಕ್ಯಾಂಟೀನ್ ಎಲ್ಲವನ್ನೂ ಚಿಂದಿಯೆಬ್ಬಿಸಿದ್ದಾರೆ. ನೂರಾರು ಪೊಲೀಸರು ಗಂಟೆಗಟ್ಟಲೆ ಸೆಣಸಿದರೂ ಜನ ಶಾಂತರಾಗಲಿಲ್ಲ.

ಅಷ್ಟಕ್ಕೂ ಕೋಟಿಗಟ್ಟಲೇ ಜೂಜು ಕಟ್ಟಿದ ಜನಕ್ಕೆ ವಂಚನೆಯಾದರೆ ಆ ಬಗ್ಗೆ ಸಣ್ಣದೊಂದು ಪೊಲೀಸ್ ತನಿಖೆ ಕೂಡ ನಡೆಯುವುದಿಲ್ಲ. ಪ್ರಜಾವಾಣಿಯ ಕೊನೇ ಪುಟದಲ್ಲಿ ಜನ ರೊಚ್ಚಿಗೆದ್ದದ್ದು ಸಣ್ಣ ಸುದ್ದಿಯಾಗಿದ್ದು ಬಿಟ್ಟರೆ ಯಾವ ತನಿಖಾ ವರದಿಗಾರನೂ ಇಂಥ ಹಗಲ ದರೋಡೆಯೊಂದರ ಮರ್ಮಕ್ಕೆ ಕೈಹಾಕಿಲ್ಲ.

ಸದ್ಯ ಇಡೀ ಘಟನೆಯ ಹಿಂದೆ ಕೇಳಿಬರುತ್ತಿರುವುದು ಮುಂಬಯಿಯ ಡಾನ್ ಛೋಟಾ ರಾಜನ್‌ನ ಹೆಸರು. ಡಿಸೆಂಬರ್ 8 ರ ಸಂಜೆಯ The Bugs Bunny Cup ಬೆಂಗಳೂರು ಟರ್ಫ್ ಕ್ಲಬ್‌ನ ಪ್ರತಿಷ್ಠಿತ ರೇಸುಗಳ ಪೈಕಿ ಒಂದು. ಖ್ಯಾತ ಜಾಕಿ ಆಲ್ಫರ್ಡ್ ಓಡಿಸುವ ಅಪಾಯಿಂಟ್ ಕುದುರೆ ಯಾವತ್ತೂ ಸೋತಿದ್ದೇ ಇಲ್ಲ. ಅದು ಬಿಟ್ಟರೆ ಜೆಡಿಎಸ್‌ನ ರಾಜ್ಯಸಭಾ ಸದಸ್ಯ ಎಂಎಂ ರಾಮಸ್ವಾಮಿಯ ಸಿಂಪ್ಲಿ ಸ್ಪೆಕ್ಟಾಕುಲರ್ ಹೆಸರಿನ ಕುದುರೆ ಗೆಲ್ಲಲೇಬೇಕಿತ್ತು. ಅದರ ಜಾಕಿ ಬಿ. ಪ್ರಕಾಶ್ ಕೂಡ ಕಮ್ಮಿಯ ಆಸಾಮಿಯೇನಲ್ಲ. ಇಂಥ ಹೆಸರಾಂತ ಕುದುರೆಗಳೆರಡೂ ಸೋಲುವಂತೆ ಮಾಡಿ ಹೇಳಹೆಸರಿಲ್ಲದ ಇನ್ನಾವುದೋ ಕುದುರೆಯನ್ನು ಗೆಲ್ಲಿಸಲು ಛೋಟಾರಾಜನ್‌ನಂಥ ಡಾನ್‌ನಿಂದಲ್ಲದೇ ಇನ್ನಾರಿಂದ ಸಾಧ್ಯ?

ಒಂದು ಮೂಲದ ಪ್ರಕಾರ ಡಿಸೆಂಬರ್ 8ಕ್ಕೆ ಎರಡು ದಿನಗಳ ಮೊದಲೇ ಹದಿನೈದು ಮಂದಿ ಛೋಟಾರಾಜನ್ ಬಂಟರು ಮುಂಬಯಿಯಿಂದ ಬೆಂಗಳೂರಿಗೆ ಬಂದು ರೇಸ್‌ಕೋರ್ಸ್ ಎದುರಿನ ವೆಸ್ಟೆಂಡ್ ಹೋಟೆಲಿನಲ್ಲಿ ತಂಗಿದ್ದರು. ಅಪಾಯಿಂಟ್ ಕುದುರೆಯ ಜಾಕಿ ಆಲ್ಫರ್ಡ್‌ನನ್ನು ಕಿಡ್ನಾಪ್ ಮಾಡಿ ಹೆಬ್ಬಾಳದ ಫ್ಲೈಓವರ್ ಮೇಲೆ ಕರೆದೊಯ್ದು ತಲೆಗೆ ರಿವಾಲ್ವರ್ ಇಟ್ಟು "ಒಪ್ಪಿಕೊಂಡರೆ ಎರಡು ಕೋಟಿ ಕೊಡ್ತೀವಿ. ಇಲ್ಲಾಂದ್ರೆ ಇಲ್ಲೇ ಮುಗಿಸಿಬಿಡ್ತೀವಿ" ಎಂದಿದ್ದಾರೆ. ಡೀಲು ಕುದುರಿದೆ. ಆನಂತರ ಅದೇ ತಂಡ ಅಪಾಯಿಂಟ್ ಕುದುರೆಯ ಟ್ರೈನರ್ ಬೈರಾಮ್ಜಿಗೂ ಧಮಕಿ ಹಾಕಿದೆ. ಹಾರ್ಸ್ ರೇಸ್ ಪರಿಭಾಷೆಯಲ್ಲಿ ಇದನ್ನೇ made up ಎನ್ನುತ್ತಾರೆ. ಕುದುರೆಯನ್ನು ಓಡಿಸುವ ಜಾಕಿ ಮೊದಲೇ ಶಾಮೀಲಾಗಿ ಅದೆಂಥಾ ವೇಗದ ಕುದುರೆಯಿದ್ದರೂ ಅದರ ಲಗಾಮು ಎಳೆದು ಮೊದಲು ಬರದಂತೆ ನೋಡಿಕೊಳ್ಳುತ್ತಾನೆ. ಅದಕ್ಕೆ ಜಾಕಿಯೊಬ್ಬನೇ ಅಲ್ಲ, ಅದರ ಟ್ರೈನರ್ ಕೂಡ ಕೈಜೋಡಿಸಬೇಕು. ಹಾಗೇ ಕುದುರೆಯ ಮಾಲೀಕನೂ ಶಾಮೀಲಾದರಷ್ಟೇ 'ಮೇಡಪ್' ಸಾಧ್ಯ.



ಹೀಗೆ ನಂಬಿದ ಲಕ್ಷಾಂತರ ಜೂಜುಕೋರರನ್ನು ವಂಚಿಸುವ ಈ ದಂಧೆ ಒಬ್ಬ ಅಂಡರ್‌ವರ್ಲ್ಡ್ ಡಾನ್‌ಗಷ್ಟೇ ಸಾಧ್ಯ. ಶುಕ್ರವಾರದ The Bugs Bunny Cup ನಲ್ಲಾದದ್ದೂ ಇದೆ. ಮೊದಲು ಜಾಕಿ ಮತ್ತು ಟ್ರೈನರ್ ಬೈರಾಮ್ಜಿಯನ್ನು ಬುಟ್ಟಿಗೆ ಹಾಕಿಕೊಂಡ ಛೋಟಾರಾಜನ್ ಆನಂತರ ಮತ್ತೊಂದು ಫೇವರಿಟ್ ಕುದುರೆಯಾದ ಸಿಂಪ್ಲಿ ಸ್ಪೆಕ್ಟಾಕುಲರ್‌ನ ಮಾಲೀಕ ಎಂಎಂ ರಾಮಸ್ವಾಮಿಗೇ ಫೋನ್ ಮಾಡಿ ಧಮಕಿ ಹಾಕಿದ್ದಾನೆ.

ಛೋಟಾ ರಾಜನ್‌ನೇ ಫೋನ್ ಮಾಡಿ ಹೇಳಿದ ಮೇಲೆ ರಾಮಸ್ವಾಮಿ ತಾನೇ ಹೇಗೆ ಒಪ್ಪದಿರುತ್ತಾನೆ? ಅಲ್ಲಿಗೆ ಫೇವರಿಟ್ ಆಗಿದ್ದ ಎರಡೂ ಕುದುರೆಗಳು ಸೋಲುವುದು ಗ್ಯಾರಂಟಿಯಾದಂತಾಯ್ತು.

ಇಷ್ಟಾದ ಮೇಲೆಯೇ ಡಾನ್‌ಗಳ ಅಸಲೀ ಕಾರ್ಯಾಚರಣೆ ಶುರುವಾಗುತ್ತದೆ. ಫೇವರಿಟ್ ಕುದುರೆಗಳೆರಡರ ಜನ ಎದ್ದೂಬಿದ್ದು ದುಡ್ಡು ಕಟ್ಟಿರುತ್ತಾರೆ. ಅದನ್ನು ಬುಕ್ಕಿಗಳು ಕಟ್ಟಿಸಿಕೊಳ್ಳುತ್ತಾರೆ. ಡಾನ್‌ಗಳು ಇಂಥ ಬುಕ್ಕಿಗಳೆಲ್ಲರನ್ನೂ ಮೊದಲೇ ಸರಿ ಮಾಡಿಕೊಂಡಿರುತ್ತಾರೆ. ಫೇವರಿಟ್ ಕುದುರೆಗಳ ಮೇಲೆ ಎಷ್ಟು ಬೇಕಾದರೂ ಬೆಟ್ಟಿಂಗ್ ಮಾಡಿಸಿಕೊಳ್ಳಿ ಎಂದು ಡಾನ್‌ನಿಂದ ಮೊದಲೇ ಬುಕ್ಕಿಗಳಿಗೆ ಸೂಚನೆ ಬಂದಿರುತ್ತದೆ. ಹಾಗೇ ಕಟ್ಟಿಸಿಕೊಂಡ ಬೆಟ್ಟಿಂಗ್‌ಗೆ ಪ್ರತಿಯಾಗಿ ಡಾನ್ ದುಡ್ಡು ಕಟ್ಟಿರುತ್ತಾನಾದ್ದರಿಂದ ಬುಕ್ಕಿಗಳು ಫೇವರಿಟ್‌ಗಳ ಮೇಲೆ ಬೆಟ್ಟಿಂಗ್ ಕಟ್ಟಿಸಿಕೊಳ್ಳುತ್ತಾರೆ. ಯಾವತ್ತು ಫೇವರಿಟ್ ಕುದುರೆ ಸೋಲುತ್ತೋ ಕಟ್ಟಿದ ಅಷ್ಟೂ ಬೆಟ್ಟಿಂಗ್ ದುಡ್ಡು ಬುಕ್ಕಿಗಳ ಮೂಲಕ ಡಾನ್‌ನ ಕೈ ಸೇರುತ್ತದೆ.

ಡಿಸೆಂಬರ್ 8 ರ ಬಗ್ಸ್‌ಬನ್ನಿ ಕಪ್ ಒಂದರಿಂದಲೇ ಛೋಟಾ ರಾಜನ್ ಸರಿಸುಮಾರು ಮೂವತ್ತು ಕೋಟಿಯಷ್ಟು ಖಮಾಯಿ ಮಾಡಿದ್ದ. ಜನ ರೊಚ್ಚಿಗೆದ್ದು ಟರ್ಫ್ ಕ್ಲಬ್ ಚಿಂದಿಯೆಬ್ಬಿಸಿದ್ದಕ್ಕೆ ಏನಾದರೂ ತಿಪ್ಪೆ ಸಾರಿಸಬೇಕಲ್ಲ. ಕಾಟಾಚಾರಕ್ಕೆ ಜಾಕಿ ಆಲ್ಫರ್ಡ್‌ನನ್ನು ಮೂರು ತಿಂಗಳ ತನಕ ಸಸ್ಪೆಂಡ್ ಮಾಡಿದ್ದಾರೆ.

ನೂರು ಕೋಟಿಯ ವಂಚನೆಗೆ ಕೇವಲ ಮೂರು ತಿಂಗಳ ಸಸ್ಪೆಂಡ್ ಶಿಕ್ಷೆಯೆ? ಅಷ್ಟಕ್ಕೂ ವಂಚನೆಯಲ್ಲಿ ಟ್ರೈನರ್ ಬೈರಾಮ್ಜಿ ಎಂ.ಎ.ಎಂ. ರಾಮಸ್ವಾಮಿ ಆತನ ಟ್ರೈನರ್ ಗಣಪತಿ ಮತ್ತು ಜಾಕಿ ಬಿ. ಪ್ರಕಾಶ್

(12ನೇ ಪುಟಕ್ಕೆ)

ಕಾಲಾಪತ್ಥರ್ ಕುದುರೆಗಳು ಗೆದ್ದಿದ್ದು ಹೇಗೆ?

ಬೆಂಗಳೂರಿನ ಪಾತಕಿಗಳ ಪೈಕಿ ರೇಸ್ ಫಿಕ್ಸಿಂಗ್ ದಂಧೆಗೆ ಮೊದಲು ಕೈಯಿಟ್ಟದ್ದು ಕಾಲಾಪತ್ಥರ್.

ಶೇಷಾದ್ರಿಪುರದ ಸಣ್ಣ ಸೈಜಿನ ರೌಡಿ ಜಿ.ಎಂ. ನವೀನ್ ಮತ್ತು ಕಾಲಾಪತ್ಥರ್ ಸೇರಿ ಸಂಜೀವ್‌ಕುಮಾರ್ ಎಂಬಾತನ ಹೆಸರಲ್ಲಿ ನಾಲ್ಕು ಪಸಂದಾದ ಕುದುರೆಗಳನ್ನು ರೇಸಿಗೆ ಬಿಟ್ಟಿದ್ದಾರೆ. ಈ ಪೈಕಿ ಮಾಲ್ಕಮ್ ಕರಡಿ ಎಂಬ ಜಾಕಿ ಓಡಿಸುವ ಕಿಂಗ್ ಆಫ್ ದಿ ಟರ್ಫ್ ಎಂಬ ಕುದುರೆ ಬೆಂಗಳೂರು ಟರ್ಫ್ ಕ್ಲಬ್ಬಿನಲ್ಲಿದ್ದರೆ, ಹೋಚಿಮಿನ್, ಸ್ಮಾರ್ಟ್ ಹೆಡ್ ಮತ್ತು ಎಕ್ಸ್‌ಕ್ಲೆರ್ ಎಂಬ ಮೂರು ಕುದುರೆಗಳು ಮೈಸೂರು ರೇಸಿಗೆ ಓಡುತ್ತವೆ.

ಕಳೆದ ಬಾರಿಯ ರಂಜಾನ್ ಪ್ರಯುಕ್ತ ನಡೆದ ಮೈಸೂರು ದರ್ಬಿಯಲ್ಲಿ ಬಹುತೇಕ ಜಾಕಿಗಳನ್ನೆಲ್ಲ ಪತ್ಥರ್ ಗ್ಯಾಂಗ್ ಹೆದರಿಸಿ ಮೊದಲು ಸ್ಮಾರ್ಟ್ ಹೆಡ್ ಕುದುರೆಯನ್ನು ಗೆಲ್ಲುವಂತೆ ಮಾಡಿದೆ. ಆಗ ಸ್ಮಾರ್ಟ್ ಹೆಡ್‌ಗೆ 10ರೂಪಾಯಿಗೆ 70 ರೂಪಾಯಿ ಮೌಲ್ಯವಿತ್ತು. ಇದೊಂದರಿಂದಲೇ ಪತ್ಥರ್ ಗ್ಯಾಂಗ್ ಕೇವಲ ಐದು ಲಕ್ಷ ಹಾಕಿ 53 ಲಕ್ಷ ಬಾಚಿತು. ಅದರ ಮರುದಿನವೇ ಆ 35 ಲಕ್ಷ ಪೂರ್ತಿ ತಮ್ಮದೇ ಹೋಚಿಮಿನ್ ಕುದುರೆಗೆ ಬಾಚಿ ಕಟ್ಟಿ ಅದನ್ನೂ ಮೇಡಪ್ ಮಾಡಿದ್ದಾರೆ. ಆಗ ಹೋಚಿಮಿನ್‌ಗೆ 1:4 ಮೌಲ್ಯವಿತ್ತು, 35 ಲಕ್ಷಕ್ಕೆ 1.20 ಕೋಟಿ ಬಂತು. ಅದರ ಮರುದಿನ ಈ 1.20 ಕೋಟಿ ಪೂರ್ತಿಯನ್ನು ಎಕ್ಸ್‌ಕ್ಲೇರ್ ಕುದುರೆಗೆ ಹೂಡಿ ಅದನ್ನೂ 'ಮೇಡಪ್' ಮಾಡಿ ಒಟ್ಟೂ ಮೂರು ಕೋಟಿ ಬಾಚಿಬಿಟ್ಟರು.



ಹೀಗೆ ಮೈಸೂರು ದರ್ಬಿಯಿಂದ ದೋಚಿದ 3 ಕೋಟಿಯನ್ನು ತಂದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಕಪ್‌ಗೆ ಹಾಕಿ ಇಲ್ಲಿಯೂ ತಮ್ಮದೇ King of the Turf ಕುದುರೆಯನ್ನು ಗೆಲ್ಲಿಸಿಕೊಂಡರು. ಅದಕ್ಕೊಂದೇ ಮುಂಬಯಿಯಿಂದ ಜಾಕಿ ಮಾಲ್ಕಮ್ ಕರಡಿಯನ್ನು ಕರೆಸಿ ಬೇರೆಲ್ಲಾ ಜಾಕಿಗಳಿಗೂ ಸಣ್ಣದೊಂದು ಥ್ರೆಟ್ ಕೊಟ್ಟರು. ಕಿಂಗ್ ಆಫ್ ದಿ ಟರ್ಫ್‌ಗೆ ಆ ಹೊತ್ತಿಗೆ 1:6 ಬೆಟ್ಟಿಂಗ್ ನಡೆಯುತ್ತಿತ್ತು. ಇದೊಂದೇ ಬಾಬತ್ತಿನಿಂದ ನವೀನ-ಪತ್ಥರ್ ಗ್ಯಾಂಗ್ 10 ಕೋಟಿ ದುಡಿದಿತ್ತು!

ಮುಂಬಯಿ ಡಾನ್‌ಗಳಿಗಿಂತಲೂ ಬೆಂಗಳೂರಿನ ರೌಡಿಗಳಿಗೆ ಜಾಕಿಗಳನ್ನು ಪಳಗಿಸುವುದು ಸಲೀಸು. ಮೊದಲು ದುಡ್ಡಿನ ರುಚಿ ತೋರಿಸುವುದು. ಅದಕ್ಕೆ ಜಗ್ಗದೇ ಹೋದರೆ ಮಚ್ಚು ಲಾಂಗು. ವಿಜಯನಗರದ ರೌಡಿ ಗುಂಡಾ ಒಬ್ಬನೇ ಮೂರು ಕುದುರೆ ಬಿಟ್ಟಿದ್ದಾನೆಂದರೆ ಉಳಿಕೆ ರೌಡಿಗಳು ಸುಮ್ಮನಿರುತ್ತಾರಾ? ಯಾವುದೇ ರೇಸಿಗೆ ಬಂದರೂ ಅಲ್ಲಿನ ಯುಬಿ ಸ್ಟಾಂಡ್‌ನಲ್ಲಿ ಬೆಂಗಳೂರಿನ ಒಂದು ಹಿಂಡು ರೌಡಿಗಳು ಕಂಗೊಳಿಸುತ್ತಾರೆ. ಕೆಲವರಿಗೆ ರೇಸ್ ಹುಚ್ಚಾದರೆ ಮತ್ತೆ ಕೆಲವರಿಗೆ ಜಾಕಿಗಳನ್ನು ಬೆದರಿಸುವ ಕೆಚ್ಚು.

ಬೆಂಗಳೂರು ಟರ್ಫ್ ಕ್ಲಬ್‌ನ ಅಧ್ಯಕ್ಷ ಮರಿಲಿಂಗಯ್ಯನಿಗೆ ಇದೆಲ್ಲ ಗೊತ್ತಿಲ್ಲವೆಂದಲ್ಲ, ಬೇಕಿಲ್ಲ!

ನಗ್ಮಾ ಮೋಡಿಯಲ್ಲಿ ಜಾಕಿ ಅಪ್ಪು

ಇವತ್ತು ಅಂದರೆ ಡಿಸೆಂಬರ್ 17 ರಂದು ಮುಂಬಯಿ ದರ್ಬಿಯಲ್ಲೂ ಜನ ರೊಚ್ಚಿಗೆದ್ದು ಗಲಾಟೆಗಿಳಿದ ಸುದ್ದಿ ಬಂದಿದೆ. ಇದಕ್ಕೆ ಕಾರಣನಾದವನು ಬೆಂಗಳೂರಿನ ಕೆಪಿಜೆ ಅಪ್ಪು. ಈತ ಸಿನಿಮಾನಟಿ ನಗ್ಮಾಳ ಹಾಲಿ ಪ್ರಿಯಕರ. ಇವತ್ತಿಗೂ ಈತ ದೇಶದ ಹೆಸರಾಂತ ಜಾಕಿಯೆ. ಯಾವತ್ತು ಈತನ ರಾಶಿಗೆ ನಗ್ಮಾ ಕಾಲಿಟ್ಟಳೋ ಆವತ್ತಿನಿಂದಲೇ ಅಪ್ಪು ಹಳ್ಳಹಿಡಿದ. ಬೆಂಗಳೂರಿನ ಒಂದೆರಡು ರೇಸುಗಳಲ್ಲಿ ಬೇಕೆಂತಲೇ ಸೋತು ದೊಡ್ಡ ಮೊತ್ತದ ಗಂಟು ಮಾಡಿಕೊಂಡ.



ನಗ್ಮಾಳ ಮೂಲಕವೇ ಮುಂಬಯಿಯ ಅನೇಕ ಬುಕ್ಕಿಗಳ ಪರಿಚಯವಾಯಿತು. ಮುಂಬಯಿ ರೇಸಿಗೆ ಹೋದಾಗೆಲ್ಲ ಆಕೆಯ ಜೊತೆಗೇ ತಂಗಲಾರಂಭಿಸಿದ..



ಈತನ ತಮ್ಮ ಜ್ಞಾನೇಶ್ವರ್ ಕೂಡ ಹೆಸರಾಂತ ಜಾಕಿ.. ವಿಶೇಷವಾಗಿ ಹೈದ್ರಾಬಾದ್ ರೇಸಿನಲ್ಲಿ ಓಡಿಸುತ್ತಾನೆ.. ಯಾವ ಕುದುರೆಗೆ ಮೇಡಪ್ ಆಗಿದೆ ಎಂಬುದನ್ನು ತನ್ನ ತಮ್ಮನ ಮೂಲಕ ಮೊದಲೇ ಈತನಿಗೆ ಗೊತ್ತಿರುತ್ತೆ. ಅದನ್ನು ಉಪಾಯವಾಗಿ ಅಪ್ಪು ಬಾಯಿಂದ ತಿಳಕೊಂಡು ನಗ್ಮಾ ಮುಂಬಯಿಂದಲೇ ಹೈದರಾಬಾದ್‌ನ ಬುಕ್ಕಿಗಳಿಗೆ ಫೋನ್ ಮಾಡಿ ತಿಳಿಸಿಬಿಡುತ್ತಾಳೆ. ಬುಕ್ಕಿಗಳಿಗೂ ದುಡ್ಡು ಆದರಲ್ಲಿ ನಗ್ಮಾಗೂ ಪಾಲು!

ಇವತ್ತಿನ ಮುಂಬಯಿ ರೇಸೊಂದರಲ್ಲೇ ಎರಡು ಕುದುರೆಗಳ ರೇಸಿಗೆ ಈ ಅಪ್ಪು ಕಾರಣನಾದನೆಂದರೆ ಲಾಭ ಎಷ್ಟಿರಬೇಡ ಮತ್ತು ನಗ್ಮಾ ಎಂಥಾ ಮೋಡಿ ಮಾಡಿರಬೇಡ? ಈತನ ಅಪ್ಪ ಶಿವಾಜಿನಗರದಲ್ಲಿ ಸಣ್ಣದೊಂದು ಸ್ಕೂಟರ್ ಗ್ಯಾರೇಜ್ ಇಟ್ಟುಕೊಂಡಿದ್ದು ರೇಸ್ ಆಡಿಯೇ ದಿವಾಳಿಯಾದ. ಜಿದ್ದಿಗೆ ಬಿದ್ದು ತನ್ನ ಮಗನನ್ನೇ ಜಾಕಿ ಮಾಡಿದ. ಬಹುಶಃ ಅಪ್ಪನಿಗೆ ತನ್ನ ಮಗನಾದರೂ ನ್ಯಾಯವಾಗಿ ರೇಸ್ ಗೆದ್ದು ತನ್ನಂಥ ಅನೇಕ ಜೂಜುಕೋರರಿಗೆ ನ್ಯಾಯ ಒದಗಿಸಲಿ ಎಂಬ ಆಸೆಯಿತ್ತೇನೊ. ಆದರೆ ಮಗ ನಟ ನಗ್ಮಾಳ ಮೋಡಿಗೆ ಬಿದ್ದು ದೋಖಾ ಮಾಡುತ್ತಲೇ ಇದ್ದಾನೆ..

ಜಾಕಿಯೊಬ್ಬನಿಗೆ ರೇಸೊಂದರಲ್ಲಿ ಕುದುರೆಯೊಂದನ್ನು ಓಡಿಸಿದರೆ ಸಿಗುವುದು ಹೆಚ್ಚೆಂದರೆ ಸಾವಿರ ರೂ. ಮಾತ್ರ. ಆದರೆ ಅಪ್ಪು ಇವತ್ತು 50 ಕೋಟಿಯ ಆಸ್ತಿವಂತ. ಎಲ್ಲಿಂದ ಬಂತು? ನಗ್ಮಾ ಕೃಪೆಯೋ? ಬುಕ್ಕಿಗಳ ಕೊಡುಗೆಯೊ? ಅಥವಾ ಮಾಡಿದ ಮೋಸದ ಪ್ರತಿಫಲವೋ?

ತನಿಖೆ ಮಾಡುವವರ್‍ಯಾರು? ಶಿಕ್ಷಿಸುವವರ್‍ಯಾರು??

ಹಣದ ಪ್ರಶ್ನೆ ಬಂದಾಗ ಪ್ರತಿಯೊಬ್ಬರ ಧರ್ಮವು ಒಂದೇ -ವಾಲ್ಟರ್

ಬೆಂಗಳೂರು ಜಿಲ್ಲಾ ಪಂಚಾಯಿತಿ


ಮುಖ್ಯಮಂತ್ರಿ ನೆರಳಲ್ಲಿ ಕಂಪ್ಯೂಟರ್ ಹಗರಣ

ಕರ್ನಾಟಕದ ಮುಖ್ಯಮಂತ್ರಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಎಚ್.ಡಿ. ಕುಮಾರಸ್ವಾಮಿಯ ನೆರಳಲ್ಲಿ ಅವರ ನಂಬಿಕಸ್ಥ ಅಧಿಕಾರಿಗಳೇ ಸರ್ಕಾರಿ ಹಣ ನುಂಗಿರುವ ಕಂಪ್ಯೂಟರ್ ಖರೀದಿ ಹಗರಣ ಇದು. ಸಿಇಓ ಸತ್ಯಮೂರ್ತಿ ಎಂಬ ಖದೀಮ ಅಧಿಕಾರಿಯೇ ಹಗರಣದ ರೂವಾರಿ.



ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವ ಎಂಟು ತಾಲ್ಲೂಕುಗಳ ಎಲ್ಲಾ 228 ಗ್ರಾಮ ಪಂಚಾಯಿತಿಗಳಿಗೂ ಇತ್ತೀಚೆಗೆ ಕೆಲ ಖಾಸಗಿ ಕಂಪನಿಗಳು ಕಂಪ್ಯೂಟರ್ ಸರಬರಾಜು ಮಾಡಿವೆ. ಇವುಗಳಲ್ಲಿ ಬಹುಪಾಲು ಬೋಗಸ್-ಲೆಟರ್ ಹೆಡ್ ಕಂಪನಿಗಳಾಗಿದ್ದು ಮೂರು ಕಂಪ್ಯೂಟರ್‌ಗಳಿಗಾಗುವಷ್ಟು ಹಣ ಕಿತ್ತುಕೊಂಡು ಒಂದೊಂದು ಸಾಧಾರಣ ಕಳಪೆ ಕಂಪ್ಯೂಟರ್‌ಗಳನ್ನು ಕೊಟ್ಟು ದುಡ್ಡೆಣಿಸಿಕೊಂಡು ಪರಾರಿಯಾಗಿವೆ. ಹೆಚ್ಚುಕಡಿಮೆ ಎರಡೂವರೆ ಕೋಟಿ ರೂಪಾಯಿಗಳ ಈ ಕಂಪ್ಯೂಟರ್ ಖರೀದಿ ಹಗರಣದಲ್ಲಿ ಒಂದೂಕಾಲು ಕೋಟಿ ರೂ.ಗಳನ್ನು ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ನುಂಗಿ ನೀರು ಕುಡಿದಿದ್ದಾರೆ.

12 ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ಕಂಪ್ಯೂಟರ್ ಖರೀದಿಸಲು ಸರ್ಕಾರವೇ ಅನುಮತಿ ನೀಡಿದೆ. ಅದರಂತೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ರಾಂ ಪ್ರಕಾಶ್ ದಿನಾಂಕ 22.4.06 ರಲ್ಲಿ ಒಂದು ಆದೇಶ ಹೊರಡಿಸಿ (ಸಂಖ್ಯೆ:ಬೆಂಗ್ರಾಮ ಜಿ.ಪಂ: ಯೋ 2005-06) ಸರ್ಕಾರ ನಿಗಧಿಪಡಿಸಿರುವಂತೆ ಪ್ರತಿ ಕಂಪ್ಯೂಟರ್‌ಗೆ 50ಸಾವಿರ ರೂ. ಸಮಿತಿಯೊಳಗೆ ಪಾವತಿಸಿ ಅನುಮೋದಿತ ಸಂಸ್ಥೆಗಳಿಂದ ಖರೀದಿಸಬಹುದು ಎಂದು ತಿಳಿಸಿದ್ದರು.



ಸತ್ಯಮೂರ್ತಿ

ಆದರೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸತ್ಯಮೂರ್ತಿ ಕಂಪ್ಯೂಟರ್ ಕಂಪನಿಗಳಿಗೆ 50 ಸಾವಿರದ ಬದಲಾಗಿ ಗ್ರಾಮ ಪಂಚಾಯಿತಿಗಳಿಂದ ತಲಾ 1 ಲಕ್ಷ ರೂಪಾಯಿ ಕೊಡಿಸಿ ಹತ್ತಿರತ್ತರ ಒಂದು ಕೋಟಿ ಕಮಿಷನ್ ದೋಚಿದ್ದಾನೆ. ಇದೂ ಸಾಲದೆಂಬಂತೆ ಆರ್.ಕೆ. ಸೆಕ್ಯುರಿಟೀಸ್ ಎಂಬ ಖಾಸಗಿ ಸಂಸ್ಥೆ ಮೂಲಕ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಬಿಸಿಎಂ

ಬಳಿದಾಳೆ ಈಶ

ಹಾಸ್ಟೆಲ್‌ಗಳಿಗೆ ನೂರಾರು ಜನ ಖಾಸಗಿ ನೌಕರರನ್ನು ನೇಮಕ ಮಾಡಿಕೊಂಡು ಸರ್ಕಾರಕ್ಕೆ ಲಾಸು ಮಾಡುತ್ತಾ ಅಲ್ಲೂ ಕೊಳ್ಳೆ ಹೊಡೆಯುತ್ತಿದ್ದಾನೆ. ಈ ಆರ್.ಕೆ. ಸೆಕ್ಯುರಿಟೀಸ್‌ನ ಮುಖ್ಯಸ್ಥೆ ಎ. ಕವಿತಾ ಎಂಬುವಳು ಸಿಇಓ ಸತ್ಯಮೂರ್ತಿಯ ನೆಂಟರೆಂಬ ರೂಮರ್ ಸಹ ಹಬ್ಬಿದೆ.

ಸಿಇಓ ಸತ್ಯಮೂರ್ತಿಯ ಈ ಎಲ್ಲಾ ಅಕ್ರಮ ಡೀಲ್‌ಗಳಲ್ಲಿ ಮುಖ್ಯ ಲೆಕ್ಕಾಧಿಕಾರಿ ಕಂದಾರಿ ಹಾಗೂ ಆಡಳಿತ ವಿಭಾಗದ ಉಪಕಾರ್ಯದರ್ಶಿ ಯಾಲಕ್ಕಿ ಗೌಡ ಶಾಮೀಲಾಗಿದ್ದಾರೆ.

ಅಂದಹಾಗೆ ಈ ಮೂವರೂ ಖದೀಮರು ಮುಖ್ಯಮಂತ್ರಿ ಕುಮಾರಸ್ವಾಮಿ, ಅವರ ಸೋದರ ಬಾಲಕೃಷ್ಣೇಗೌಡ ಹಾಗೂ ಸಚಿವ ಚೆನ್ನಿಗಪ್ಪನ ಶಿಫಾರಸ್ಸಿನ ಮೇರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಗೆ ಬಂದಿರುವ ಅಧಿಕಾರಿಗಳು. ಹಾಗಿದ್ದ ಮೇಲೆ ಇವರ ಹಗಲು ದರೋಡೆಗಳಿಗೆ ಸಾಕ್ಷಾತ್ ಮುಖ್ಯಮಂತ್ರಿಯ ನೈತಿಕ ಹೊಣೆಗಾರಿಕೆಯೂ ಇರಲೇಬೇಕಲ್ಲವೆ?

ಶೇವಿಂಗ್ ಸೆಲೂನ್‌ನಲ್ಲಿ ಸಾಫ್ಟ್‌ವೇರ್ ಕಂಪನೀನಾ!?


ಈ ಪೋಟೋ ನೋಡಿ, ನಿಮಗೇ ಗೊತ್ತಾಗುತ್ತೆ.



ದೇವು ಕೊಟ್ಟಿರುವ ಅಡ್ರೆಸ್‌ನಲ್ಲಿ ಶೇವಿಂಗ್ ಸೆಲೂನ್

ಜಿಲ್ಲಾ ಪಂಚಾಯಿತಿಗೆ ನೂರಾರು ಕಂಪ್ಯೂಟರ್ ಸರಬರಾಜು ಮಾಡಿರುವ ದೇವೂ ಎಂಟರ್‌ಪ್ರೈಸಸ್‌ನ ವಿಳಾಸ ನಂ. 240/A, 2 ನೇ ಮುಖ್ಯರಸ್ತೆ, ತ್ಯಾಗರಾಜನಗರ ಬೆಂಗಳೂರು-28 ಎಂದಿದೆ. ಆದರೆ 'ಲಂಕೇಶ್' ಈ ಅಡ್ರೆಸ್ ಹುಡುಕಿಕೊಂಡು ಹೋದಾಗ ಕಂಡಿದ್ದು... ಶೇವಿಂಗ್ ಸೆಲೂನ್!

ಸತ್ಯಮೂರ್ತಿ ಇದಕ್ಕೇನು ಹೇಳುತ್ತಾನೆ?


DEVU'S ENTERPRISES
(Small Scale Industrial Unit)
240/A, III Floor II Main, Thyagarajanagar, Bangalore-560 028
Ph 26762027 Fax : 26762948 Mobile : 9845352382 e-mail : devus_ranga2003@yahoo.com
Copiers ★ Fax ★ Intercoms ★ Computers

Ref. No: 420/DEVU/HCL/QUO/2006-07 Date.

To,

The President/Secretary,
Grama Panchayat Samiti

ಕೊಟೇಷನ್‌ನಲ್ಲಿ ದೇವು ಕೊಟ್ಟಿರುವ ವಿಳಾಸ

ದೇವೂ ಕಂಪನಿ ರಂಗನಾಥ ಎಂಬುವನದ್ದು. ಕೋಟಿಗಟ್ಟಲೇ ವ್ಯವಹಾರ ಮಾಡುತ್ತಿದ್ದರೂ ದೇವೂಗೆ ಒಂದು ಆಫೀಸ್ ಸಹ ಇಲ್ಲ. ಈ ಸೆಲೂನ್ ಇರುವ ಕಟ್ಟಡದ ಮಾಲೀಕ ಲಕ್ಷ್ಮಯ್ಯ ಎಂಬಾತ ರಂಗನಾಥನ ಮಾವ. ಇವನು ಸಾರಿಗೆ ಸಂಸ್ಥೆಯ ಮಾಜಿ ನೌಕರ. ದೇವೂ ಒಂದೇ ಅಲ್ಲಾ ಕೊಟೇಷನ್ ಕೊಟ್ಟಿರುವ Protan, Silicon Technologies, Raj infotech, Genesis Software Solutions, Cophex ಇವೇ ಮುಂತಾದ ಡಜನ್‌ಗಟ್ಟಲೆ ಕಂಪನಿಗಳೆಲ್ಲಾ ಬೋಗಸ್ಸೇ. ಇವ್ಯಾವುದಕ್ಕೂ ನೋಂದಣಿ ಇಲ್ಲ, ಅಡ್ರಸ್ಸೂ ಇಲ್ಲ.

ಲೋಕಾಯುಕ್ತರೇ ತನಿಖೆ ಮಾಡಬೇಕಾದ ಹಗರಣ ಇದು.

ಕಂಪ್ಯೂಟರ್ ಖರೀದಿ ಹಗರಣ

12ನೇ ಹಣಕಾಸಿನ ಆಯೋಗದ ಸೂಚನೆಯಂತೆ ಗ್ರಾಮ ಪಂಚಾಯಿತಿಗಳಿಗೆ ಕಂಪ್ಯೂಟರ್ ಖರೀದಿಸಬೇಕೆಂಬ ಆದೇಶ 2006 ರ ಏಪ್ರಿಲ್‌ನಲ್ಲೇ ಹೊರಡಿಸಿದ್ದರೂ ಯಾರೂ ಅದರ ಬಗ್ಗೆ ಗಮನ ಹರಿಸಿರಲಿಲ್ಲ.

(ಮುಂದಿನ ಪುಟಕ್ಕೆ)

ಕುಮಾರಣ್ಣ ಹಳ್ಳಿಯಲ್ಲಿ

ಗಂಟುಕಳ್ಳ ಬಂಟರೆಲ್ಲಾ ಜಿಲ್ಲಾ ಪಂಚಾಯ್ತಿಲಿ...


ಅದೇನೊ ಗಾದೆ ಹೇಳುತ್ತಾರಲ್ಲ 'ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತು' ಅಂತಾ ಹಾಗಾಗಿದೆ ಮುಖ್ಯಮಂತ್ರಿ ಕುಮಾರಸ್ವಾಮಿಯ ನೇರ ಉಸ್ತುವಾರಿಯಲ್ಲಿರುವ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಕಥೆ.

ಒಂದು ಕಡೆ ಕುಮಾರಸ್ವಾಮಿ ಹಳ್ಳಿಗಳಿಗೆ ಹೋಗಿ ಯಾರ್‍ಯಾರದ್ದೋ ಮನೆಗಳಲ್ಲಿ ಮಲಗೆದ್ದು ಬರುತ್ತಿದ್ದಾರೆ. ಹಳ್ಳಿಗಳ ಉದ್ಧಾರದ ಬಗ್ಗೆ ಉದ್ದುದ್ದ ಭಾಷಣ ಕುಟ್ಟುತ್ತಿದ್ದಾರೆ. ಆದರೆ ಮತ್ತೊಂದೆಡೆ ತಮ್ಮದೇ ಇಲಾಖೆಗೆ ಭ್ರಷ್ಟ ಹೆಗ್ಗಣಗಳನ್ನು ತಂದು ಮೇಯಲು ಬಿಟ್ಟಿದ್ದಾರೆ.

ಸತ್ಯಮೂರ್ತಿಯ ಪುರಾಣ

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ [illegible] ಗ್ರಾಮದವನಾದ ಸತ್ಯಮೂರ್ತಿ ಹುಟ್ಟಿ ಬೆಳೆದಿದ್ದೆಲ್ಲಾ ಬಡತನದಲ್ಲೇ. ಅವತ್ತು ಗಂಜಿ ಕುಡಿದು ಬೆಳೆದ ಈತ ಇವತ್ತು ಬಡವರ ರಕ್ತ ಹೀರುವ ರಾಕ್ಷಸನಾಗಿ ಬದಲಾಗಿ ಬಿಟ್ಟಿದ್ದಾನೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ [illegible] ಗೆ ಈ ಹಿಂದೆ [illegible] ಜಮೀರ್ ಪಾಷಾ, ಸಂಜೀ[illegible] ದಕ್ಷ ಅಧಿಕಾರಿಗಳಿದ್ದರು. [illegible] ತರದ ಚಿಲ್ಲರೆ ಕಳ್ಳರೂ ಬಂದುಹೋಗಿದ್ದಾರೆ. ಆದರೆ ಸತ್ಯಮೂರ್ತಿ ತರದ ಹಗಲುಕಳ್ಳ ಬಂದಿರಲಿಲ್ಲ. ಬಡವನಾಗಿ ಹುಟ್ಟಿದರೂ ಅಧಿಕಾರಿಯಾದ ಮೇಲೆ ಇವನೆಂಥ ಕ್ರೂರಿಯಾಗಿದ್ದಾನೆಂದರೆ ಅರಣ್ಯ ಇಲಾಖೆ ಅಧಿಕಾರಿಯಾಗಿದ್ದಾಗ ದೊರೆಗಲ್‌ನ ಗ್ರಾಮದ ತನ್ನ ಮನೆಗೇ ನೇರ ರಸ್ತೆ ಮಾಡಿಸಲು ಅಡ್ಡವಿದ್ದ ಬೇರೆ ಬಡರೈತರ ಮನೆಗಳನ್ನು ನೆಲಸಮ ಮಾಡಿಸಿದ್ದ.



ಯಾಲಕ್ಕಿಗೌಡ


ನಗರಾಭಿವೃದ್ಧಿ ಇಲಾಖೆಯಲ್ಲಿದ್ದಾಗ ಅಷ್ಟಿಷ್ಟು ಪ್ರಾಮಾಣಿಕತೆ ಉಳಿಸಿಕೊಂಡು ನಿಜಕ್ಕೂ 'ಸತ್ಯ'ಮೂರ್ತಿ ಆಗಿದ್ದ ಇವನು ಈಗ ದುಡ್ಡಿನ ಆಸೆಗೆ ಬಿದ್ದು 'ಸುಳ್ಳು' ಮೂರ್ತಿಯಾಗಿದ್ದಾನೆ.

ಬೆಂಗಳೂರು ಜಿಲ್ಲಾ ಪಂಚಾಯ್ತಿಗೆ ಬರಲು ಕುಮಾರಸ್ವಾಮಿ ಸೋದರ "ಬಾಲಕೃಷ್ಣೇಗೌಡನಿಗೆ 10 ಲಕ್ಷ ಕೊಟ್ಟಿದ್ದೀನಿ" ಎಂದು ರಾಜಾರೋಷವಾಗಿ ಹೇಳಿಕೊಂಡು ತಿರುಗಾಡುತ್ತಿದ್ದಾನೆ. ಇವನ ಕಳ್ಳತನ ನೋಡಿದ ಮೇಲೂ ಕುಮಾರಸ್ವಾಮಿ ಸುಮ್ಮನಿರುವುದು ಈ ಕಾರಣಕ್ಕೇನಾ?

ಕಟುಕ ಯಾಲಕ್ಕೀಗೌಡ

ಹೆಸರಿನಲ್ಲಿ ಏಲಕ್ಕಿ ಇದ್ದರೂ ಕಾರದಪುಡಿ ಗುಣದವನು ಈ ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಯಾಲಕ್ಕಿಗೌಡ.

ಸಚಿವ ಚೆನ್ನಿಗಪ್ಪನಿಗೆ ಕಾಸು ಕೊಟ್ಟು ಇಲ್ಲಿಗೆ ಬಂದೆ ಎಂದು ಪಬ್ಲಿಕ್ಕಾಗಿ ಹೇಳಿಕೊಳ್ಳುತ್ತಾನೆ. ಸತ್ಯಮೂರ್ತಿಯ ಹಫ್ತಾ ವಸೂಲಿ ಕೆಲಸಗಳ ದಂಡನಾಯಕ ಇವನೆ.



ಕಂದಾರಿ

ಕೈಕೆಳಗಿನ ಅಧಿಕಾರಿಗಳ, ನೌಕರರ ಸಣ್ಣಪುಟ್ಟ ತಪ್ಪು ಹುಡುಕಿ ಎನ್‌ಕ್ವಯಿರಿ ಭೂತ ತೋರಿಸಿ ಕಾಸು ಕೀಳುವುದರಲ್ಲಿ ನಿಸ್ಸೀಮ. ತೀರಾ ಇತ್ತೀಚೆಗೆ ನೆಲಮಂಗಲ ತಾಲ್ಲೂಕಿನ ಬಸವನಹಳ್ಳಿ ಗ್ರಾಮ ಪಂಚಾಯಿತಿ ಸೆಕ್ರೆಟರಿ ಶಂಭು ಮಾದಪ್ಪನನ್ನು ಈ 'ಕಾರದ ಪುಡಿ' ಸಸ್ಪೆಂಡ್ ಮಾಡಿಬಿಟ್ಟ. ನಿವೃತ್ತಿಯಾಗಲು ಇನ್ನು ಕೇವಲ 3 ದಿನ ಬಾಕಿ ಇದ್ದ ಶಂಭುಮಾದಪ್ಪ ಮಾಡಿದ್ದ ತಪ್ಪುಗಳೇನೆಂಬುದೇ ಯಾರಿಗೂ ಗೊತ್ತಿಲ್ಲ.

ಕಂಪ್ಯೂಟರ್ ಖರೀದಿ ಹಾಗೂ ಆರ್.ಕೆ. ಸೆಕ್ಯುರಿಟಿ ಹಗರಣಗಳಲ್ಲಿ ಯಾಲಕ್ಕೀಗೌಡನೂ ನೇರ ಭಾಗಿಯಾಗಿದ್ದಾನೆ. ಜಿಲ್ಲಾಪಂಚಾಯ್ತಿಯ ಆಡಳಿತದ ಎಬಿಸಿಡಿಯೂ ಗೊತ್ತಿರದಿರುವುದೇ ಇವನ ಸ್ಪೆಷಾಲಿಟಿ.

ಕಂದಾರಿ ಎಂಬ ಖದೀಮ

ಜಿಲ್ಲಾ ಪಂಚಾಯ್ತಿ ಮುಖ್ಯ ಲೆಕ್ಕಾಧಿಕಾರಿ ಕಂದಾರಿಗೆ ಎರಡೆರಡ್ಲ ನಾಲ್ಕು ಎನ್ನಲುಬಾರದು. ಹಾಗಿದ್ದರೂ ಜಿಲ್ಲಾ ಪಂಚಾಯತ್‌ನ ನೂರಾರು ಕೋಟಿ ರೂ.ಗಳ ಅನುದಾನವನ್ನೂ ಮ್ಯಾನೇಜ್ ಮಾಡುವ ಕೆಲಸ ವಹಿಸಿ ಈಗ ಎಲ್ಲಾ ಕಲಸುಮೇಲೋಗರವಾಗಿದೆ. ತನ್ನ ಕೈಕೆಳಗಿನ ಸಿಬ್ಬಂದಿಗೆ ಕಿಂಚಿತ್ತೂ ಗೌರವ ಕೊಡದ ಕಂದಾರಿ ಬಾಯಿ ತೆರೆದರೆ ಸಾಕು 'ಅವಳು, ಇವನು, ಯಾವಳು, ಯಾವನೆಂದೇ' ಮಾತಾಡುತ್ತಾನೆ. ಸ್ವಾಭಿಮಾನ ಕಳೆದುಕೊಂಡಿರುವ ನೌಕರರೂ ನರಸತ್ತಂತವರಾಗಿ ಬಿಟ್ಟಿದ್ದಾರೆ. ಗ್ರಾಮ ಪಂಚಾಯಿತಿಗಳು ಕಂಪ್ಯೂಟರ್ ಖರೀದಿಸಿದಾಗ ಸರ್ಕಾರ ನಿಗದಿ ಮಾಡಿದ್ದ[illegible] ಐವತ್ತು ಸಾವಿರ ಬದಲಾಗಿ 1 ಲಕ್ಷ ಕೊಟ್ಟಿರುವುದೇಕೆ [illegible] ಬಗ್ಗೆ ಕಂದಾರಿ ಇದುವರೆಗೂ ಏ[illegible] [illegible] ಜರುಗಿಸಿಲ್ಲ.

ಈ [illegible] ಇದೊಂದೇ [illegible]

ಕುದುರೆ ರೇಸ್

(10ನೇ ಪುಟದಿಂದ)

ಮುಂಚಾದವರ ಮೇಲೂ ಕ್ರಮ ಜರುಗಿಸಬೇಕಿತ್ತು. ಆದರೆ ಛೋಟಾರಾಜನ್ ಭೀತಿ. ನೆಪಕ್ಕೆ ಬಡಪಾಯಿ ಜಾಕಿಯನ್ನು ಶಿಲುಬೆಗೇರಿಸಿ ಜನರ ಬಾಯಿ ಮುಚ್ಚಿಸಿದ ಬೆಂಗಳೂರು ಟರ್ಫ್‌ಕ್ಲಬ್. ಈ ತರದ ರೇಸ್ ಫಿಕ್ಸಿಂಗ್ ಅಥವಾ ಮೇಡಪ್ ಇದೇ ಮೊದಲಾಗಿದ್ದರೆ ಪೊಲೀಸ್ ನಿಷ್ಕ್ರಿಯತೆಯನ್ನೋ ಮತ್ತು ಸರ್ಕಾರದ ನಿರ್ಲಕ್ಷ್ಯವನ್ನೋ ಕ್ಷಮಿಸಬಹುದಿತ್ತು. ಈ ಸತ್ಯವೆಂದರೆ ಕರಾಚಿಯ ಡಾನ್ ದಾವೂದ್, ಮುಂಬಯಿ ಡಾನ್ ಛೋಟಾರಾಜನ್, ಬೆಂಗಳೂರಿನ ಮತ್ತೊಬ್ಬ ಡಾನ್, ಹಳೇ ಪಾತಕಿ ಕಾಲಾಪತ್ಥರ್, ಶೇಷಾದ್ರಿಪುರದ ಪುಡಿ ರೌಡಿ ನವೀನ, ರಾಗಂಬಾರ್ ಶೇಷ, ವಿಜಯನಗರದ ಗುಂಡಾ ಕಾಂತ, ರುಕ್ಕು, ಲಂಬೂರಾಮನ ತಮ್ಮ ಅಶೋಕ, ಬೀಇಎಲ್ ಬಸವ ಇತ್ಯಾದಿ ರೌಡಿಗಳೆಲ್ಲರೂ ತಂತಮ್ಮ ಶಕ್ತ್ಯಾನುಸಾರ ಬೆಂಗಳೂರು ರೇಸ್‌ಕೋರ್ಸ್‌ಗೆ ಅಮರಿಕೊಂಡಿದ್ದಾರೆ.

ಈ ಪೈಕಿ ಬೆಂಗಳೂರಿನ ಓರ್ವ (ನಿವೃತ್ತ) ಡಾನ್ ಎಸ್. ಸದಾಶಿವ ಎಂಬಾತನ ಹೆಸರಲ್ಲಿ ನಾಲ್ಕು ಕುದುರೆಗಳನ್ನು ರೇಸಿಗೆ ಬಿಟ್ಟರೆ, ಹಳೇ ಪಾತಕಿ ಕಾಲಾಪತ್ಥರ್ ಮತ್ತು ಶೇಷಾದ್ರಿಪುರದ ಪುಡಿ ರೌಡಿ ನವೀನ್ ಸೇರಿಕೊಂಡು ಐದು ಕುದುರೆಗಳನ್ನು ರೇಸಿಗೆ ಬಿಟ್ಟಿದ್ದಾರೆ. ಶ್ರೀಕಂಠದತ್ತ ಒಡೆಯರ್ ಪತ್ನಿ ಪ್ರಮೋದಾದೇವಿ, ಕೇಂದ್ರ ವಾರ್ತಾ ಖಾತೆ ಮಂತ್ರಿ ಅಂಬಿ, ಬೆಂಗಳೂರಿನ ಡೆಪ್ಯೂಟಿ ಮೇಯರ್ ಲಕ್ಷ್ಮಿನಾರಾಯಣ, ಮಂಗಳೂರಿನ ರೌಡಿ ವಿಜಯ್ ಭಂಡಾರಿ, ಹೀಗೆ ರೇಸು ಕುದುರೆಗಳ ಮೇಲೆ ಕೋಟಿಗಟ್ಟಲೆ ಬಂಡವಾಳ ಹಾಕಿದವರ ಸಂಖ್ಯೆ ದೊಡ್ಡದಿದೆ.

ಸಂಸದ ಎಂಎಂ ರಾಮಸ್ವಾಮಿ ಒಬ್ಬನಿಗೇ ದೇಶಾದ್ಯಂತ ಆರು ಸಾವಿರ ರೇಸ್ ಕುದುರೆಗಳಿವೆ. ದೇಶ ವಿದೇಶಗಳ ಖ್ಯಾತ ಜಾಕಿಗಳ ಪಡೆಯೇ ರಾಮಸ್ವಾಮಿ ಬಳಿಯಿದೆ. ಕುದುರೆ ಜೂಜನ್ನೇ ನಂಬಿ ದೇಶಾದ್ಯಂತ ಕೋಟಿಗಟ್ಟಲೆ ಬೆಟ್ಟಿಂಗ್ ಮಾಡುವ ಲಕ್ಷಾಂತರ ಜನರಿದ್ದಾರೆ. ಅದರಲ್ಲೂ ಬಾಂಬೆ, ಪೂನಾ ಮತ್ತು ಬೆಂಗಳೂರು ಡರ್ಬಿ ರೇಸುಗಳೆಂದರೆ ವಿದೇಶಗಳಲ್ಲೂ ಕೋಟಿ ಮೊತ್ತದ ದುಡ್ಡು ಕಟ್ಟುವ ಜೂಜುಕೋರರಿದ್ದಾರೆ. ಈ ಪೈಕಿ ಎಂಎಂ ರಾಮಸ್ವಾಮಿಯ 'ಮಿಸ್ಟಿಕಲ್' ಎಂಬ ಕುದುರೆಗೆ ಎಂಥಾ ಖ್ಯಾತಿಯಿತ್ತೆಂದರೆ ದೇಶದ ಯಾವೊಂದು ಕುದುರೆಯೂ ಅದನ್ನು ಹಿಂದಿಕ್ಕುವುದು ಸಾಧ್ಯವೇ ಇಲ್ಲ ಎಂಬ ಪ್ರತೀತಿಯಿತ್ತು. ಇಲ್ಲಿಗೆ ವರ್ಷದ ಹಿಂದೆ ಮುಂಬಯಿ ಡರ್ಬಿಯಲ್ಲಿ ಇದ್ದಕ್ಕಿದ್ದಂತೆ ಮಿಸ್ಟಿಕಲ್ ಸೋತು ಹೋಯಿತು. ವಿಚಿತ್ರವೆಂದರೆ ಆವತ್ತು ಅದನ್ನು ಸೋಲಿಸಬಲ್ಲ ಯಾವುದೇ ಕುದುರೆ ರೇಸಿನಲ್ಲಿರಲಿಲ್ಲ, ಹಾಗಿದ್ದೂ ಮಿಸ್ಟಿಕಲ್ ಸೋತಿತ್ತು. ದೇಶ-ವಿದೇಶಗಳಿಂದ ಆವತ್ತು ಮಿಸ್ಟಿಕಲ್‌ನ ಒಂದಕ್ಕೇ ಸರಿಸುಮಾರು 80 ಕೋಟಿ ರೂಪಾಯಿಗಳ ಬೆಟ್ಟಿಂಗ್ ನಡೆದಿತ್ತು. ಇಂಥ ಅನಾಹುತದ ಹಿಂದಿದ್ದವನು ಕರಾಚಿಯ ಡಾನ್ ದಾವೂದ್.

ದಾವೂದ್ ನೇರವಾಗಿ ರಾಮಸ್ವಾಮಿಗೇ ಧಮಕಿ ಹಾಕಿ ಮಿಸ್ಟಿಕಲ್ ಸೋಲುವಂತೆ ನೋಡಿಕೊಂಡಿದ್ದ. ರಾಮಸ್ವಾಮಿ ತನ್ನ ಜಾಕಿ ಪ್ರಕಾಶ್‌ಗೆ ಹೇಳಿಯೇ ಎಳೆಸಿದ್ದ. ಈ ಒಂದೇ ಬಾಬತ್ತಿನಿಂದ ಆವತ್ತು ದಾವೂದ್ 50 ಕೋಟಿ ಜೇಬಿಗಿಳಿಸಿದ್ದ. ಇದು ಭಾರತದ ಮಟ್ಟಿಗೆ ಮೊದಲ ದೊಡ್ಡಮಟ್ಟದ 'ಮೇಡಪ್'.

ಅದಕ್ಕೂ ಹಿಂದೆ ರೇಸ್ ಫಿಕ್ಸಿಂಗ್ ಇರಲಿಲ್ಲವೆಂದಲ್ಲ. ಇಲ್ಲಿಗೆ ಮೂರು ವರ್ಷದ ಹಿಂದೆ ಬೆಂಗಳೂರು ಡರ್ಬಿಗೆ ಬಂದಿದ್ದ ಇಟಲಿಯ ಜಾಕಿ ಗೆಲ್ಲಾಘರ್ ಎಂಬಾತನ ಮೇಲೆ ರೇಸ್‌ಕೋರ್ಸ್ ಎದುರಿಗೇ ಮುಂಬಯಿ ಶೂಟರ್ ಒಬ್ಬ ಗುಂಡು ಹಾರಿಸಿದ್ದ. ಬುಲೆಟ್ ಆತನ ಕಿವಿ ಸವರಿಕೊಂಡು ಹೋಗಿತ್ತು. ಹಕೀಕತ್ತೇನೆಂದರೆ: ಈ ಗೆಲ್ಲಾಘರ್ ಎಂಬ ಜಾಕಿ ಎಂಎಂ ರಾಮಸ್ವಾಮಿಯ ಕುದುರೆಗೆ ಜಾಕಿಯಾಗಿದ್ದ. ಮುಂಬಯಿಯಲ್ಲಿ ಅದ್ಹೇಗೋ ಈತನನ್ನು ಛೋಟಾರಾಜನ್ ಗ್ಯಾಂಗ್ ಬುಟ್ಟಿಗೆ ಹಾಕಿಕೊಂಡು ಒಂದು ಕೋಟಿ ರೂಪಾಯಿಗಳಷ್ಟು ದುಡ್ಡು ಕೊಟ್ಟಿತ್ತು. ಆದರೆ ಗೆಲ್ಲಾಘರ್ ಛೋಟಾ ರಾಜನ್ ಕಡೆಯವರಿಗೇ ಕೈಕೊಟ್ಟು ಸೋಲಿಸಬೇಕಿದ್ದ ತನ್ನ ಕುದುರೆಯನ್ನು ಗೆಲ್ಲಿಸಿಬಿಟ್ಟ. ನಂಬಿ 25 ಕೋಟಿ ಸುರಿದಿದ್ದ ರಾಜನ್ ಗ್ಯಾಂಗ್‌ಗೆ ದೊಡ್ಡ ಲುಕ್ಸಾನಾಗಿತ್ತು. ಜಿದ್ದಿಗೆ ಬಿದ್ದ ರಾಜನ್ ಗೆಲ್ಲಾಘರ್ ಮೇಲೆ ಬೆಂಗಳೂರಿನಲ್ಲಿ ಫೈರ್ ಮಾಡಿಸಿದ್ದ. ಬೆಂಗಳೂರಿನ ತನಕ ತನ್ನನ್ನು ರಾಜನ್ ಹಿಂಬಾಲಿಸಬಹುದೆಂಬ ನಿರೀಕ್ಷೆಯೇ ಇಲ್ಲದ ಗೆಲ್ಲಾಘರ್ ಇಷ್ಟಾಗಿದ್ದೇ ಮುಂಬಯಿಗೆ ಹೋಗಿ ಛೋಟಾ ರಾಜನ್ ಬಂಟರ ಕಾಲಿಗೆ ಬಿದ್ದು ಪ್ರಾಣಭಿಕ್ಷೆ ಬೇಡಿದ. ಅನಂತರ ಮುಂಬಯಿಯಲ್ಲಿ ರಾಜನ್ ಪರವಾಗಿ ಎರಡು ರೇಸ್ ಗೆಲ್ಲಿಸಿಕೊಟ್ಟ.

ಈ ಗೆಲ್ಲಾಘರ್‌ನನ್ನು ಮುಂದಿಟ್ಟುಕೊಂಡೇ ಛೋಟಾರಾಜನ್ ಎಂಎಂ ರಾಮಸ್ವಾಮಿಯ ಅಷ್ಟೂ ಕುದುರೆಗಳ ಜಾತಕ ತಿಳಕೊಂಡು ಇಂಥಾ ರೇಸಲ್ಲಿ ಇಂಥದ್ದೇ ಗೆಲ್ಲುತ್ತದೆ ಎಂಬ ಮಾಹಿತಿ ಪಡೆಯುತ್ತಿದ್ದ. ದುಡ್ಡೂ ಸಿಕಾಪಟ್ಟೆ ಬರುತ್ತಿತ್ತು. ಇದು ದಾವೂದ್ ಕಿವಿಗೆ ಮುಟ್ಟಿದ್ದೇ ಆತ ನೇರವಾಗಿ ಎಂಎಂ ರಾಮಸ್ವಾಮಿಗೆ ಫೋನ್ ಮಾಡಿ ಜಾಕಿ ಗೆಲ್ಲಾಘರ್‌ನನ್ನು ಹೊರದಬ್ಬಿಸಿದ. ಹಾಗಂತ ಗೆಲ್ಲಾಘರ್ ಸುಮ್ಮನಾಗದೇ ಮತ್ತೊಬ್ಬ ಟ್ರೈನರ್ ಮೈಕೆಲ್ ಈಶ್ವರ್‌ನ ಬಳಿ ಜಾಕಿಯಾಗಿ ಸೇರಿ ಮೈಸೂರಿನ ಡರ್ಬಿಯಲ್ಲಿ ಗ್ರೀನ್ ಬಾಕ್ಸ್ ಎಂಬ ಸಾಧಾರಣದ ಕುದುರೆಯನ್ನು ಗೆಲ್ಲಿಸಿ ಛೋಟಾ ರಾಜನ್‌ಗೆ ಮತ್ತೆ 20 ಕೋಟಿಯ ಲಾಭ ಮಾಡಿಕೊಟ್ಟಿದ್ದು ಇಲ್ಲಿಗೆ ಎರಡೂವರೆ ತಿಂಗಳ ಹಿಂದೆ. ಇದು ಕೇವಲ ಮುಂಬಯಿ ಡಾನ್‌ಗಳ ಉಸಾಬರಿಯಷ್ಟೇ ಅಲ್ಲ; ಇತ್ತೀಚೆಗೆ ಬೆಂಗಳೂರಿನ ಹಳೇ ರೌಡಿಗಳೂ ರೇಸ್ ಫಿಕ್ಸಿಂಗ್ ದಂಧೆಗೆ ಕೈಹಾಕಿದ್ದಾರೆಂದರೆ (ಬಾಕ್ಸ್ ನೋಡಿ) ಜನ ನಂಬಿ ಲಕ್ಷಾಂತರ ರೂಪಾಯಿ ಬೆಟ್ಟಿಂಗ್ ಕಟ್ಟುವುದರಲ್ಲಿ ಯಾವ ಅರ್ಥವಿದೆ?

ಇದೇ ಡಿಸೆಂಬರ್ 6 ರಂದು ರೇಸ್‌ಕೋರ್ಸ್‌ನಲ್ಲಿ ನಡೆದ ಹಿಂಸಾಚಾರದ ಬಗ್ಗೆ ಸರ್ಕಾರ ಸಣ್ಣದೊಂದು ತನಿಖೆ ಮಾಡಿಬಿಟ್ಟರೂ ನಡೆದ ಹಗಲುದರೋಡೆ ಬಯಲಾಗುತ್ತದೆ. ವಂಚನೆಯ ಮೊತ್ತವೇ ಎಂಭತ್ತು ಕೋಟಿಗೂ ಮೀರಿದೆ. ಕಳೆದ ಕೆಲ ವರ್ಷಗಳಿಂದಲೇ ಲೆಕ್ಕ ಹಾಕಿದರೆ ಈ ತರದ ಅದೆಷ್ಟು ಗೋಲ್‌ಮಾಲ್‌ಗಳಾಗಿಲ್ಲ. ವಿನಿವಿಂಕ್ ಶಾಸ್ತ್ರಿಯ ಆಪಾಟ ವಂಚನೆಯನ್ನೇ ಭಯಂಕರವಾಗಿ ತನಿಖೆ ನಡೆಸಿದ ಬೆಂಗಳೂರು ಪೊಲೀಸರಿಗೆ ಈತನಕ ರೇಸ್ ಫಿಕ್ಸಿಂಗ್ ದಂಧೆ ಏಕೆ ಕಂಡಿಲ್ಲ? ರೇಸ್ ಅಧಿಪತಿ ಎಂಎಂ ರಾಮಸ್ವಾಮಿಯೇ ಜೆಡಿಎಸ್ ನಾಯಕನೆಂದ ಮೇಲೆ ಮೊದಲು ಆತನನ್ನೇ ಜೈಲಿಗೆ ದಬ್ಬಬೇಕೆಂಬ ಭೀತಿಯೆ? ●

ಕಾಮುಕ ಜಾಕಿಗಳೂ ಕೇಡಿ ಶಿಷ್ಯರೂ

ಕುದುರೆ ಜೂಜಿನ ಸುತ್ತ ಏನೆಲ್ಲಾ ದುರಾಚಾರಗಳು ಸಂಭವಿಸಲಾರಂಭಿಸಿವೆ ಎಂಬುದಕ್ಕೆ ಇ... ಘಟನೆಗಳೇ ಸಾಕ್ಷಿ. ಒಂದಾನೊಂದು ಕಾಲಕ್ಕೆ ಜಾಕಿಯಾಗಿದ್ದ ಎಸ್. ನರೇಡು ಎಂಬಾತ ಸಭ್ಯ ಟ್ರೈನ... ಈತನ ತಮ್ಮ ಮಲ್ಲೇಶ್ ನರೇಡು ದೇಶದ ಹೆಸರಾಂತ ಜಾಕಿ. ಖ್ಯಾತ ಶಿಪ್ಪಿಂಗ್ ಉದ್ಯಮಿ ಝುಂಝುಬಾ... ಈತನ ಖ್ಯಾತಿ ಕಂಡೇ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ್ದ.



ಜಾಕಿ ನೆರ್ರುಡು

ಬರಬರುತ್ತ ಬುಕ್ಕಿಗಳು ಮತ್ತು ಡಾನ್‌ಗಳ ಜೊತೆ ಕೈಜೋಡಿಸಿದ ಮಲ್ಲೇಶ್ ನರೇಡು ಆಮಿಷಕ್ಕೆ ಬಿದ್ದೇ ಇಲ್ಲಿಗೆ ಮೂರು ತಿಂಗಳ ಹಿಂದೆ ತನ್ನದೇ ಕುದುರೆಯನ್ನು ಸೋಲಿಸಿ ಸಿಕ್ಕಿಬಿದ್ದು 4 ತಿಂಗಳ ಮಟ್ಟಿಗೆ ಸಸ್ಪೆಂಡಾದ. ಈತನಿಗೆ ದಾವೂದ್ ಮತ್ತು ಛೋಟಾರಾಜನ್ ಇಬ್ಬರೂ ಗೊತ್ತು. ಇಲ್ಲಿಗೆ ತಿಂಗಳ ಹಿಂದೆ ಪೂನಾ ರೇಸಿಗೆ ಹೋದವನು ಬುಕ್ಕಿಯೊಬ್ಬ ಕಳಿಸಿದ ಹೆಂಗಸೊಬ್ಬಳ ಜೊತೆ ಲಾಡ್ಜಿನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದ.

ಹೀಗೆ ಜಾಕಿ ನರೇಡುನನ್ನು ಪೊಲೀಸರಿಗೆ ಹಿಡಿದು ಕೊಟ್ಟವನು ಮತ್ತೊಬ್ಬ ಕುದುರೆಗಳ ಧಣಿ ಝುವೇರಿ ಪೂನಾವಾಲಾ. ಈತ ಎಂಎಂ ರಾಮಸ್ವಾಮಿಯ ಪಾರ್ಟನರ್. ಕಾರಣವಿಷ್ಟೇ: ರಾಮಸ್ವಾಮಿ ಮತ್ತು ಪೂನಾವಾಲಾರ ಕುದುರೆಗಳನ್ನು ಈತ ಸೋಲಿಸುತ್ತಿದ್ದ!

ಈತನ ಅಣ್ಣ ಎಸ್. ನರೇಡು ಉಪಮೇಯರ್ ಲಕ್ಷ್ಮಿನಾರಾಯಣರ ತಲೆ ಕೆಡಿಸಿ ಮೂರು ಕೋಟಿಯ ಬಂಡವಾಳ ಹಾಕಿಸಿ 15 ಕುದುರೆಗಳನ್ನು ತಲೆಗೆ ಕಟ್ಟಿದ. ತಮಾಷೆಯೆಂದರೆ ಯಾವತ್ತು ಲಕ್ಷ್ಮಿನಾರಾಯಣ ಬೆಟ್ಟಿಂಗ್ ಮಾಡುತ್ತಾರೋ ಆವತ್ತೇ ಅವರ ಕುದುರೆ ಸೋಲುತ್ತದೆ. ಆದರೆ ಟ್ರೈನ... ನರೇಡು ಬೆಟ್ ಮಾಡಿದಾಗ ಮಾತ್ರ ಗೆಲ್ಲುತ್ತದೆ. ಈತನ ಮಗನೇ ಕುಖ್ಯಾತ ಜಾಕಿ ಸೂರಜ್ ನರೇಡು...



ಸಪ್ಲೇಯರ್ ಮಲಬಾರಿ

ಈತ ಅಪ್ಪ ಮತ್ತು ಚಿಕ್ಕಪ್ಪನಿಗಿಂತಲೂ ಕ್ರಿಮಿನಲ್. ಇಲ್ಲಿ... ವರ್ಷದ ಹಿಂದೆ ಬಾಂಬೆ ರೇಸಿನಲ್ಲಿ ಯೋಗೇಂದ್ರಸಿಂಗ್ ಎಂ... ಪ್ರಾಮಾಣಿಕ ಜಾಕಿಯೊಬ್ಬನನ್ನು ಕೈಯಿಂದ ಕೆಳಕ್ಕೆ ತಳ್ಳಿಬಿ... ಬಿದ್ದ ಯೋಗೇಂದ್ರಸಿಂಗ್ ಕುದುರೆಗಳ ಕಾಲಿಗೆ ಸಿಕ್ಕಿ ಸ... ಹೋದ. ಯಾವ ಆಮಿಷಕ್ಕೂ ಬಲಿಯಾಗದೇ ಮನಸ್ಸಾಕ್ಷಿ... ತಕ್ಕಂತೆ ಓಡಿಸಿ ಜೂಜುಗಾರರಿಗೆ ದುಡ್ಡು ದುಡಿದು ಕೊಡುತ್ತಿ... ಯೋಗೇಂದ್ರಸಿಂಗ್‌ನನ್ನು ಸಾಯಿಸಿದ ತಪ್ಪಿಗೆ ಸೂರಜ್ ನರೇಡು... ಟರ್ಫ್‌ಕ್ಲಬ್ ಕೊಟ್ಟ ಶಿಕ್ಷೆ ಬರೇ ಮೂರು ತಿಂಗಳ ಸಸ್ಪೆಂ... ಮಾತ್ರ! ಸೂರಜ್ ನರೇಡುಗೆ ಸಿಕಾಪಟ್ಟೆ ಮೂಗುಬೊ... ಖಯಾಲಿ. ಅದು ಒದಗಿಬಿಟ್ಟರೆ ತಾನೇ ಕೂತ ಕುದುರೆಯನ್ನ... ಎಳೆದು ಬಿಡುತ್ತಾನೆ. ಈತನ ತಮ್ಮ ರಾಜೇಶ್ ನೆರುಡು ಕೂ... ಮತ್ತೊಬ್ಬ ಘಾಡು. ತಾನು ಜಾಕಿಯಾಗಲು ಮಿಕ್ಕೆಲ್ಲ ಜಾಕಿಗಳಿ... ಲಂಚ ಕೊಟ್ಟು ಸಿಕ್ಕಿಬಿದ್ದ. ತನ್ನನ್ನು ಸೋಲಿಸಿದ ಎಸ್. ರಾ... ಎಂಬ ಜಾಕಿಯನ್ನು ಶೇಷಾದ್ರಿಪುರದ ಪುಡಿ ರೌಡಿಗಳನ್ನು ಬಿಟ್ಟ... ಹೊಡೆಸಿದ. ಇಂಥ ಕಾಮುಕ ಜಾಕಿಗಳಿಗೆಲ್ಲ ಹುಡುಗಿಯರನ್ನು ಒದಗಿಸುವವನು ಶೇಷಾದ್ರಿಪುರ... ಮೇನ್ ರಸ್ತೆಯ ಭಾಗ್ಯಲಕ್ಷ್ಮಿ ಬುಕ್ ಸ್ಟೋರ್ಸ್ ಮಾಲೀಕ ರೇಪಿಸ್ಟ್ ರಾಮಚಂದ್ರರಾವ್. ಈತ ಅಪ್ರಾ... ಬಾಲಕಿಯೊಬ್ಬಳ ಅತ್ಯಾಚಾರದ ಕೇಸಲ್ಲಿ ಜೈಲಿಗೂ ಹೋಗಿಬಂದ. ಆ ನತದೃಷ್ಟೆಯ ಆತ್ಮಹತ್ಯೆಗ... ಕಾರಣನಾದ. ಜೊತೆಗೆ ಶಿವಾನಂದ ಸ್ಟೋರ್‌ನ ಮತ್ತೊಬ್ಬ ಮಲಬಾರಿಯೂ ಜಾಕಿಗಳಿಗೆ ಕಾಲ್‌ಗರ್ಲ್... ಸಪ್ಲೈ ಮಾಡಿಯೇ ಇವತ್ತು ಲಕ್ಷಾಧೀಶ.

ಟ್ರೈನರ್ ಸಮರ್ ಸಿಂಗ್, ಈತನ ಮಗ ಜಾಕಿ ಎಸ್. ರಾಜೇಶ್ ಮತ್ತು ಸಮರ್‌ಸಿಂಗ್‌ನ 2 ... ಹೆಂಡ್ತಿಯ ಮಕ್ಕಳಾದ ವಿಶಾಲ್ ಯಾದವ್ ಮತ್ತು ರಾಕೇಶ್ ಎಂಬ ಜಾಕಿಗಳು, ಇವರ ಶಿ... ಜಮಾದಾರ್ ಅಶೋಕ್, ಕುದುರೆ ಧಣಿ ವಿಜಯ್‌ಕುಮಾರ್ ಭಂಡಾರಿ ಎಲ್ಲರೂ ರೇಸ್ ಫಿಕ್ಸಿ... ಪಾರ್ಟಿಗಳೇ. ಈ ಪೈಕಿ ಜಾಕಿ ರಾಜೇಶ್ ಒಬ್ಬನೇ 20 ಕೋಟಿಯ ಆಸ್ತಿ ಮಾಡುತ್ತಾನೆಂದರೆ; ಕುದುರೆಗಳನ್ನ... ನಂಬಿ ಜೂಜು ಕಟ್ಟುವ ಯಾರಿಗಾದರೂ ಉಳಿಗಾಲವುಂಟೆ?

ಕಂಪ್ಯೂಟರ್ ಹಗರಣ


(ಹಿಂದಿನ ಪುಟದಿಂದ)

ಕಳೆದ ಮೇ ತಿಂಗಳಿನಲ್ಲಿ ಐಎಎಸ್ ರಂಗಸ್ವಾಮಿ ಹೋಗಿ ಸೀನಿಯರ್ ಕೆಎಎಸ್ ಸತ್ಯಮೂರ್ತಿ, ಜಿಲ್ಲಾ ಪಂಚಾಯಿತಿ ಸಿಇಓ ಆಗಿ ಬಂದ. ಇವನ ಹೆಸರು ಸತ್ಯಮೂರ್ತಿಯೇ ಆಗಿದ್ದರೂ ಹುಟ್ಟಾ ಸುಳ್ಳುಬುರುಕ. ತಾನೊಬ್ಬ ವೈರಾಗ್ಯಮೂರ್ತಿಯಂತೆ 'ರೀ... ನಾನ್ ಓದಿದ್ದು ಶೃಂಗೇರಿಲಿ ಕಂಡ್ರೆ' ಎನ್ನುವುದು. 'ಸರಸ್ವತಿ ನನ್ನ ನಾಲಿಗೆ ಮೇಲೆ ನಲಿತಿದ್ದಾಳೆ' ಎಂದು ಭಾಷಣ ಕುಟ್ಟುವ ಚಟವೂ ಇವನಿಗಿದೆ. ಇಂಥ ಸತ್ಯಮೂರ್ತಿ ಜಿಲ್ಲಾ ಪಂಚಾಯಿತಿಗೆ ಬಂದ ಹೊಸದರಲ್ಲಿ ಮಿಂಚಿನ ವೇಗದಲ್ಲಿ ಕೆಲಸ ಶುರು ಮಾಡಿದ್ದ. ನೌಕರರಲ್ಲಿ ಶಿಸ್ತು ದಕ್ಷತೆ ತಂದ. ಪ್ರಗತಿ ಪರಿಶೀಲನೆ ಎಂದು ಊರೂರು ಅಲೆದ. ದಿನಕ್ಕೊಂದು ಆಫೀಸರ್‌ಗಳ ಮೀಟಿಂಗ್ ನಡೆಸಿದ. ನೌಕರರ ಸಭೆ ಕರೆದು ನಿಮ್ಮ ಕುಂದುಕೊರತೆ ಹೇಳಿ ಎಂದಿದ್ದ.

ಆಗ ಸತ್ಯಮೂರ್ತಿಯ ಕೆಲಸ ನೋಡಿದವರು 'ಪರವಾಗಿಲ್ಲ ಭೇಷ್' ಎನ್ನಲು ಶುರು ಮಾಡಿದ್ದರು. ಆದರೆ ಇವೆಲ್ಲಾ ಒಂದು ರೌಂಡ್ ಮುಗಿದ ಮೇಲೆ ಸತ್ಯಮೂರ್ತಿ ಹೋಗಿ ಸುಳ್ಳುಮೂರ್ತಿಯಾಗಿ ಬದಲಾಗಿಬಿಟ್ಟ. ಮೀಟಿಂಗ್, ಟೂರೂ ಮಾಡಿ ಮಾಡಿ ಪ್ರಾಮಾಣಿಕರಾರು, ದಕ್ಷರಾರು, ಭ್ರಷ್ಟರ್ಯಾರ್ಯಾರೆಂದು ಪತ್ತೆಹಚ್ಚಿ ಕೊನೆಗೆ ಈಗ ಎಲ್ಲಾ ಹಂತಗಳಲ್ಲೂ ತನ್ನದೇ ಒಂದು ಗುಂಪು ಕಟ್ಟಿಕೊಂಡಿದ್ದಾನೆ.

ಅವರೆಲ್ಲಾ ಒಂದೋ ಸತ್ಯಮೂರ್ತಿ ಹೇಳಿದ್ದಕ್ಕೆಲ್ಲಾ ಕೋಲೆಬಸವನಂತೆ ತಲೆ ಅಲ್ಲಾಡಿಸುವವರು ಅಥವಾ ಭ್ರಷ್ಟಾಚಾರದಲ್ಲಿ ಪಾಲುದಾರರಾಗಿದ್ದಾರೆ. ಹೊಸತರಲ್ಲಿ ಹುಮ್ಮಸ್ಸಿನಿಂದ ಕೆಲಸ ಮಾಡುತ್ತಾ ಒಳ್ಳೇ ಆಫೀಸರ್ ಅನ್ನಿಸಿಕೊಳ್ಳುವ ಪ್ರಯತ್ನವನ್ನೂ ಮಾಡಿದ್ದ ಸತ್ಯಮೂರ್ತಿಯ ಅಸಲಿ ಮುಖ ಬೇರೆಯೇ ಇತ್ತು.

ಕಂಪ್ಯೂಟರ್ ಸರಬರಾಜು ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸಬೇಕಾಗಿ ಬಂದಾಗ ಯಾವ ಗ್ರಾಮ ಪಂಚಾಯಿತಿಗಳೂ ಕಂಪ್ಯೂಟರ್ ಖರೀದಿಸಿಲ್ಲ ಎಂಬುದು ಯಾವಾಗ ಗೊತ್ತಾಯಿತೋ ಸತ್ಯ ಚುರುಕಾದ. ಹೇಗೂ ಖರೀದಿಗೆ ಬೇಕಾದ ಹಣ ಸರ್ಕಾರದಿಂದ ಬಿಡುಗಡೆಯಾಗಿ ಗ್ರಾಮ ಪಂಚಾಯಿತಿಗಳಲ್ಲಿ ಇತ್ತು. 'ಸರಿ ಈಗ ನೋಡಿ ನನ್ನ ಕರಾಮತ್ತು' ಎಂದವನೇ ತನಗೆ ಗೊತ್ತಿರುವ ದೇವ್ಸ್ ಎಂಟರ್‌ಪ್ರೈಸಸ್ ಎಂಬ ಖಾಸಗಿ ಕಂಪನಿಯ ರಂಗನಾಥನನ್ನು ಕರೆದು ಒಂದು ಡೀಲ್ ಕುದುರಿಸಿ ಕೊಂಡು ಬಿಟ್ಟ. ನಂತರ ಎಲ್ಲಾ ತಾಲ್ಲೂಕು ಪಂಚಾಯಿತಿ ಇಓಗಳನ್ನು ಹಾಗೂ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳನ್ನು ಕರೆ ಕರೆದು 'ಸರ್ಕಾರಿ ಆದೇಶ ಇದೆ, ಕಂಪ್ಯೂಟರ್ ತಗೊಳ್ಳಿ' ಎಂದು ಒತ್ತಾಯ ಮಾಡತೊಡಗಿದ. ಕೊನೆಯಲ್ಲಿ ನೀವು ನೆಪಕ್ಕೆ ಕೊಟೇಷನ್ ಕರೆದಂತೆ ತೋರಿಸಿ ಸಾಕು, ದೇವ್ಸ್ ಕಂಪನಿಯವರೇ ಬಂದು ಬಾಕಿ ವಿಚಾರ ನೋಡಿಕೊಳ್ತಾರೆ ಎಂದೂ ಹೇಳಿಕೊಟ್ಟ. ಇದೆಲ್ಲಾ ಶುರುವಾಗಿದ್ದು ಕಳೆದ ಅಕ್ಟೋಬರ್ ತಿಂಗಳಿನಲ್ಲಿ. ಸತ್ಯಮೂರ್ತಿ ಈ ಮಹತ್ಕಾರ್ಯಕ್ಕೆ ಕೈಯಿಟ್ಟ ಕೇವಲ ಒಂದೂವರೆ ತಿಂಗಳಲ್ಲೇ ಜಿಲ್ಲೆಯ ಎಲ್ಲಾ 228 ಗ್ರಾಮ ಪಂಚಾಯಿತಿಗಳಲ್ಲೂ ಈಗ ಕಂಪ್ಯೂಟರ್‌ಗಳು ಬಂದು ಕುಳಿತಿವೆ.



ಜಿಪಂ ಅಧ್ಯಕ್ಷೆ ಶಾಂತಮ್ಮ

ಒಂದೊಂದು ಸಾಧಾರಣ ಕಂಪ್ಯೂಟರ್‌ಗೂ 99,981 ರೂಪಾಯಿ ಅಂದರೆ ಲಕ್ಷಕ್ಕೆ 19 ರೂ. ಕಡಿಮೆ ಪಾವತಿಸಿ ಪಂಚಾಯಿತಿಗಳು ಕಂಪ್ಯೂಟರ್ ಖರೀದಿಸಿವೆ. ಹೀಗೆ ಮಾಡಿರುವುದೇಕೆಂದರೆ ಯಾವುದೇ ಖರೀದಿ ಒಂದು ಲಕ್ಷ ರೂ. ಮೊತ್ತ ದಾಟಿದರೆ ಪಾರದರ್ಶಕ ನಿಯಮದಂತೆ ಟೆಂಡರ್ ಕರೆಯಬೇಕಾಗುತ್ತದೆ. ಟೆಂಡರ್ ಕರೆದರೆ ಆಗ ಯಾವುದಾದರೂ ಕಂಪನಿ 30 ಸಾವಿರಕ್ಕೆ ಕಂಪ್ಯೂಟರ್ ಸರಬರಾಜಿಗೆ ಒಪ್ಪಬಹುದು. ಆಗ ಸತ್ಯನಿಗೆ ಲಂಚ ಸಿಗಬೇಕು ಹೇಗೆ?

ಇಷ್ಟು ವ್ಯವಸ್ಥೆ ಮಾಡಿಕೊಟ್ಟ ಸತ್ಯಮೂರ್ತಿ ದೇವ್ಸ್ ಕಂಪನಿಯವರನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ಕಳಿಸಿದ. ದೇವ್ಸ್‌ನವರೇ ತಮ್ಮದೊಂದು ಒರಿಜಿನಲ್ ಕೊಟೇಷನ್ ಜೊತೆಗೆ ಎರಡೆರಡು ನಕಲಿ ಕಂಪನಿಗಳ ಕೊಟೇಷನ್ ಕೊಟ್ಟು ಕೊನೆಗೆ ಎಲ್ಲಾ ಖರೀದಿ ಆರ್ಡರ್ ಅನ್ನು ತಾವೇ ಲಪಟಾಯಿಸಿ ಕೋಟಿಗಟ್ಟಲೆ ದುಡ್ಡು ತಿಂದಿದ್ದಾರೆ. ಇದರಲ್ಲಿ ಸತ್ಯನ ಪಾಲು ಒಂದು ಕೋಟಿ ಎನ್ನಲಾಗಿದೆ.

ಆರ್.ಕೆ. ಸೆಕ್ಯುರಿಟಿ ಡೀಲ್‌ಗಳು

ಕರ್ನಾಟಕದ ಜಿಲ್ಲಾ ಪಂಚಾಯಿತಿ ಇತಿಹಾಸದಲ್ಲೇ ಕಂಡುಬಾರದ ವಿಚಿತ್ರ ಭ್ರಷ್ಟಾಚಾರ ಪ್ರಕರಣ ಇದು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯಲ್ಲಿ ಅಗತ್ಯವಿದ್ದಷ್ಟು ಸಿಬ್ಬಂದಿ ಇದ್ದಾಗಲೂ ಈ ಸತ್ಯಮೂರ್ತಿ ತನ್ನ ನೆಂಟರಾದ ಕವಿತಾಳ ಆ... ಸೆಕ್ಯುರಿಟಿ ಏಜೆನ್ಸಿ ಮೂಲಕ ಮಂಜುನಾಥ, ಹ... ಲಕ್ಷ್ಮಿಕಾಂತ.... ಹೀಗೆ ಹತ್ತು ಜನರನ್ನು ಜಿಪ... ಅಕ್ರಮವಾಗಿ ನೇಮಕ ಮಾಡಿಕೊಂಡಿದ್ದಾನೆ. ಇವರಿ... 5 ಸಾವಿರದ ತನಕ ಸರ್ಕಾರಿ ಸಂಬಳ ಮಂಜೂ... ಮಾಡಿಸಿ ಮೂರು ಸಾವಿರ ಕೈಗಿಟ್ಟು ಉಳಿದಿ... ಕವಿತಾಳ ಸೆರಗಿಗೆ ಸುರಿಯುತ್ತಿದ್ದಾನೆ. ಇಷ್ಟೇ... ಜಿಲ್ಲೆಯ ಎಲ್ಲಾ ಬಿಸಿಎಂ ಹಾಗೂ ಸಮಾಜ ಕ... ಇಲಾಖಾ ಹಾಸ್ಟೆಲ್‌ಗಳಿಗೂ ಆರ್.ಕೆ. ಸೆಕ್ಯುರಿಟಿ... ನೂರಾರು ಸೆಕ್ಯುರಿಟಿ ಸಿಬ್ಬಂದಿ, ಅಡಿಗೆಯವರನ್ನು ತ... ಪ್ರತಿ ತಿಂಗಳೂ ಲಕ್ಷಾಂತರ ರೂಪಾಯಿಗಳನ್ನು ದೋ... ತ್ತಿದ್ದಾನೆ. ಆಡಳಿತ ಉಪಕಾರ್ಯದರ್ಶಿ ಯಾಲಕ್ಕಿ... ಹಾಗೂ ಮುಖ್ಯ ಲೆಕ್ಕಾಧಿಕಾರಿ ಕಂದಾರಿ ... ಖದೀಮರಿಬ್ಬರೂ ಈ ಡೀಲ್‌ಗಳಲ್ಲಿ ಪಾಲು... ನಾಗಿದ್ದಾರೆ.

ಒಂದು ಆಶ್ಚರ್ಯದ ವಿಚಾರ ಏನೆಂದರೆ... ಜಿಲ್ಲಾ ಪಂಚಾಯಿತಿಗೆ ಒಂದು elected b... ಇದೆ. ಅಧ್ಯಕ್ಷರು, ಸದಸ್ಯರೆಲ್ಲಾ ಇದ್ದಾರೆ. ಆ... ನಡೆಸಲು ನಿರ್ಧಾರ ತೆಗೆದುಕೊಳ್ಳಬೇಕೆಂದಾಗ ... ನಿಯಮ ಅನುಸರಿಸಬೇಕೆಂಬ ಕಾನೂನುಗಳೇ ... ಆದರೆ ಯಾರ ಗಮನಕ್ಕೂ ಕಂಪ್ಯೂಟರ್ ಖ... ಆರ್.ಕೆ. ಸೆಕ್ಯುರಿಟಿ ವಿಚಾರ ಗೊತ್ತಾಗಿಲ್ಲ.


ಸ್ವತಃ ಈ ರಾಜ್ಯದ ಮುಖ್ಯಮಂತ್ರಿಯೇ ಈ ಜಿ... ಉಸ್ತುವಾರಿ ಸಚಿವರೂ ಹೌದು. ಹೀಗಿದ್ದಾ... ಮುಖ್ಯಮಂತ್ರಿಯ ನೆರಳಲ್ಲೇ ಸಿಇಓ ಸತ್ಯಮೂ... ಡಿ.ಎಸ್. ಯಾಲಕ್ಕೀಗೌಡ ಹಾಗೂ ಸಿಎಓ ಕಂ... ಈ ತರ ಹಗಲು ದರೋಡೆ ನಡೆಸುತ್ತಿದ್ದಾರೆ... ಹಣ ಜೀರ್ಣಿಸಿಕೊಳ್ಳುತ್ತಿದ್ದಾರೆಂದರೆ...

ಮುಖ್ಯಮಂತ್ರಿ ಕುಮಾರಸ್ವಾಮಿ ಇನ್ನೆಂಥ ... ಯಕ್ ಆಡಳಿತಗಾರನಿರಬೇಕು ಯೋಚಿಸಿ ನೋ...

ಹಾವೇರಿಯಿಂದ ಹಾರಿಹೋದ ಎಸ್ಪಿ ಸಿದ್ದ....

ಸಿದ್ದ ಹಾರಿಹೋಗಿದ್ದಾನೆ. ತೂರಿಕೊಂಡು ಹೋಗಿದ್ದಾನೆ.... ಸೀದಾ ಹೋಗಿ ಕೊಪ್ಪಳಕ್ಕೆ ಅಮರಿಕೊಂಡಿದ್ದಾನೆ ಶನಿಯಂತೆ!

ಹಾವೇರಿಯಲ್ಲಿ ಒಂದಿಷ್ಟು ನಿದ್ದೆ ಹೊಡೆದು, ಒಂದಿಷ್ಟು ತೂಕಡಿಸಿ, ಒಂದಿಷ್ಟು ಆಕಳಿಸಿ, ತಾನು ಸ್ವಲ್ಪ ತಿಂದು, ತನ್ನವರಿಗೆ ಸಖತ್ ತಿನ್ನಿಸಿ ಹಾವೇರಿಯಿಂದ ಎತ್ತಂಗಡಿಯಾಗಿದ್ದಾನೆ ಎಸ್ಪಿ ಸಿದ್ದಣ್ಣ. ಇಲ್ಲಿಗೆ ಬರುವ ಮೊದಲು ಶಿವಮೊಗ್ಗದಲ್ಲೂ ಇದೇ ಆಟ ಆಡಿಯೇ ಬಂದಿದ್ದ ಈ ಸೋಮಾರಿ ಸಿದ್ದ.


ಎಸ್ಪಿ ಸಿದ್ದಣ್ಣ

ಹಿಂದುಳಿದ ವರ್ಗಕ್ಕೆ ಸೇರಿರುವ ಎಚ್.ಎನ್. ಸಿದ್ದಣ್ಣನಿಗೆ ಹಿಂದುಳಿದವರ ಮೇಲೆ ಅಪಾರಪ್ರೀತಿ! ಅದೆಷ್ಟು 'ಅಪಾರ'ವೆಂದರೆ ಹಿಂದುಳಿದ ವರ್ಗಕ್ಕೆ ಸೇರಿದ ಪೊಲೀಸಪ್ಪಗಳಿಗೆಲ್ಲ 'ತಿನ್ನಿ, ತಿನ್ನಿ... ನಿತ್ಯವೂ ತಿನ್ನಿ... ನಮ್ಮಪ್ಪನ ಮನೆಯದಲ್ಲ... ನಿಮ್ಮಪ್ಪನ ಮನೆಯದಲ್ಲ' ಎಂದು ಹುರಿದುಂಬಿಸಿ ಹಾವೇರಿಯನ್ನು ಹಾಡುಹಗಲೇ ದೋಚ ಹೋಗಿದ್ದಾನೆ.

ಸಿದ್ದನ ಕೃಪೆಯಿಂದ ಪೊಲೀಸ್ ಕಚೇರಿಯನ್ನು 'ಅಂಗಡಿ' ಮಾಡಿದ ರಾಣೆಬೆನ್ನೂರಿನ ಡಿವೈಎಸ್‌ಪಿ ಅಗಡಿ ಈಗ ಅಪಾರ ದುಃಖದಲ್ಲಿ ಮುಳುಗಿದ್ದಾನೆ. ಸದ್ಯಕ್ಕೆ ಹಾವೇರಿಗೆ ಗೊತ್ತಿರುವಂತೆ ಸಿದ್ದನನ್ನು ಕೊಪ್ಪಳಕ್ಕೆ ಅಟ್ಟಿದ್ದು ಜಿಲ್ಲಾ ಉಸ್ತುವಾರಿ ಸಚಿವ ಸಿ.ಎಂ. ಉದಾಸಿ ಮತ್ತು ಜೆಡಿಎಸ್ ಶಾಸಕ ಬಿ.ಸಿ. ಪಾಟೀಲ್. ಜಿಲ್ಲೆಯ ಎಲ್ಲ ಶಾಸಕರ ಬಹುತೇಕ ಚೇಲಾಗಳಿಗೆ ಬೇಸರವಾಗಿದ್ದ ಸಿದ್ದ, ಕೆಲವೇ ಕೆಲವರ ಡಾರ್ಲಿಂಗ್ ಆಗಿದ್ದ.


[illegible]


ಸಿದ್ದಣ್ಣನ ಜಾತ್ರೆಯಲ್ಲಿ ಉಂಡವನೇ ಜಾಣ ಎಂಬಂತಾಗಿಬಿಟ್ಟಿತ್ತು, ಮಟ್ಕಾದವರಂತೂ ಭರಪೂರ್ ಸುಗ್ಗಿ ಮಾಡಿದರು. ಮರ್ಡರ್‌ಗಳಾದರೆ 'ಸತ್ತೋರು ಸತ್ರು ಬಿಡಿ' ಎಂದು ಹಾಯಾಗಿರುತ್ತಿದ್ದ ಸಿದ್ದಣ್ಣ, ಎತ್ತಂಗಡಿಯಾದ ದಿನ ಪ್ರೆಸ್‌ಮೀಟ್ ಕರೆದ ಸಿದ್ದಣ್ಣ 'ಮಟ್ಕಾ ಅಂದ್ರೆ ನಂಗೇ ಗೊತ್ತೆ ಇಲ್ಲ' ಎನ್ನುತ್ತಿದ್ದಾಗ ಪರ್ಸೆಂಟೇಜ್ ವ್ಯವಹಾರ ನೆನೆಸಿಕೊಂಡ ಪತ್ರಕರ್ತರು ಗೊಳ್ಳೆಂದು ನಕ್ಕಿದ್ದಷ್ಟೇ ಬಂತು. ಸಿದ್ದಣ್ಣನ ಸ್ಪೆಷ್ಯಾಲಿಟಿ ಯಾವುದೆಂದರೆ ಮೊಬೈಲ್ ಫೋನ್ ಬಳಸದೇ ಇರುವುದು! ಇದೇನು ಆತನ ಸಿಂಪ್ಲಿಸಿಟಿಯಲ್ಲ, ಫೋನ್ ಕಾಲ್ ರಿಸೀವ್ ಮಾಡದಷ್ಟು ಸೋಮಾರಿತನವದು.

ಇಂತಹ ಈ ಸಿದ್ದಣ್ಣ ಮುಚ್ಚಿ ಹಾಕಿದ ಪ್ರಕರಣಗಳಿಗೆ ಲೆಕ್ಕವೇ ಇಲ್ಲ. ಹಾವೇರಿಗೆ ಬಂದಿದ್ದ ಬೆಳಗಾವಿ ವಲಯದ ಐಜಿಪಿ ದೊರೆಸ್ವಾಮಿ ನಾಯಕ್ ಸಿದ್ದನ ಕಾರ್ಯವೈಖರಿ ನೋಡಿ ಎಕ್ಕಾಮಕ್ಕಾ ಉಗಿದು, ಮುಚ್ಚಿಹೋದ ಕೊಲೆ ಮತ್ತು ಅಪಹರಣ ಪ್ರಕರಣಗಳನ್ನು ಕೂಡಲೇ ರೀಓಪನ್ ಮಾಡಲು ಆದೇಶಿದ್ದರು. ದರಿದ್ರ ಸಿದ್ದಣ್ಣ ಅದೇನು ರೀಓಪನ್ ಮಾಡ್ತಾನೊ ಅಂತಾ ಹಾವೇರಿಯ ಜನ ಕಾಯುತ್ತಿರುವಾಗಲೇ ಚೆಡ್ಡಿ ಶಾಸಕರ ದಂಡು ಬೆಂಗಳೂರಲ್ಲಿ ಟೆಂಟು ಹಾಕಿ ಸಿದ್ದನ ತಳಕ್ಕೆ ಬಿಸಿ ನೀರು ಬಿಟ್ಟಿತ್ತು.

[illegible]

ಪರಿಸರ ಪ್ರೇಮಿ ಎನ್ನುತ್ತಾ ಠಾಣೆ ಮತ್ತು ಪೊಲೀಸ್ ವಸತಿಗೃಹಗಳಲ್ಲಿ ನಾಲ್ಕು ಗಿಡ ನೆಟ್ಟು ನಾಲ್ಕು ಕಾಲಮ್ಮಿನ ಸುದ್ದಿ ಬರುವಂತೆ ಮಾಡುತ್ತಿದ್ದ. 'ಗಿಡಕ್ಕೊಂದು ಹೆಸರು' ಎಂಬ 'ಮಹಾನ್' ಯೋಜನೆ ಜಾರಿಗೆ ತಂದ ಸಿದ್ದಣ್ಣ ತನ್ನ ಹೆಂಡತಿ ಜಯ ಹಾಗೂ ತನ್ನ ಹೆಸರುಗಳನ್ನು ಗಿಡಗಳಿಗೆ ನೇತಾಕಿ ಹೋಗಿದ್ದಾನೆ. ಶಿಗ್ಗಾಂವಿಯ ಪೊಲೀಸ್ ವಸತಿ ಗೃಹದ ಆವರಣದಲ್ಲಿನ ಪಾರ್ಕ್‌ಗೆ 'ಜಯಸಿದ್ದವನ' ಎಂದು ಹೆಸರಿಟ್ಟುಕೊಂಡ ಸಿದ್ದ, ಸರ್ಕಾರ ಪಾರ್ಕಿಗೆಂದು ನೀಡಿದ ಹಣದಲ್ಲಿ ತಂದೂರಿ ಡಾಬಾ ಹೋಟೆಲ್ ತೆರೆಯಬೇಕೆನ್ನುವಷ್ಟರಲ್ಲಿ ಕೊಪ್ಪಳಕ್ಕೆ ಅಟ್ಟಲ್ಪಟ್ಟಿದ್ದಾನೆ.


ಬಿ.ಸಿ. ಪಾಟೀಲ್


ಸಿ.ಎಂ.ಉದಾಸಿ

ಸಿದ್ದನ ಪುರಾಣ

ಸಿದ್ದನ ಕಿತಾಪತಿಗಳಲ್ಲಿ ಮೊದಲನೆ ಖ್ಯಾತಿಯ ಹಂದಿಗನೂರು ಪಾದೆಯಲ್ಲಿ ನಡೆದ ಜ್ಯೋತಿ ಮರಾಳೆಯ ಕೊಲೆ ಪ್ರಕರಣವನ್ನು ವರದಾ ನದಿ ಪಾಲು ಮಾಡಲು ಟ್ರೈ ಮಾಡಿದ್ದು ಪ್ರಮುಖ. ಮುಂದೆ ಐ.ಜಿ. ಆದೇಶಕ್ಕೆ ತಲೆಬಾಗಿ ರೀಓಪನ್ ಮಾಡಲೇಬೇಕಾಯ್ತು. ಹಾಗೆಯೇ ಉತ್ತರ ಕನ್ನಡದ 14ರ ಬಾಲೆ ಹೀರಾ ನಾಗೂಗೌಡ ಸಿದ್ದಾಪುರದಿಂದ ಕಾಣೆಯಾಗಿ ಹಾವೇರಿಯ ವೇಶ್ಯಾವಾಟಿಕೆ ಜಾಲದಲ್ಲಿ ಪತ್ತೆಯಾದಾಗ, ಈ ದಂಧೆಯ ಬ್ರೋಕರುಗಳಾದ ಮಮ್ತಾಜ್ ನದಾಫ್, ಕಲ್ಲಪ್ಪ ತೋಟಗಾರ ಎಂಬುವವರಿಗೆ ರಕ್ಷಣೆ ಕೊಡಲು ನೋಡಿದ್ದ.

ಶಿಗ್ಗಾಂವಿ ತಾಲ್ಲೂಕಿನ ಅಡವಿ ಸೋಮಾಪುರ ಮತ್ತು ಹುಲಸೋಗಿಗಳಲ್ಲಿ ನಡೆದ ಎರಡು ಕೊಲೆ ಪ್ರಕರಣಗಳನ್ನು ಆತ್ಮಹತ್ಯೆ ಎಂದು ಮುಚ್ಚಿಹೋಬಿಟ್ಟ. ಮೊಬೈಲ್ ಕದಿವ ಪರಶುರಾಮ ಓಲೆಕಾರ್, ಮಲ್ಲಾಡದ, ಕರಿಗಾರ, ಜೀವನಗೌಡ ಎಂಬ ಪಿ.ಸಿ.ಗಳಿದ್ದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಹಲವಾರು ಮಟ್ಕಾ ರೇಡುಗಳಲ್ಲಿ ಡೀಲು ಮಾಡಿಕೊಂಡ. ಸಿಬ್ಬಂದಿಗಳ ಟಿ.ಎ.ದಲ್ಲಿ ಪರ್ಸೆಂಟೇಜ್ ಹೊಡೆದು ಕೊಬ್ಬಿದ.

ಮರೆಯಾಗಿ ಹೋಗಿದ್ದ ಕೊಪ್ಪಳದ ಮಟ್ಕಾವಾಲಾಗಳು ಮತ್ತೆ ಫೀಲ್ಡಿಗಿಳಿಯಲು ಆಗಲೇ ತಯ್ಯಾರಾಗಿ ಬಿಟ್ಟಿದ್ದಾರೆ.

ದಲಿತರು, ಹಿಂದುಳಿದವರ ಪರ ಎಂದು ತೋರಿಸಿಕೊಳ್ಳುತ್ತಾ ಹಾವೇರಿಯಲ್ಲಿ ಕ್ರೈಮ್ ರೇಟು ಹೆಚ್ಚಿಸಿದ ಸಿದ್ದನಂತೂ ಹಾವೇರಿಯಿಂದ ಹಾರಿ ಹೋಗಿದ್ದಾನೆಂಬುದೇ ಸದ್ಯಕ್ಕೆ ಸಮಾಧಾನದ ವಿಷಯ.


-ವರದಿಗಾರ

ಎಂಎಲ್‌ಸಿ ಗುರುದೇವ
ಜೆಡಿಎಸ್‌ಗೆ ಚಟ್ಟ, ಕಾಂಗ್ರೆಸ್‌ಗೆ ಪಟ್ಟ!

ಹಾಸನ

ಸಕಲೇಶಪುರದ ಗುರುದೇವರ ದೇಹ ಜೆಡಿಎಸ್‌ನಲ್ಲೇನೋ ಇದೆ. ಮನಸು ತವರು-ಕಾಂಗ್ರೆಸ್‌ನಲ್ಲೇ ಇದೆ. ಕಳೆದ ಎಲೆಕ್ಷನ್‌ನಲ್ಲಿ ಹಾಸನದ ಲಿಂಗಾಯತರನ್ನು ಸೆಳೆಯಲು ಕಾಂಗ್ರೆಸ್‌ನಿಂದ ಗುರುದೇವರನ್ನು ಎಳೆತಂದು ಎಂಎಲ್‌ಸಿ ಮಾಡಿದ ದೇವೇಗೌಡ, ಈಗ ಎಂಎಲ್‌ಸಿ ಗುರುದೇವರಿಗೆ ಶಾಪ ಕೊಡುವುದಷ್ಟೇ ಬಾಕಿ ಉಳಿದಿದೆ.

ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ದೆವ್ವ ಹೊಕ್ಕವರಂತೆ ಗೌಡರ ಕುಟುಂಬ ಪ್ರಚಾರ ಮಾಡುತ್ತಿದ್ದರೆ, ಎಂಎಲ್‌ಸಿ ಗುರುದೇವ ಅತ್ತ ಹಾಯಲೇ ಇಲ್ಲ, ರಾಜಶೇಖರ ಮೂರ್ತಿ ಜೊತೆ ಪ್ರಚಾರಕ್ಕೆ ಹೋಗಿದ್ದೆ ಎಂದು ರೀಲು ಬಿಡುತ್ತಲೇ, ತನ್ನ ಶಿಷ್ಯಂದಿರಾದ ಕ್ಯಾನಹಳ್ಳಿ, ಸುರೇಶ ಮತ್ತು ಭಾಸ್ಕರ್‌ನಾಯ್ಡುಗಳನ್ನು ಸಿದ್ಧರಾಮಯ್ಯರ ಪರ ಪ್ರಚಾರಕ್ಕೆ ಕಳಿಸಿಬಿಟ್ಟಿದ್ದ. ಈಗ ಈ ಶಿಷ್ಯಂದಿರು ಜೆಡಿಎಸ್‌ನಿಂದ ಸಸ್ಪೆಂಡಾದ ಮೇಲೆ ಗುರುದೇವರ ಕಿತಾಪತಿ ಬಟಾಬಯಲಾಗಿ ಹೋಗಿದೆ.


ಗುರುದೇವ

[illegible]

ಇದು ಇವತ್ತಿನ ಮಾತಲ್ಲ, ಜೆಡಿಎಸ್‌ಗೆ ಬಂದ ಸ್ವಲ್ಪ ತಿಂಗಳುಗಳಲ್ಲೇ ಪರೋಕ್ಷ ಕಾಂಗ್ರೆಸ್ ಸೇವೆ ಶುರು ಮಾಡಿದ್ದರು ಗುರುದೇವ. ಒಂದಿಷ್ಟು ಜನಪರ ಕೆಲಸ ಮಾಡಿ ಮುನ್ನುಗ್ಗುತ್ತಿದ್ದ ಶಾಸಕ ವಿಶ್ವನಾಥರನ್ನು ಕಂಡು ಮುರುಗತೊಡಗಿದ ಗುರುದೇವ ನಿಧಾನವಾಗಿ ಕಾಂಗ್ರೆಸ್ ಬೆಳೆಸುವ ಕಳ್ಳ ಕೆಲಸಗಳತ್ತ ವಾಲಿದರು. ಹಾಗೆಯೇ ಗೌಡರ ಕುಟುಂಬದ ಕಡುವೈರಿ ಡಿಕೆಶಿಗೂ ಆಪ್ತರಾದರು. ತಾವು ಹುಟ್ಟಿದ ದಿನ ಯಾವುದೆಂದು ಗೊತ್ತಿರದಿದ್ದರೂ ಶ್ರೀಕಂಠಯ್ಯರ ಬರ್ತ್‌ಡೇಗೆ ವಿಶ್ ಮಾಡುವುದನ್ನು ಮರೆಯುವುದಿಲ್ಲ ಈ ಗುರುದೇವ. ಆಲೂರು ತಾಲ್ಲೂಕು ಪಂಚಾಯ್ತಿಯಲ್ಲಿ ವೈದ್ಯನಾಥ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡನೆಯ ವೇಳೆ ಜೆಡಿಎಸ್ ಕಾಂಗ್ರೆಸ್ ಸದಸ್ಯರನ್ನು ಸೆಳೆದು ತಂದಿದ್ದರು. ಅದು ಬಿಡಿ, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರ ಆಯ್ಕೆಯಲ್ಲೂ ಗುರುದೇವರ ಬೆಂಬಲ ಕಾಂಗ್ರೆಸ್‌ಗೇ ಇತ್ತು.

ಕಾಮಗಾರಿಗಳನ್ನೆಲ್ಲ ತನ್ನ ಹಳೆಯ ಕಾಂಗ್ರೆ ಮಿತ್ರರ ಪಾಲು ಮಾಡುವುದೆಂದರೆ ಗುರುದೇವಗೆ ಖಿಲ್ಲಿಲ್ಲದ ಖುಷಿ. ಪರ್ಸೆಂಟೇಜೂ ಬಂತು, ಜೆಎಸ್‌ಎಸ್ ತುಳಿದಂಗೂ ಆಯ್ತು! ಆಲೂರಲ್ಲಿ ಕಬ್ಬಿನಹಳ್ಳಿ, ಜಗದೀಶ, ಸಕಲೇಶಪುರದಲ್ಲಿ ಕ್ಯಾನಹಳ್ಳಿ ಸುರೇಶರೆಂಬ ಕಾಂಗ್ರೆವಾಲಾಗಳಿಗೆ ಎಲ್ಲಾ ಗುತ್ತಿಗೆ ಕೆಲಸಗಳನ್ನು ನೀಡುತ್ತಾರೆ ಗುರುದೇವ.

ಅಂದಂತೆ ಗುರುದೇವರ ಬಹುತೇಕ ನಿರ್ಧಾರಗಳ ಹಿಂದೆ ಅವರ ಪತ್ನಿ ಮೇಡಮ್ ಜ್ಯೋತಿಯವರ ಮೆದುಳೇ ಕೆಲಸ ಮಾಡುತ್ತಿರುತ್ತದೆ. ಬಾಳ್ಳುಪೇಟೆ ಗ್ರಾ.ಪಂ. ಅಧ್ಯಕ್ಷನಾಗಿದ್ದಾಗ ನಕಲಿ ಸಾರಾಯಿ ಕುಡಿಸಿ ಹದಿಮೂರು ಜೀವ ಬಲಿ ತೆಗೆದುಕೊಂಡನೆಂಬ ಆರೋಪ ಹೊತ್ತಿರುವ ಮಂಜುನಾಥನನ್ನು ರಕ್ಷಿಸಲು ಪ್ರಯತ್ನಿಸಿತ್ತು ಗುರುದೇವ-ಜ್ಯೋತಿ ಜೋಡಿ. ಬಾಳ್ಳು ಪೇಟೆ, ಬಿರಡಹಳ್ಳಿ ತಾ.ಪಂ. ಚುನಾವಣೆಗಳಲ್ಲಿ ಜೆಡಿಎಸ್‌ನಿಂದ ವೀಕ್ ಕ್ಯಾಂಡಿಡೇಟ್‌ಗಳನ್ನು ಹಾಕಿ ಕಾಂಗ್ರೆ ಗೆಲುವಿಗೆ ಕಾರಣರಾಗಿದ್ದೂ ಗುರುದೇವರೇ!

ಈಗ ಜೆಡಿಎಸ್ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿರುವ ಮಲ್ಲಿಕಾರ್ಜುನ ಹಿಂದೊಮ್ಮೆ ಜಿ.ಪಂ. ಸೀಟನ್ನು ಗುರುದೇವರಿಗೆ ಬಿಟ್ಟುಕೊಟ್ಟಿದ್ದರು. ಈಗ ಯಾವುದೋ ವ್ಯವಹಾರದಲ್ಲಿ ಸಿಕ್ಕು ತೊಂದರೆಯಲ್ಲಿರುವ ಮಲ್ಲಿಕಾರ್ಜುನರಿಗೆ ನಯಾಪೈಸೆ ಸಹಾಯವನ್ನೂ ಮಾಡದಂತಹ ಕೃತಘ್ನ ಮನಸ್ಸು ಗುರುದೇವರದು.

ಅದೆಲ್ಲ ಇರಲಿ, ಜೆಡಿಎಸ್‌ನಲ್ಲೇ ಇದ್ದು ಕಾಂಗ್ರೆಗೆ ಹೆಲ್ಪ್ ಮಾಡುತ್ತಿರುವ ಗುರುದೇವರ ಮೇಲೆ [illegible] ದೊರೆ ದೇವೇಗೌಡರಿಗಿನ್ನು ಕೋಪ ಬಂದಿ[illegible]ದರೆ ಆಶ್ಚರ್ಯವಲ್ಲವೇ?

-ವರ[illegible]ರ


ಡಿಸಿ ಸಿಂಗ್: ಸಿಂಗಿಂಗ್ ಇಂಗ್ಲಿಷ್!

ಕೊಪ್ಪಳ

ನೋಡಿರಿವನ ಫೋಟೋ! ಕೊರಳಲ್ಲಿ ಕನ್ನಡ, ಕೈ ಬಾಯಲ್ಲಿ ಇಂಗ್ಲಿಷ್, ಹೃದಯದಲ್ಲಿ ಹಿಂದಿ!

"ಈತ ನವೀನ್‌ರಾಜ್‌ಸಿಂಗ್"... ಈತನನ್ನು ಹೀಗೆ ಪರಿಚಯಿಸಬಾರದಂತೆ.... "He is Mr. Naveenraj Singh"... ಎನ್ನಬೇಕಂತೆ.

ಸರ್ಕಾರಿ ಆದೇಶ, ಜಾಹೀರಾತುಗಳನ್ನೆಲ್ಲ ಇಂಗ್ಲಿಷ್‌ನಲ್ಲೇ ಪ್ರಕಟಿಸುವ ಉದ್ಧಟತನ ತೋರುವ ಮೂಲಕ ಕಮಂಗಿಯಾಗಿದೆ ಈ ಸಿಂಗ್. ಈತ ಕೊಪ್ಪಳ ಜಿಲ್ಲಾಧಿಕಾರಿ ಎಂಬುದು ಅವಮಾನದ ಸಂಗತಿ. ಭಾಷೆಯ ನೆಪದಲ್ಲಿ ಕೊಪ್ಪಳದ ಕನ್ನಡಿಗರನ್ನು ವೃಥಾಕಾರಣ ರೊಚ್ಚಿಗೆಬ್ಬಿಸಿರುವ ಈ ಡಿಸಿ ವಿರುದ್ಧ ಹೈವೆ ಬಂದ್ ಮಾಡಿ ಪ್ರತಿಭಟಿಸಲೇಬೇಕಾಯ್ತು.


ಡಿಸಿ ನವೀನ್‌ರಾಜ್‌ಸಿಂಗ್

ಪೆಹಲೆ ಮೈ ಯೂಪಿವಾಲಾ!

ಮುಜೇ ಕಹತೇ ಹೈ ಕನ್ನಡವಾಲಾ!!

ಲೇಕಿನ್ ಮೈ ಹೂಂ ಅಂಗ್ರೇಜಿವಾಲಾ!!!

ಇದು ಮೊನ್ನೆ ಕೊಪ್ಪಳದಲ್ಲಿ ಸಿಂಗ್ ವಿರುದ್ಧದ ಪ್ರತಿಭಟನೆಯಲ್ಲಿ ಕಂಡಬಂದು ಫಲಕವೊಂದರ ಸಾಲು.

[illegible]

ಕೊಪ್ಪಳಕ್ಕೆ ಬರುಬರುತ್ತಲೇ ನಾನೂ ಕನ್ನಡಿಗನೇ ಎಂದು ರೀಲುಬಿಟ್ಟ. ಕರ್ನಾಟಕದಲ್ಲಿ ಸಾಕಷ್ಟು ಸರ್ವೀಸ್ ಮಾಡಿದ್ದರೂ ಈತನಿಗೆ ಕನ್ನಡವೇ ಗೊತ್ತಿಲ್ಲ, ಎಲ್ಲದಕ್ಕೂ 'ಠೀಕ್ ಹೈ' ಎನ್ನುತ್ತಾನೆ. ಕಳೆದ ಜುಲೈನಲ್ಲಿ ಈ ಎಡಬಿಡಂಗಿ ಎಂಥಾ ಆದೇಶ ಹೊರಡಿಸಿದ ಗೊತ್ತೆ? "ಎಲ್ಲ ಪತ್ರ ವ್ಯವಹಾರವನ್ನು ಇಂಗ್ಲಿಷ್‌ನಲ್ಲೇ ಮಾಡಿ. ಏಕೆಂದರೆ ನನಗೆ ಕನ್ನಡ ಬರುವುದಿಲ್ಲ..."

ಯೆ ಸಬ್ ಕ್ಯಾ ಹೈ ನವೀನ್‌ಸಿಂಗ್? ತಲೆಕೆಟ್ಟಿರುವ ಈ ಡಿಸಿಗೆ ಇಡೀ ಜಿಲ್ಲಾಡಳಿತವೇ ಮನಸ್ಸಲ್ಲೇ ಉಗಿಯತೊಡಗಿತು. [illegible] 'ಈ ಅಂತರ್‌ಪಿಶಾಚಿ ಎಲ್ಲಿಂದ ಬಂತಪ್ಪೊ' ಎಂದು [illegible] ಈ ವಿಷಯ ವಿಧಾನಸೌಧಕ್ಕೂ ಮುಟ್ಟಿ 'ಭಯಂಕರ' ಚರ್ಚೆ ನಡೆದು, ಇನ್ನೇನು ನೋಟೀಸ್ ಕೊಟ್ಟು ಹಕ್ಕುಚ್ಯುತಿ ಮಂಡಿಸುತ್ತಾರೇನೊ ಎನ್ನುವ ಮಟ್ಟಕ್ಕೆ ಹೋಯಿತು. ಅಷ್ಟರಲ್ಲಿ ಜನಾರ್ದನ ರೆಡ್ಡಿಯ ಗಣಿ ಸಿ.ಡಿ.ಬ್ಲಾಸ್ಟ್ ಆಗಿ ಅಧಿವೇಶನವೇ ಪೋಸ್ಟ್‌ಪೋನ್ ಆಗಿ, ನವೀನ್‌ರಾಜ್‌ಸಿಂಗ್ ಬಚಾವಾಗಿಬಿಟ್ಟ. ಕೊಪ್ಪಳಕ್ಕೆ ಬಂದು ತನಿಖೆ ಮಾಡುತ್ತೇನೆಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಿದ್ದಲಿಂಗಯ್ಯನವರೂ ಚಕ್ಕರ್ ಹಾಕಿ ಬಿಟ್ಟರು.

[illegible]

ಇಷ್ಟಾದ್ರೂ ಈ ಡಿಸಿಗೆ ಬುದ್ಧಿ ಬರಲಿಲ್ಲ. 19.11.1998ರಲ್ಲಿ ಕರ್ನಾಟಕ ಸಚಿವಾಲಯ ಹೊರಡಿಸಿದ ಸುತ್ತೋಲೆ (ಡಿಪಿಎಆರ್8, ಓಎಲ್83) ಮತ್ತು 10.2.1983ರ ಆದೇಶದಂತೆ ಜಾಹೀರಾತು, ನೋಟೀಸು, ಲೈಸೆನ್ಸ್, ಸರ್ಟಿಫಿಕೇಟ್, ಟೆಂಡರ್‌ಗಳೆಲ್ಲ ಕನ್ನಡದಲ್ಲಿರಬೇಕು. ಆದರೆ ಪಿತ್ತ ನೆತ್ತಿಗೇರಿದ ನವೀನರಾಜ್‌ಸಿಂಗ್ ಆ ಆದೇಶಗಳನ್ನು ಕಾಲಕಸ ಮಾಡಿ, 2007ರ ಮತದಾರರ ಯಾದಿಯನ್ನು ಗಣಕೀಕರಣಗೊಳಿಸಿ ಮುದ್ರಿಸಿಕೊಡುವುದಕ್ಕಾಗಿ 8.12.2006ರಂದು ಟೆಂಡರ್ ಜಾಹಿರಾತು ನೀಡಿಬಿಟ್ಟ-ಮತ್ತದೇ ಇಂಗ್ಲಿಷ್‌ನಲ್ಲಿ!

ಮೊನ್ನೆ ಡಿಸೆಂಬರ್ 12ರಂದು ಬಸವನಗೌಡ ಪಾಟೀಲ್, ಗವಿಸಿದ್ದಪ್ಪ ಕರ್ಣಾಳ್, ಸರೋಜಾ ಬಾಕಳೆ, ರಸೂಲಸಾಬ, [illegible]ಯಕುಮಾರ ಕವಲೂರು, ರಾಜಶೇಖರ ಅಂಗಡಿ, ಶಿವಾನಂದ ಹೊಮ್ಮೂರು ಮುಂತಾದ ಕನ್ನಡ ಹೋರಾಟಗಾರರ ನೇತೃತ್ವದಲ್ಲಿ NH63 ಬಂದ್ ಮಾಡಿ ಡಿಸಿಯ ಕನ್ನಡ ವಿರೋಧಿ ವರಸೆಗೆ ಧಿಕ್ಕಾರ ಹೇಳಲಾಗಿದೆ.

[illegible] ನವೀನ್‌ರಾಜ್ ಸಿಂಗ್‌ನೊ[illegible] [illegible] ಅಧಿಕಾರಿಗಳಿದ್ದಾರೆ. ಶಿವಮೊಗ್ಗದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇದಕ್ಕೆ ಉತ್ತರ ನಿರೀಕ್ಷಿಸಬಹುದೇ?

-ವರದಿಗಾರ

ವೃಜಾವಾಣಿಯ ದೀಪಾವಳಿಯ ವಿಶೇಷಾಂಕದಲ್ಲಿ (1979) ಕೀರ್ತಿನಾಥ ಕುರ್ತಕೋಟಿಯವರ ಮೊದಲ ... ಲೇಖನ 'ಸಾಹಿತ್ಯ ಮತ್ತು ಸಂಸ್ಕೃತಿ' ... ಎಂದರೆ ಏನು ಎಂಬ ಮೂಲಭೂತವಾದ ... ಎತ್ತಿದೆ. ಕುರ್ತಕೋಟಿಯವರು ಕನ್ನಡ ಸಾಹಿತ್ಯದ ... ವಿಮರ್ಶಕರು (ನನ್ನ ಸ್ನೇಹಿತರೂ) ಆಗಿರುವುದರಿಂದ ಅವರು ರಾಮಾಯಣದ ಒಂದು ...ಗದಬಗ್ಗೆ ಮಾಡಿದ ವಿಮರ್ಶೆ ನನಗೆ ...ವನ್ನುಂಟುಮಾಡಿದೆ. ಅವರು ತಮ್ಮ ಎರಡು ಪುಟದ ಸಂಕ್ಷಿಪ್ತ ಲೇಖನದಲ್ಲಿ ಅರ್ಧ ಪುಟದಷ್ಟು ಅರ್ಥದ ಬಗ್ಗೆ

ಯಾಗಿರುವ ತನ್ನನ್ನು ಲಕ್ಷ್ಮಣ ಈಗಲೇ ನೋಡಿದರೆ ಮುಂದೆ ತನ್ನ ಶೀಲದ ಬಗ್ಗೆ ಮತ್ತೊಮ್ಮೆ ಅಪವಾದ ಬಂದರೆ ಲಕ್ಷ್ಮಣ ಸಾಕ್ಷಿಯಾಗಿರಬೇಕು" ಎಂಬುದು ಅವಳ ಆಶಯವಾಗಿದೆ. 'ಲಕ್ಷ್ಮಣ, ನನಗೆ ಋತುಕಾಲ ನಿಂತು ಹೋಗಿರುವುದನ್ನು ನೀನು ಕಣ್ಣಾರೆ ನೋಡಿ ಹೋಗು' ಎಂದು ನುಡಿಯುತ್ತಾಳೆ. ಅದಕ್ಕೆ ಲಕ್ಷ್ಮಣನ ಪ್ರತಿಕ್ರಿಯೆ ಇದು.

ದೃಷ್ಟಪೂರ್ವಂನತೇರೂಪಂ ಪಾದೌದೃಷ್ಟಾತವಾನಘೇ
ಕಥಮತ್ರಹಿಪಶ್ಯಾಮಿ ರಾಮೇಣರಹಿತಾಂವನೇ
ಇತ್ಯುಕ್ತ್ವಾ ತಾಂನಮಸ್ಕೃತ್ಯ ಪುನರ್ನಾವಮುಪಾರುಹತ್

ಯೋಗಿಸಿದ್ದಾರೆ. ಇಲ್ಲಿ ನಮಗಾಗುವುದು ಮೆಚ್ಚುಗೆ. ಏಕೆಂದರೆ ಇದರ ಹಿಂದಿನಿಂದ ರಾಮಾಯಣದುದ್ದಕ್ಕೂ ಸೀತಾಲಕ್ಷ್ಮಣರ ಚಾರಿತ್ಯ ಸರ್ವವಿದಿತವಾದದ್ದು; ಸೀತೆ ಅಗ್ನಿಯನ್ನು ಹೊಕ್ಕು ಹೊರಬಂದ ಮಹಾಸತಿ; ಲಕ್ಷ್ಮಣನಾದರೋ ಈ ಹಿಂದೆ ಸೀತೆಯ ಆಭರಣಗಳನ್ನು ಕಂಡಾಗ 'ನಾಹಂಜಾನಾಮಿಕೇಯೂರೇ ನಾಹಂಜಾನಾಮಿಕುಂಡಲೇ। ನೂಪುರೇತ್ವಭಿಜಾನಾಮಿನಿತ್ಯಂಪಾದಾಭಿವಂದನಾತ್'॥ ಅಂದರೆ "ನಿನ್ನ ಕೇಯೂರ ಕುಂಡಲಗಳನ್ನು ನಾನರಿಯೆ. ನಿನ್ನ ಪಾದಗಳ ನುಪುರಗಳನ್ನು ಮಾತ್ರ ನಿತ್ಯವೂ ನಿನ್ನ ಪಾದಗಳಿಗೆ ನಮಸ್ಕಾರವನ್ನು ಮಾಡುತ್ತಾ ಕಂಡಿದ್ದೇನೆ" ಎಂದು ಹೇಳಿ


ಸೀತೆ ಲಕ್ಷ್ಮಣನಿಗೆ "ನಾನು ಬಸುರಿ, ಗ... ಎನ್ನುವುದಿಲ್ಲ. "ನನಗೆ ಮುಟ್ಟು ನಿಂತಿದೆ, ಚೆನ್ನಾಗಿ ನೋ... ಹೋಗು" ಅಥವಾ ಕುರ್ತಕೋಟಿಯವರ ಮಾ... "ನನಗೆ ಋತುಕಾಲ ನಿಂತುಹೋಗಿರುವುದನ್ನು ... ನೋಡಿ ಹೋಗು" (ಒತ್ತು ನನ್ನದು) ಎನ್ನುತ್ತಾಳೆ. ... ಎಂಬ ಪದಕ್ಕೆ ಸೂಕ್ತವಾಗಿ 'ಕಣ್ಣಾರೆ ನೋಡು' ... ಭಾಷಾಂತರಿಸಿದ ಕುರ್ತಕೋಟಿಯವರು ಸೀತೆ ಉಪ... ಸುವ "ಋತುಕಾಲ', 'ಕಣ್ಣಾರೆ ನೋಡು' ಎಂಬ ... ತಥ್ಯವನ್ನು, ಸೂಕ್ತತೆಯನ್ನು ಕುರಿತು, ಪದ ಮತ್ತು ... ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿದಾಗ್ಯೂ, ಮೌ... ಉಳಿದುಬಿಟ್ಟದ್ದಾರೆ.

ಈ ಶ್ಲೋಕದಲ್ಲಿ ಎದ್ದು ಕಾಣುವ ತುಮುಲ... ಪದಗಳು 'ಋತುಕಾಲ' ಮತ್ತು 'ಕಣ್ಣಾರೆ ನೋ...' ಎಂಬುವು. ಈ ಮಾತುಗಳನ್ನು ಆಡುವಲ್ಲಿ ... ಸಾಮಾನ್ಯವಾದ ಮುಜುಗರ, ಮೈಚಳಿಯನ್ನು ಬಿಟ್ಟ... ಅಲ್ಲ; ಅಲ್ಲಿ ಇಂಗಿತದ ಆಳದಲ್ಲಿರುವ ಬಯಕೆ... ನಿಷ್ಠುರವಾದ (ಲಕ್ಷ್ಮಣನ ಮಟ್ಟಿಗಾದರೂ) ಭಯಾನಕ... ಅಭಿವ್ಯಕ್ತಿ ಕೊಡುತ್ತಿದ್ದಾಳೆ. ಲಕ್ಷ್ಮಣ ಸೀತೆಗೆ ಋತು... ನಿಂತಿರುವುದನ್ನು ಖಚಿತಪಡಿಸಿಕೊಳ್ಳಬೇಕಾದರೆ ... ದೇಹದ ಯಾವುದೋ ಒಂದು ಭಾಗವನ್ನು, ಪ್ರದೇಶ... ಕಣ್ಣಾರೆ ನೋಡಬೇಕು. ಈ ಮಾತು ಲಕ್ಷ್ಮ... ದಿಗ್ಭ್ರಮೆಗೊಳಿಸುತ್ತದೆ:

ಏವಂಬ್ರುವತ್ಯಾಂಸೀತಾಯಾಂ
ಲಕ್ಷ್ಮಣೋದೀನಚೇತನಃಯೋ॥
ಶಿರಸಾವಂದ್ಯಧರಣೀಂ ವ್ಯಾಹರ್ತುಂನಶಶಾಕಸ...
ಪ್ರದಕ್ಷಿಣಂಚತಾಂಕೃತ್ವಾ ರುದನ್ನೇವಮಹಾಸ್ವನ...
ಧ್ಯಾತ್ವಾಮುಹೂರ್ತಂತಾಮಾಹ
ಕಿಂಮಾಂವಕ್ಷ್ಯಸಿಶೋಭನೇ॥
ದೃಷ್ಟ ಪೂರ್ವಂನತೇರೂಪಂ ಪಾದೌದೃಷ್ಟಾತವಾ...
ಕಥಮತ್ರಹಿಪಶ್ಯಾಮಿ ರಾಮೇಣರಹಿತಾಂವನೇ...
ಇತ್ಯುಕ್ತ್ವಾ ತಾಂನಮಸ್ಕೃತ್ಯ ಪುನರ್ನಾವಮುಪಾರು...

ಅಂದರೆ ಸೀತೆಯ ನುಡಿಯನ್ನು ಕೇಳಿ ಲ... ದೀನಮನಸ್ಕನಾಗಿ ತಲೆಬಾಗಿ ನೆಲಮುಟ್ಟಿದನು. ಮಾತ... ಅಶಕ್ತನಾದನು. ಗಟ್ಟಿಯಾಗಿ ಅಳುತ್ತಾ ಅವಳಿಗೆ ಪ್ರ... ಮಾಡಿದನು. ಆನಂತರ ಸ್ವಲ್ಪ ಕಾಲ ಚಿಂತನೆ ... "ಹೇ ಶೋಭನೆ, ನನ್ನನ್ನು ಕುರಿತು ಏನು ಹೇಳುತ್ತಿ... ನಿನ್ನ ರೂಪವನ್ನು ನಾನು ಕಣ್ಣೆತ್ತಿ ನೋಡಿದವನಲ್ಲ... ಪಾದಗಳನ್ನು ಮಾತ್ರ ನೋಡಿದವನು, ಈಗ ಶ್ರೀರಾಮ... ಈ ವನದಲ್ಲಿ ಹೇಗೆ ತಾನೆ (ನಿನ್ನನ್ನು) ನೋಡಲಿ" ... ಹೇಳಿ, ನಮಸ್ಕರಿಸಿ ನಾವೆಯನ್ನು ಹತ್ತಿದನು.

ರಾಮಾಯಣದ 'ಸೀತಾಯಣ'



ರಾಮನೊಂದಿಗೆ ವನವಾಸ ಅನುಭವಿಸಿದ, ರಾವಣನಿಂದ ಅಪಹರಿಸಲ್ಪಟ್ಟ, ಅಗ್ನಿ ಪರೀಕ್ಷೆಗೆ ಗುರಿಯಾದ, ಕೊನೆಗೆ ರಾಮನಿಂದಲೇ ಕಾಡಿಗೆ ದೂಡಲ್ಪಟ್ಟ ಸೀತೆ ಅಳುಮುಂಜಿಯೇ? ಅಥವಾ 'ಪುರುಷ'ನಿಗೆ ಪ್ರತಿಯಾಗಿ ನಿಂತ 'ಪ್ರಕೃತಿ'ಯೇ? ದೇವಿಯೇ? ಮಾನವಳೇ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವ ಡಾ. ಪೋಲಂಕಿ ರಾಮಮೂರ್ತಿಯವರ 'ಸೀತಾಯಣ'ವನ್ನು ಈ ವಾರದಿಂದ ಪ್ರಾರಂಭಿಸುತ್ತಿದ್ದೇನೆ. ಇದರ ಮೊದಲನೆ ಭಾಗ ಇಲ್ಲಿದೆ....

ಗಂಭೀರವಾದ ವ್ಯಾಖ್ಯೆ ಮಾಡಿದ್ದಾರೆ. ಆದರೆ ರಾಮಾಯಣದ ಶ್ಲೋಕಗಳನ್ನು ಉದ್ಧರಿಸಿ ಅರ್ಥ ಮಾಡುವಲ್ಲಿ, ಆ ಪ್ರಸಂಗದಲ್ಲಿ ಅಲ್ಲಿ ಅವರು ಕಂಡುಕೊಂಡ ಮೌನದಲ್ಲಿ, ಮತ್ತು ಆ ಮೌನದ ಮೌಲ್ಯಮಾಪನದ ಚಿಂತನೆಯಲ್ಲಿ ಅವರು ವಾಚ್ಯಾರ್ಥದ ದಬ್ಬಾಳಿಕೆಗೆ ಗುರಿಯಾಗಿ ಸೂಚ್ಯಾರ್ಥದ ಸೂಕ್ಷ್ಮಗಳನ್ನು ಗ್ರಹಿಸದೆ ವಿಮರ್ಶಕರ ವ್ಯಾಖ್ಯಾನವನ್ನು ಮಾಡಿದಾರೆಂದು ನೋವಿಂದ ಹೇಳುತ್ತಿದ್ದೇನೆ. ಈಗ ನಾನು ಇಲ್ಲಿ ಆ ರಾಮಾಯಣದ ಶ್ಲೋಕಗಳನ್ನು ಕುರಿತು ಬರೆಯುತ್ತಿರುವುದು ವಿಮರ್ಶೆಯ ಬಗೆಗಿನ ಕಾಳಜಿಯಿಂದಲ್ಲದೆ ಕುರ್ತುಕೋಟಿಯವರರೊಡನೆ ಕಾಳಗಕ್ಕಿಳಿಯುವ ಉದ್ದೇಶದಿಂದಲ್ಲ.

ಕುರ್ತಕೋಟಿಯವರು ಲಕ್ಷ್ಮಣ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಹೋಗುವ ಪ್ರಸಂಗವನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಸೀತೆ ಲಕ್ಷ್ಮಣನಿಗೆ ಹೀಗೆ ಹೇಳುತ್ತಾಳೆ:

ನಿರೀಕ್ಷ್ಯಮಾದ್ಯಗಚ್ಛತ್ವಮೃತುಕಾಲಾತಿವರ್ತಿನೀಮ್

ಕುರ್ತುಕೋಟಿ ಬರೆಯುತ್ತಾರೆ:

"ಲಕ್ಷ್ಮಣ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಹೋಗುವಾಗ ಸೀತೆ ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾಳೆ. "ಗರ್ಭಿಣಿ

'ನಾನು ಈ ಮೊದಲು ಕೂಡ ನಿನ್ನ ಚರಣಗಳ ಹೊರತಾಗಿ ನಿನ್ನ ರೂಪವನ್ನು ನೋಡಿರಲಿಲ್ಲ, ಈಗ ಈ ವನದಲ್ಲಿ ರಾಮನಿಂದ ದೂರಳಾದ ನಿನ್ನನ್ನು ಹೇಗೆ ನೋಡಲಿ ಎಂದವನೇ ಅವಳಿಗೆ ನಮಸ್ಕರಿಸಿ ಅವನು ನಾವೆಯನ್ನು ಹತ್ತಿದ.

ಈ ಪ್ರಸಂಗದಲ್ಲಿ ನಾವು ಬೆರಗಾಗುವುದು "ಸೀತೆ ಮತ್ತು ಲಕ್ಷ್ಮಣ ಇವರ ನೀತಿಪ್ರಜ್ಞೆಗೆ...."

ಕುರ್ತಕೋಟಿ 'ಬೆರಗು' ಎನ್ನುವ ಶಬ್ದವನ್ನು ಉಪ

ತನ್ನ ನಿಷ್ಠೆಯನ್ನು ರುಜುವಾತು ಮಾಡಿದ್ದಾನೆ. ಅದರಿಂದಾಗಿ ನಮಗೆ ಸೀತಾಲಕ್ಷ್ಮಣರ ಚಾರಿತ್ಯದ ಬಗ್ಗೆ ಮತ್ತೆ ಪುಷ್ಟಿ ಸಿಕ್ಕಿದಾಗ ನಮಗಾಗುವುದು ಕುರ್ತುಕೋಟಿ ಹೇಳುವಂತೆ 'ಬೆರಗು' ಅಲ್ಲ; ಮೆಚ್ಚುಗೆ, ಸಂತೋಷಗಳಷ್ಟೇ.

ಆದರೆ ಇಲ್ಲಿ 'ಬೆರಗು' ಇದೆ–ಅದ್ಭುತವಾದ, ಭಯಂಕರವಾದ 'ಬೆರಗು' ಇದೆ. ಬೆರಗು ಸೀತಾಲಕ್ಷ್ಮಣರ 'ನೀತಿ ಪ್ರಜ್ಞೆ'ಗೆ ಅಲ್ಲ; ಸೀತಾಲಕ್ಷ್ಮಣರ 'ನೀತಿ ಬಾಹಿರತೆ'ಗೆ, ಅಂದರೆ 'ನೀತಿಯ ಹೊರಗಿನ' ಜೀವನ-ತುಡಿತದ ಬಗ್ಗೆ ಮಾನವೀಯ ಸ್ಪಂದನಗಳ ಬಗ್ಗೆ.

ಸಾಹಿತ್ಯ ಸಮ್ಮೇಳನ: ಪೂರ್ವಭಾವಿ ತಮಾಷೆಗಳು

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅದರ ಕಾರ್ಯವೈಖರಿಯನ್ನು ಪತ್ರಿಕೆ ಮೊದಲಿಂದಲೂ ಟೀಕಿಸುತ್ತಲೇ ಬಂದಿದೆ. ಪಿ. ಲಂಕೇಶರು ಭಾಗವಹಿಸಿದ ಕಟ್ಟಕಡೆ ಸಾಹಿತ್ಯ ಸಮ್ಮೇಳನವೆಂದರೆ, ಅಡಿಗರು ಅಧ್ಯಕ್ಷರಾಗಿದ್ದಾಗ ಧರ್ಮಸ್ಥಳದಲ್ಲಿ ನಡೆದ ಸಮ್ಮೇಳನ. ಆನಂತರ ಈ ಸಾಹಿತ್ಯ ಪರಿಷತ್ತಿನ ಎಲ್ಲರನ್ನು ಹಿಗ್ಗಾಮುಗ್ಗಾ ಚಚ್ಚುತ್ತ ಬರುತ್ತಿರಬೇಕಾದರೆ, ಇನ್ನೂ ಕಣ್ಣುಬಿಡುತ್ತಿದ್ದ ನಾವೆಲ್ಲಾ ಆಗ ಸಾಹಿತ್ಯ ಪರಿಷತ್ತಿನ ಅಜನ್ಮ ವೈರಿಗಳಾಗಿ ಮಾರ್ಪಟ್ಟೆವು... ಬಹು ದೀರ್ಘ ಕಾಲ ಅಧ್ಯಕ್ಷರಾಗಿದ್ದ ಹಂಪನಾರನ್ನು ಪತ್ರಿಕೆ ಟೀಕೆ ಮಾಡುವುದನ್ನು ನೋಡಿ, ನಮಗೆ ಆತನ್ಯಾರೊ ಭಯಂಕರ ವ್ಯಕ್ತಿಯಿರಬಹುದೆನ್ನಿಸಿತ್ತು. ಈ ಟೀಕೆಯ ಬಹುಪಾಲು ಚಂಪಾರದ್ದೇ ಆಗಿತ್ತು, ಈಗ ಅವರೇ ಸಾಹಿತ್ಯ ಪರಿಷತ್‌ನ ಅಧ್ಯಕ್ಷರು!

ಈ ಬಾರಿ ಶಿವಮೊಗ್ಗದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅನಿವಾರ್ಯವಾಗಿ ಭಾಗವಹಿಸಬೇಕಾದಂತ ಪರಿಸ್ಥಿತಿ ನನಗೆ ಎದುರಾಯ್ತು. ಹೇಗೆಂದರೆ ಲಂಕೇಶ್ ಪತ್ರಿಕೆಗೆ 20 ವರ್ಷ ತುಂಬಿದ ಸಮಾರಂಭವನ್ನು ಶಿವಮೊಗ್ಗದಲ್ಲಿ ನಾನು ಏರ್ಪಡಿಸಲು ಹೊರಟಾಗ ಈಗಿನ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ. ಮಂಜುನಾಥ್ ಅಂದು ನಮ್ಮೊಡನೆ ತುಂಬ ಓಡಾಡಿದ್ದರು. ಜೊತೆಗೆ ನಮ್ಮೆಲ್ಲರ ಮೇಟಿಯಾಗಿರುವ ಎಂ.ಬಿ. ನಟರಾಜ್ ಕೂಡ ಅಂದು ನಮ್ಮೊಡನೆ ಇದ್ದು ಪತ್ರಿಕೆಯ 20 ನೇ ವರ್ಷದ ಕಾರ್ಯಕ್ರಮ ಯಶಸ್ವಿಯಾಗಲು ಶ್ರಮಿಸಿದ್ದರು.

ಆ ಸಭೆಗೆ ಬಂದಿದ್ದ ಲಂಕೇಶರು ತುಂಬ ದೀರ್ಘವಾಗಿ ಮಾತನಾಡಿದ್ದರು. ಅದು ಅವರ ಕಟ್ಟಕಡೆಯ ಭಾಷಣ ಮತ್ತು ಸಾರ್ವಜನಿಕ ಸಭೆ. ಈಗ ಡಿ. ಮಂಜುನಾಥ್ ಪರಿಷತ್ ಅಧ್ಯಕ್ಷರಾಗಿರುವಾಗ ನಾವು ಅವರೊಟ್ಟಿಗೆ ಕೈ ಜೋಡಿಸುವ ಋಣಕ್ಕೆ ಸಿಕ್ಕಿಕೊಂಡು ಅನಿವಾರ್ಯವಾಗಿ ಸಾಹಿತ್ಯ ಪರಿಷತ್ ಆಫೀಸಿನ ಬಳಿ ಸುಳಿಯುವಂತಾಯ್ತು.

ಈ ಬಾರಿಯ ಸಮ್ಮೇಳನಕ್ಕೆ ಆಕಸ್ಮಾತ್ ಚಿ.ಮೂ. ಅಧ್ಯಕ್ಷರಾಗಿದ್ದರೆ, ನಾವು ತಾತ್ವಿಕ ಕಾರಣ ಕೊಟ್ಟು ತಪ್ಪಿಸಿಕೊಳ್ಳಬಹುದಿತ್ತು, ಆದರೆ ಅಪರೂಪಕ್ಕೆ ಒಬ್ಬ ಮುಸ್ಲಿಮ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವಾಗ ಅನಿವಾರ್ಯವಾಗಿ ನಾವೆಲ್ಲಾ ಈ ಭಾಷಣ ಮತ್ತು ಊಟದ ಜಾತ್ರೆಯಲ್ಲಿ ಭಾಗವಹಿಸುವಂತಾಗಿದೆ. ಚಿ.ಮೂ. ಅಧ್ಯಕ್ಷರಾಗಲಿಲ್ಲ ಎಂದು ಕೆಲವು ಮೂಲಭೂತವಾದಿಗಳು ದೂರ ಉಳಿದಿರುವುದೂ ನಮಗೆ ವರದಾನವಾಗಿದೆ ಅನ್ನಿ!

* * * * * *

ಪುಟ್ಟ ಟೀ ಅಂಗಡಿಯಂತಿರುವ ಈ ಸಾಹಿತ್ಯ ಪರಿಷತ್ ಆಫೀಸಿಗೆ ಒಮ್ಮೆ ಹೋದಾಗ, ಕೆಲ ಸಾಹಿತಿಗಳು ಮತ್ತು ಅಸಾಹಿತ್ಯಿಕ ವ್ಯಕ್ತಿಗಳು ಕುಳಿತಿದ್ದರು. ಪರಸ್ಪರ ಪರಿಚಯ ಮಾಡಿಕೊಂಡ ನಂತರ ವಯೋವೃದ್ಧ ಕವಿಯೊಬ್ಬ ತನ್ನ ಕವನ ಸಂಗ್ರಹ ಕೈಗಿತ್ತು ಅಭಿಪ್ರಾಯ ಕೇಳಿದರು. ಓದಿ ಹೇಳುತ್ತೇನೆಂದೆ. ಆದರೆ ಅದನ್ನು ಅಲ್ಲಿಯೇ ಓದುತ್ತಿದ್ದಂತೆ ಉದ್ದನೆ ಸಾಲನ್ನು ಕೆಳಮುಖವಾಗಿ ಬರೆದಿರುವಂತೆ ಕಂಡು ಹಿಂಸೆಯಾಯ್ತು.

* * * * * *

ಮತ್ತೊಬ್ಬ ಅಪರೂಪದ ವ್ಯಕ್ತಿ ನನಗೊಂದು ಕ್ವಿಜ್ ಪ್ರಶ್ನೆ ಕೇಳುವವಂತೆ "ವಿವೇಕ್ ಶಾನುಭಾಗ ಯಾರು ಗೊತ್ತೇನ್ರಿ?" ಎಂದ. ನಾನು ಮಿಕಮಿಕ ನೋಡಿದೆ. ಅಷ್ಟೂ ಗೊತ್ತಿಲ್ಲವೆ ಎಂಬಂತೆ ನಗಾಡಿ "ಅನಂತಮೂರ್ತಿ ಅಳಿಯ ಕಂಡ್ರಿ" ಎಂದ. ಅಷ್ಟಕ್ಕೆ ಸುಮ್ಮನಾಗದೆ ಅದನ್ನೇ ತಿರುಗಮುರುಗ ಮೂರು ಬಾರಿ ಹೇಳಿದ. ಅಲ್ಲೇ ಇದ್ದ ತಿಂಡಿ ಕಾರ್ಡುಗಳನ್ನು ತೆಗೆದುಕೊಂಡು ಹೋಗಿ ಅಂಚೆ ಡಬ್ಬಿಗೆ ತುರುಕಿಬಂದು ತನ್ನ ಕ್ವಿಜ್ ಕಾರ್ಯಕ್ರಮ ಮುಂದುವರಿಸಿದ.



* * * * * *

ಸಾಹಿತ್ಯ ಪರಿಷತ್ ಅಧ್ಯಕ್ಷ ಬಂದು "ಇಲ್ಲಿ ಕಾರ್ಡಿದ್ದವಲ್ಲ, ಏನಾದವುರಿ?" ಎಂದರು. "ಅವಿಟಗಂಡೇನು ಮಾಡದಿಲ್ಲಿ? ಬಂದ ಮೇಲೆ ಪೋಸ್ಟು ಡಬ್ಬಿಗೆ ಹೋಯ್ತಾಯಿರಬೇಕು ಅಂತ ಡಬ್ಬಿಗೆ ಹಾಕಿದೆ. ಒಳ್ಳೆ ಕೆಲಸವ ಇದು" ಎಂದಿತು ಆ ವ್ಯಕ್ತಿ. ಮಂಜುನಾಥ್ ಗಾಬರಿಯಿಂದ "ರೀ, ಆ ಕಾರ್ಡು ಸಮಿತಿಗಳ ಕಾರ್ಯಕರ್ತರಿಗೆ ಹೋಗವು ಕಂಡ್ರಿ. ನಮ್ಮ ಸೀಲು ಸಹಿ ಏನೂ ಇಲ್ಲ" ಎಂದರು.

ಸಾಹಿತ್ಯ ಸಮ್ಮೇಳನ ನಡೆಸುವ ಪರಿಷತ್‌ಗೆ ಬಂದ ಮೇಲೆ, ಅಲ್ಲಿ ಸುಮ್ಮನೆ ಕೂರುವುದಲ್ಲ, ಏನಾದರೂ ಕೆಲಸ ಮಾಡುತ್ತಿರಬೇಕೆಂದು ತಿಳಿದು ಕಾರ್ಡು ತೆಗೆದುಕೊಂಡು ಹೋಗಿ ಡಬ್ಬಿಗೆ ತುಂಬಿ ಬಂದ ಕಾರಣಕ್ಕೆ, ಆ ಪೋಸ್ಟು ಡಬ್ಬಿ ಬಾಗಿಲು ತೆಗೆಯುವವರೆಗೂ ಕಾದಿದ್ದು ಮತ್ತೆ ಎಲ್ಲಾ ಕಾರ್ಡುಗಳನ್ನು ಹೊತ್ತುತಂದು ಸೀಲು, ಸಹಿ ಮಾಡಿಸಿಕೊಂಡು ಹೋಗಿ ತುಂಬಿ ಬಂದ ಆ ವ್ಯಕ್ತಿ ಅಂದಿನಿಂದಲೇ ನನಗೆ ವಿಶೇಷ ವ್ಯಕ್ತಿಯಾಗಿ ಕಾಣತೊಡಗಿದ.

* * * * * *

ಮರುದಿನ ಉತ್ಸಾಹದಿಂದಲೇ ಎದುರು ಸಿಕ್ಕ ಆ ವ್ಯಕ್ತಿ "ಇವತ್ತು ಒಂದು ಕೆಲಸ ಮಾಡಿದೆ ಕಂಡ್ರಿ, ಗೌಡ್ರೆ" ಎಂದ. "ಏನು ಮಾಡಿದ್ರಿ, ಸಾರ್?" ಎಂದೆ. "ನಮ್ಮ ರಾಷ್ಟ್ರಕವಿ ಜಿ.ಎಸ್.ಎಸ್.ಗೆ ಕಾರ್ಡು ಬರೆದೆ. ಏನಂತ ಬರದೆ ಗೊತ್ತೆ? ನೀವು ರಾಷ್ಟ್ರಕವಿಯಾದದ್ದು ನಮ್ಮ ರಾಜ್ಯಕ್ಕೆ, ನಮ್ಮ ನಾಡಿಗೆ, ಅದರಲ್ಲೂ ನಮ್ಮ ಶಿವಮೊಗ್ಗಕ್ಕೆ ಹೆಮ್ಮೆಯ ವಿಷಯ. ದಯವಿಟ್ಟು ನನ್ನ ಅಭಿನಂದನೆ ಸ್ವೀಕರಿಸಿ ಅಂತ ಬರೆದೆ" ಎಂದವನು, ಕಡೆ ವಾಕ್ಯದ ಸಮಯದಲ್ಲಿ ಡಲ್ಲಾಗಿ, "ಅಯ್ಯಯ್ಯೋ ಅಡ್ರೆಸ್ಸೇಬರಿಲಿಲ್ಲ ಕಂಡ್ರಿ" ಎಂದು ಪೋಸ್ಟಾಫೀಸ್ ದಿಕ್ಕಿನಲ್ಲಿ ಓಡಿದ.

ತಾನು ಕಾರ್ಡಿನಲ್ಲಿ ಬರೆದ ಸಾಲನ್ನು ನೆನೆಯುತ್ತ ಅದನ್ನು ಜಿಎಸ್ಎಸ್ ಓದಿ ಈ ಮಹಾಶಯನ... ಅಭಿಮಾನ ತಾಳುವ ದೃಶ್ಯ ನೆನೆಯುತ್ತ ಅದೇ ಗು... ಅಂಚೆ ಡಬ್ಬಿಗೆ ಹಾಕಿಬಿಟ್ಟಿದ್ದ ಈ ಜಿಎಸ್ಎಸ್ ಅಭ್ಯ... ಕೊನೆಗೆ ಅಂಚೆಡಬ್ಬಿ ಬಳಿಯಲ್ಲಿ ಒಂದೂವರೆ ... ಕಾದು, ಅದೇಕಾರ್ಡಿಗೆ ಅಡ್ರೆಸ್ ಬರೆದಾಕಿ ಬಂದ. ಅದೇ ಕಾರ್ಡಿಗೆ ಅಡ್ರೆಸ್ ಬರಿಯದಕ್ಕಿಂತ ಬೇರೆ ... ತಗಂಡು ಬರದಿದ್ರೆ ಒಂದೂವರೆ ಗಂಟೆ ಆ ... ನಿಂತಗಂಡು ಡಬ್ಬಿನ ಕದಿಯೋನಂಗೆ ಕಾ... ಯಿರಲಿಲ್ಲವಲ್ರಿ?" ಎಂದಾಗ, "ಹೌದಲ್ರೀ?" ...

* * * * * *

ಈ ಮುಗ್ಧವ್ಯಕ್ತಿಗೆ ಸಾಹಿತಿಯಾಗಬೇ... ಆಸೆಯಿತ್ತೇನೊ, ಆದರೆ ಆಗಲಿಲ್ಲ, ಆದರೂ ಸಾ... ಸಂಘದಲ್ಲಿ ಓಡಾಡುತ್ತಾ, ಗಣ್ಯ ಸಾಹಿತಿಗಳಿಗೇ ... ಪ್ರಶ್ನೆ ಹಾಕುತ್ತ ಕಾಲ ಕಳೆಯುವುದು ... ತೊಂದರೆಯಾಗುವ ಕೆಲಸವೇನಲ್ಲ, ಆದರೆ ಸಾಹಿತ್ಯ ... ಕೆಲಸಗಳಲ್ಲಿ ನಿರತರಾದವರಿಗೆ ಕ್ವಿಜ್ ಪ್ರಶ್ನೆ ಹಾಕಿ... ಸಿಗದಿದ್ದರೆ ಪಕಾರೆಂದು ನಗಾಡಿ, ನಿರಂತರ ... ಮಾಡುವುದನ್ನು ಸಹಿಸಿಕೊಳ್ಳುವುದು ಹೇಗೆ?" ... ಏನಾದರೂ ಗಂಭೀರವಾಗಿ ಮಾತಾಡುತ್ತಿರಬೇ... "ತೇಜಸ್ವಿಗೆ ಕಾರ್ಡು ಬರದು ಉತ್ತರ ತರಿಸಿಕೊ... ನಾನು" ಎಂದು ಬಡುವುದು. ಉತ್ತರ ಕೊ... ಕಾರ್ಡು ಬರೆದ ಕಾರಣ ಹೇಳಿ ತಲೆ ತಿನ್ನುವುದು... ಇಂತಹ ಕಿರಿಕಿರಿಯಿಂದ ಯಾರಿಗೆ ಹಿಂಸೆಯಾ... ಏನೋ ಬೈದರು. ಆನಂತರ ಈತನ ಉಪಟಳ... ಹೋಯ್ತು, ಅದರಿಂದ ನಿಜಕ್ಕೂ ನನಗೆ ಬೇಸರ...

* * * * * *

ಮತ್ತೆ ವೃದ್ಧ ಕವಿ ಸಿಕ್ಕು ತಮ್ಮ ಕವನಗಳ ಅ... ಕೇಳಿದರು. ನಾನು ಮುಖದಲ್ಲಿ ಕಾವ್ಯದ ಕಳೆ ತಂದು... "ಬ್ಯೂಟಿಫುಲ್" ಎಂದೆ. ಕವಿ ತರುಣ ಕವಿಯಾಗಿ... "ಗೌಡ್ರೆ, ಇವತ್ತು ಬೆಳಿಗ್ಗೆ ವಾಕ್ ಹೋಗಿದ್ದೆ, ಏ... ಮೂಡಿ ಬಂತು ಅಂತೀರಿ. ನೋಡಿ ಇಲ್ಲಿ, '... ಹನಿ ಹನಿ ಹನಿ' ಅಂತ ಒಂದು ಸಾಲು ...

ಈ ಶ್ಲೋಕದಲ್ಲಿ 'ನನ್ನನ್ನೂ ಕುರಿತು ಏನೂ ಕೇಳುತ್ತಿರುವೆ' ಸೂಚಿಸುವ ದಿಗ್ಭ್ರಮೆಯನ್ನು 'ನಿನ್ನ ಪಾದದ ಕೊರಳು' ನಿರ್ದೇಶಿಸುವ ನಿರ್ದಿಷ್ಟ ದೇಹ ಭಾಗವನ್ನು, 'ರಾಮನಿಲ್ಲದ' ಧ್ವನಿಸುವ 'ಪತಿ ಇಲ್ಲದಿರುವುದರಿಂದ ನೋಡಲು ಆಸಾಧ್ಯ' ಎಂಬುದನ್ನು 'ಹೇಗೆ ತಾನೆ ನೋಡಲಿ' ಎಂಬಲ್ಲಿ ಕರ್ಮಪದದ ಅಧ್ಯಾಹಾರವನ್ನು ಗಮನಿಸಬೇಕು. ಆದೀಗ ಸೀತೆಯ ಸೂಚನೆ ಎಷ್ಟು ಭಯಾನಕವಾದುದು ಎನ್ನುವುದು ಸಂಪೂರ್ಣವಾಗಿ ಮನವರಿಕೆಯಾಗುತ್ತದೆ.

ಇಲ್ಲಿ ಓದುಗನು ಗಮನಿಸಬೇಕಾದ್ದು ಸೀತಾಲಕ್ಷ್ಮಣರ ಪರಸ್ಪರ ಹೃದಯ ವಿದ್ರಾವಕತೆಯನ್ನು, ದಾರುಣತೆಯನ್ನು, ಸೀತಾಲಕ್ಷ್ಮಣರು ತಮ್ಮ ಸಂಬಂಧದಿಂದಲೇ ಬಂಧಿಗಳು. ಅವರ ನಿಗೂಢ ಸಂಬಂಧ ಬಂಧನವೇ ಅವರ ಮೂಕ ಶೋಕಕ್ಕೆ, ಮೌನ ವೇದನೆಗೆ ಕಾರಣ.

ಸೀತೆ ಹೇಗೆ ತನ್ನ ಮತ್ತು ಲಕ್ಷ್ಮಣನ ಸಂಬಂಧದಿಂದ ಉತ್ತಸ್ತಳೋ ಹಾಗೆಯೇ ಲಕ್ಷ್ಮಣನೂ ತನ್ನ ಮತ್ತು ಸೀತೆಯ ಅನುಬಂಧದಿಂದ ವ್ಯಾಕುಲನು ಸೀತೆಯ ರೂಪ ಲಕ್ಷ್ಮಣನನ್ನು ಎಷ್ಟರಮಟ್ಟಿಗೆ ಕಾಡಿದ ಎಂದರೆ ಅವನು ಆದರ ವಿರುದ್ಧ ತನ್ನ ಮೇಲೆ ಕಡ್ಡಾಯವಾದ ನಿರ್ಬಂಧವನ್ನು ಹೇರಿಕೊಳ್ಳ ಬೇಕಾಗಿದೆ. ಅವಳ ಮುಖವನ್ನು ಕಣ್ಣೆತ್ತಿ ನೋಡದಿರುವುದಲ್ಲದೆ, ವ್ರತದಂತೆ ನಿತ್ಯವೂ ಅವಳ ಪಾದಗಳನ್ನು ಪೂಜಿಸುವುದು ಅವನ ಜೀವನದ ಪ್ರಕ್ರಿಯೆಯಾಗಿಬಿಟ್ಟಿದೆ. ಸೀತೆ ಸುಂದರಿ; ಅವಳ ಸೌಂದರ್ಯ ರಾಮನ ಇನ್ನಿತರ ತಮ್ಮಂದಿರನ್ನು, ಭರತ, ಶತುಘ್ನರನ್ನು, ಅಥವಾ ಅವಳನ್ನು ಪೂಜ್ಯ ಭಾವದಿಂದ ನೋಡುವ ಇನ್ನಿತರ ಸಂಬಂಧಿಗಳನ್ನು ಕಣಕಿದಂತಿಲ್ಲ. (ಸೌಂದರ್ಯ ಎಷ್ಟೇ ಅಪೂರ್ವವಾದದ್ದಿರಲಿ ಅದು ಲೈಂಗಿಕವಾಗಿ ಕೆಣಕುವಂತಾದ್ದು ಎನ್ನುವುದು ಸೌಂದರ್ಯದ ಬಗೆಗಿನ ಸರಳೀಕರಣ. ಸೌಂದರ್ಯಕ್ಕೂ ಕಾಮಕ್ಕೂ ನೇರವಾದ ಸಂಬಂಧ ಕಲ್ಪಿಸಿ, ಒಂದನ್ನು ಒಂದಕ್ಕೆ ಸಮೀಕರಿಸುವುದು ಸಾಧುವಾದದ್ದಲ್ಲ). ಸೀತೆಯ ಬಗ್ಗೆ ಲಕ್ಷ್ಮಣನ ಸಮಸ್ಯೆ ವ್ಯಯಕ್ತಿಕವಾದ್ದದು; ಲಕ್ಷ್ಮಣನದ್ದೇ. ಅದನ್ನು ಸೀತೆ ತನ್ನ ಇಂಗಿತದಲ್ಲಿ ಅರಿತಿದ್ದಾಳೆ, ತಾನೂ ಅದರಲ್ಲಿ ಭಾಗಿಯಾಗಿದ್ದಾಳೆ.

ಅಲ್ಲಿ ಮಾಯಾಜಿಂಕೆಯ ಪ್ರಸಂಗವನ್ನು ಗಮನಿಸಬೇಕು. ಸೀತೆ 'ಹಾ ಸೀತೆ, ಲಕ್ಷ್ಮಣಾ' ಎಂಬ ಕೂಗನ್ನು ಕೇಳಿ, ಲಕ್ಷ್ಮಣನನ್ನು ರಾಮನ ರಕ್ಷೆಗೆ ಹೋಗೆಂದು ಹೇಳಿದಾಗ ಅವನು ಹಾಗೆಯೇ ನಿಂತಿರುವುದನ್ನು ಕಂಡು ಕ್ರುದ್ಧಳಾಗಿ ಲಕ್ಷ್ಮಣನನ್ನು ಹೀನಾಯವಾಗಿ ಬಯ್ಯುತ್ತಾ ಪದೇಪದೇ ಈ ಮಾತುಗಳನ್ನು ಆಡುತ್ತಾಳೆ; "ನೀನು ನನಗೋಸ್ಕರ ಹೀಗೆ ಮಾಡುತ್ತೀ. ನನ್ನ ಮೇಲೆ ನಿನಗೆ ಆಸೆಯಿದೆ. ನನಗಾಗಿಯೇ ನೀನು ರಾಮನ ಜೊತೆ ಕಾಡಿಗೆ ಬಂದಿದ್ದೀಯೆ. ರಾಮನು ಸಾಯಲೆಂದೇ ನಿನ್ನ ಇಚ್ಛೆ....." ಲಕ್ಷ್ಮಣನ ಇಂಗಿತದಲ್ಲಿ ತಾನು ತನ್ನ ಹೆಂಡತಿ ಊರ್ಮಿಳೆಯನ್ನು ಬಿಟ್ಟು ರಾಮನೊಡನೆ ಕಾಡಿಗೆ ಬಂದಿರುವುದರಲ್ಲಿ ಸೀತೆಯ ಆಕರ್ಷಣೆ ಇದ್ದಿರಬಹುದು; ಆದರೆ ಆ ಮಾತನ್ನು ಸೀತೆ ಒತ್ತಿ ಒತ್ತಿ ತಿರುತಿರುಗಿ ಹೇಳುವುದರಲ್ಲಿ ತನ್ನ ಇಂಗಿತವನ್ನೂ ಹೊರಗೆಡಹುತ್ತಿದ್ದಾಳೆ. ಅಲ್ಲದೆ ಅವನನ್ನು ಹೀನಾಯವಾಗಿ ಬಯ್ಯುವುದರಲ್ಲಿ "ಅಯೋಗ್ಯ, ನಿಷ್ಕರುಣಿ, ಘಾತಕಿ, ಕುಲಪಾತಕಿ, ಕಪಟ'-ತನ್ನನ್ನೂ ಆ ಮೂಲಕ ಬಯ್ದುಕೊಳ್ಳುತ್ತಿದ್ದಾಳೆ; ತನ್ನ ಅಪರಾಧಕ್ಕೆ (guilt) ತಾನೇ ಶಿಕ್ಷಿಸಿಕೊಳ್ಳುತ್ತಿದ್ದಾಳೆ. ಈ ಅಂಶ ನಮಗೆ ಇನ್ನೂ ಚೆನ್ನಾಗಿ ಮನದಟ್ಟು ಆಗುವುದು ಇಲ್ಲಿ; ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋಗಲು ಬಂದಾಗ, ಅವಳ ಮೇಲೆ ದೈಹಿಕವಾಗಿ ಅವನು ದುರಾಕ್ರಮಣ ಮಾಡಿದಾಗ, ಅವಳು ಲಕ್ಷ್ಮಣನ ಬಗ್ಗೆ ತೋರಿದ ಕೋಪವನ್ನಾಗಲಿ, ಕ್ರೌರ್ಯವನ್ನಾಗಲಿ ತೋರುವುದಿಲ್ಲ; ಬರೀ ಗೋಳಾಡುತ್ತಾಳೆ; ಮೊರೆಯಿಡುತ್ತಾಳೆ ವಿನಃ ಅವನನ್ನು ಶಪಿಸುವುದೂ ಇಲ್ಲ.

ಡಾ. ಪ್ರೊ. ಲಂಕಿ ರಾಮಮೂರ್ತಿಯವರ
ಸೀತಾಯಣ

ಸೀತೆ ಲಕ್ಷ್ಮಣನನ್ನು ದೂಷಿಸುವುದಕ್ಕೆ ಮುಂಚೆ ನಡೆದ ಮಾಯಾಜಿಂಕೆಯ ಸನ್ನಿವೇಶ ಅತ್ಯಂತ ಗಹನವಾದದ್ದು. 'ಕಾಮರೂಪಿ'ಯಾದ ಜಿಂಕೆಯನ್ನು ನೋಡಿ ಸೀತೆ ಮೋಹಿತಳಾಗುತ್ತಾಳೆ. ಜಿಂಕೆ ಅವಳ ಮನಸ್ಸನ್ನು ಸೂರೆಗೊಳ್ಳುತ್ತದೆ. ಹೃದಯವನ್ನು 'ಹರಣ' ಮಾಡುತ್ತದೆ. ಸೀತೆ ಆ ಮೃಗದ ರೂಪಕ್ಕೆ, ಧ್ವನಿಗೆ, ಸಂಪೂರ್ಣ ಮಾರುಹೋಗಿ ರಾಮನನ್ನು ಕುರಿತು, ಅದನ್ನು ಜೀವಂತವಾಗಿಯಾದರೂ, ಕೊಂದಾದರೂ ತಾ, ಎನ್ನುತ್ತಾಳೆ:

'ನಿಹಿತಸ್ಯಾಸ್ಯಸತ್ವ ಸ್ಯಜಾಂಬೂನದಮಹತ್ವಚ।
ಶಷ್ಪಬೃಸ್ಯಾಂವಿನೀತಯಾಮಿಚ್ಛಾಮ್ಯಹಮುಪಾಸಿತುಮ್॥'

ಎಂದರೆ 'ಇದನ್ನು ಕೊಲ್ಲಬೇಕಾಗಿ ಬಂದರೆ ಸುವರ್ಣಮಯವಾದ ಚರ್ಮ ದೊರಕುತ್ತದೆ; ನಾನು ಹುಲ್ಲಿನ ಚಾಪೆಯ ಮೇಲೆ ಈ ಚರ್ಮವನ್ನು ಹಾಸಿ ಕುಳಿತುಕೊಳ್ಳಬೇಕೆಂಬ ಇಚ್ಛೆ ಇದೆ.'

ಇಲ್ಲಿ ಜಿಂಕೆ, ಸೀತೆಯ ಮನಸ್ಸನ್ನು ಪ್ರಚೋದಿಸುವ ಪ್ರಚಂಡವಾದ ಕಾಮದ ಪ್ರತಿಮೆಯಾಗಿ ನಿಲ್ಲುತ್ತದೆ. ಜಿಂಕೆಯನ್ನು ಕೊಂದು ಅದರ ಚರ್ಮದ ಮೇಲೆ ತಾನು ಕುಳಿತುಕೊಳ್ಳಬೇಕು ಎನ್ನುವ ಅವಳ ಉತ್ಕಟ ಪಿಪಾಸೆ ಆಕ್ರೋಶವಾದ ಕಾಮಾಕಾಂಕ್ಷೆ. ಇದನ್ನು ಹೇಳುತ್ತಿದ್ದಂತೆಯೇ ತನ್ನ ವಾಂಛೆಯ ಅತಿರೇಕದ ಪ್ರಜ್ಞೆ ಅವಳಿಗೇ ಅರಿವಾಗುತ್ತದೆ:

ಕಾಮವೃತ್ತಮಿದಂರೌದ್ರಂ ಸ್ತ್ರೀಣಾಮಸದೃಶಂಮತಂ।
ವಪುಷಾತ್ವಸ್ಯಸತ್ವಸ್ಯ ವಿಸ್ಮಯೋಜನಿತೋಮಮ॥

ಅಂದರೆ 'ರುದ್ರವಾದ ಈ ಕಾಮಪ್ರವೃತ್ತಿ ಸ್ತ್ರೀಯರಿಗೆ ಸದೃಶವಾದುದಲ್ಲ; ಆದರೆ ಈ ಪ್ರಾಣಿಯ ಮೈಯಿಂದ ನನ್ನಲ್ಲಿ ವಿಸ್ಮಯ ಜನಿತವಾಗಿದೆ.'

ಸೀತೆಯ ಈ ರೀತಿಯ ಮನೋದೌರ್ಬಲ್ಯಕ್ಕೆ ಕಾರಣವಿಲ್ಲದಿಲ್ಲ, ರಾಮನು ಸೀತೆಯ ಜತೆಯಲ್ಲಿದ್ದರೂ ಅವನು (ಸೀತೆ ಸನ್ಯಾಸಿ ವೇಷದ ರಾವಣನಿಗೆ ಮುಂದೆ ಹೇಳುವಂತೆ) ಜಟಧಾರಿ, ತಾಪಸಿ, ಜಿತೇಂದ್ರಿಯ. ಇದರಿಂದ ಸೀತೆ ಒಂದು ರೀತಿಯಲ್ಲಿ 'ವಿರಹಿ'. (ಇಲ್ಲಿ ವನಕ್ಕೆ ತೆರಳುವ ಮುಂಚೆ ಸೀತೆ ರಾಮನನ್ನುದ್ದೇಶಿಸಿ ಹೇಳಿದ್ದನ್ನು ಗಮನಿಸಿ)



'ಕಿಂತ್ವಾಮನ್ಯತವೈದೇಹಃ
ಪಿತಾಮೇಮಿಥಿಲಾಧಿಪಂ।
ರಾಮಜಾಮಾತರಂಪ್ರಾಪ್ಯ
ಸ್ತ್ರೀಯಂಪುರುಷವಿಗ್ರಹಂ'॥

ಇಂತಹ ಅಂತರಂಗದ ಕಾಮ ಪ್ರವೃತ್ತಿಯ ಅಭಿವ್ಯಕ್ತಿಯೇ ಆಗಿ ನಿಲ್ಲುತ್ತದೆ. ಅದರಿಂದಲೇ ಅದು ಮರೆಯಾಗಿ 'ಹಾ ಸೀತೆ, ಹಾ ಲಕ್ಷ್ಮಣಾ' (ಇಲ್ಲಿ ಸೀತೆ ಲಕ್ಷ್ಮಣ, ಈ ಪದಗಳ ಸೀತಾಲಕ್ಷ್ಮಣರ ಅನುಬಂಧವನ್ನು 'ಅಶರೀರವಾಣಿ'ಯಲ್ಲಿ ಖಚಿತಪಡಿಸುವುದನ್ನು ಗಮನಿಸಿ) ಎಂದೊಡನೆ ಸೀತೆ ಲಕ್ಷ್ಮಣನ ಮೇಲೆ ತನ್ನ ಬಗ್ಗೆ ಅವನಿಗಿರುವ ಅನುರಕ್ತತೆಯನ್ನು ಆರೋಪಿಸುವುದು; ಪದೇಪದೇ ಆ ಸಂಬಂಧವನ್ನು ಆರೋಪಿಸುತ್ತಲೇ ಮೆಲಕು ಹಾಕುತ್ತಲೇ ಅದನ್ನು, ತನ್ನ ನೈತಿಕಪ್ರಜ್ಞೆಯ ಸಮಾಧಾನಕ್ಕಾಗಿ, ದೂಷಿಸುವುದು; ಆ ಮೂಲಕ ತನ್ನನ್ನು ತಾನು ಪರೋಕ್ಷವಾಗಿ ದೂಷಿಸಿಕೊಳ್ಳುವುದು–ಇವೆಲ್ಲಾ ಕಾಮದ ವಿಚಿತ್ರ ವ್ಯಾಪಾರಗಳು.

ಇಷ್ಟೇ ಅಲ್ಲ, ಲಕ್ಷ್ಮಣ ಸೀತೆಯನ್ನಗಲಿದೊಡನೆ ರಾವಣ ಸನ್ಯಾಸಿಯಾಗಿ ಬರುತ್ತಾನೆ. ಅವನು ಸೀತೆಯನ್ನು ಕುರಿತು ಅವಳ ಅಂಗಾಂಗಗಳನ್ನು ಒಂದೊಂದಾಗಿ ಲೈಂಗಿಕವಾಗಿ ವರ್ಣನೆ ಮಾಡುತ್ತಾನೆ. ಉದಾಹರಣೆ ಒಂದು ಕಡೆ ಅವನು ಹೀಗೆನ್ನುತ್ತಾನೆ: 'ವರ್ತುಲಾಕಾರವಾಗಿ ಬೆಳೆದು ತಾಳೆಯ ಹಣ್ಣುಗಳಂತೆ ಚೆಲುವಾದ ನಿನ್ನ ಪೀನೋನ್ನತ ಸ್ತನಗಳು ಸ್ವಲ್ಪ ಅಲುಗುತ್ತಿವೆ.' ಆದರೆ ಈ ಸುವಿಸ್ತಾರವಾದ ಕಾಮುಕ ವರ್ಣನೆಗಳನ್ನೆಲ್ಲಾ ಸೀತೆ ತಡೆಹಾಕದೆ ಕೇಳುತ್ತಾಳಲ್ಲದೆ ಅದರ ಬಗ್ಗೆ ಅಸಮಾಧಾನವನ್ನೂ ವ್ಯಕ್ತಪಡಿಸುವುದಿಲ್ಲ. (ಆದರೆ ಕವಿಯ ಉಲ್ಲೇಖ ಅವನು ಬ್ರಾಹ್ಮಣ ಸನ್ಯಾಸಿಯಾದುದರಿಂದ ಎಂದು ಇದೆ.) ಸೀತೆ ಅವನಿಗೆ ಅತಿಥಿಸತ್ಕಾರವೆಸಗುತ್ತಾಳೆ. ಅಲ್ಲದೆ ಅವನಿಗೆ ತನ್ನ ಕಥೆಯನ್ನು ಆತ್ಮೀಯರಿಗೆ, ಸ್ನೇಹಿತರಿಗೆ, ಹಿತೈಷಿಗಳಿಗೆ ಹೇಳುವಷ್ಟು ಸಲಿಗೆಯಿಂದ ಹೇಳುತ್ತಾಳೆ. ಆಮೇಲೆ ರಾವಣ ಸೀತೆಯನ್ನು ಬಲಾತ್ಕರಿಸುವಲ್ಲಿ ಸೀತೆ ತಾನು ಲಕ್ಷ್ಮಣನ ಬಗ್ಗೆ ತೋರಿಸಿದ ಕೋಪ ಕ್ರೌರ್ಯಗಳಾವುವನ್ನೂ ತೋರ್ಗೊಡುವುದಿಲ್ಲ, ಕೊನೆಯಲ್ಲಿ ರಾವಣ ಸೀತೆಯ ಕೇಶಪಾಶವನ್ನು ಎಡಗೈಯಿಂದಲೂ, ಅವಳ ತೊಡೆಗಳನ್ನು ಬಲಗೈಯಿಂದಲೂ ಹಿಡಿದೆಳೆದಾಗಲೂ (ಊರ್ವೋಸ್ತು ದಕ್ಷಿಣೇನೈವಪರಿಜಗ್ರಾಹ ಪಾಣಿನಾ... ಅಂಕೇನಾದಾಯವೈದೇಹೀಂ ರಥ ಮಾರೋಪಯತ್ತದಾ) ಅಂದರೆ ಒಂದು ವಿಧದಲ್ಲಿ ವಸ್ತ್ರಾಪಹರಣ' (symbolic rape) ಮಾಡಿದಾಗ್ಯೂ, ಸೀತೆ ಅವನನ್ನು ಬಯ್ಯುವುದಾಗಲಿ, ಶಪಿಸುವುದಾಗಲಿ ಮಾಡದೆ 'ರಾಮಾ' ಎಂದು ಕೂಗುತ್ತಾಳೆ, ಗಟ್ಟಿಯಾಗಿ ಅಳುತ್ತಾಳೆ.

ಅಂದರೆ ರಾಮಾಯಣದ ಈ ಪ್ರಸಂಗದಲ್ಲಿ ಸೀತೆಯ ಅಂತರಂಗದಲ್ಲಿ ಹುದುಗಿದ ಕಾಮ, ಮಾಯಾಜಿಂಕೆಯಾಗಿ ಸೀತೆ ಲಕ್ಷ್ಮಣನನ್ನು ನಿಂದಿಸುವಲ್ಲಿ ಲಕ್ಷ್ಮಣನಾಗಿ, ರಾಮನು ಸೀತೆಯನ್ನು ವರ್ಣಿಸುವಲ್ಲಿ ಪ್ರಣಯಿಯಾಗಿ, ರಾವಣ ಸೀತೆಯನ್ನು ದೌರ್ಜನ್ಯದಿಂದ ಎಳೆದಾಡುವಲ್ಲಿ ಮಾನಾಪಹಾರಿಯಾಗಿ ವ್ಯಕ್ತಗೊಳ್ಳುತ್ತದೆ. (ಈ ಸಂದರ್ಭದಲ್ಲಿ ಸೀತೆಯನ್ನು ಹೆಚ್ಚಾಗಿ 'ವೈದೇಹಿ' ಎಂದರೆ, ದೇಹವಿಲ್ಲದವಳು, ಅನಂಗೆ ಎಂದು ಸಂಬೋಧಿಸಲಾಗಿರುವುದನ್ನು ಗಮನಿಸಬೇಕು). ಸೀತೆಯಲ್ಲಿನ ಸುಪ್ತ ಕಾಮ ಪ್ರಕಟಗೊಳ್ಳುತ್ತಿದ್ದಂತೆಯೇ, ಅದು ನಾನಾ ವೇಷಧಾರಿಯಾಗಿ ಅವಳ ಪಿಪಾಸೆಗೆ ವ್ಯಂಜಕವಾಗುತ್ತಿದ್ದಂತೆಯೇ ಸೀತೆಗೂ ತನ್ನ ದೌರ್ಬಲ್ಯದ ಬಗ್ಗೆ ಲಕ್ಷ್ಮಣನಿಗೂ ಸೀತೆಯ ನಿಸ್ಸಹಾಯಕತೆಯ ಬಗ್ಗೆ ಅರಿವಾಗುತ್ತದೆ. ಆದ್ದರಿಂದಲೇ ಸೀತೆ ತನಗೆ ಮಾಯಾ ಜಿಂಕೆಯ ಮೇಲಿನ ವಿಪರೀತ ವ್ಯಾಮೋಹವನ್ನು ಕಂಡು ತನ್ನಲ್ಲಿನ "ಈ ರುದ್ರವಾದ ಕಾಮ ಪ್ರವೃತ್ತಿ ಸ್ತ್ರೀಯರಿಗೆ ಸದೃಶವಾದುದಲ್ಲ"ವೆಂದು ರಾಮನಿಗೆ ತನ್ನ ದೌರ್ಬಲ್ಯವನ್ನು ನಿವೇದಿಸುತ್ತಾಳೆ; ಮತ್ತು ಲಕ್ಷ್ಮಣನು, ಸೀತೆಯು ತನ್ನ ಮೇಲೆ ಲೈಂಗಿಕ ಆರೋಪಣೆ ಮಾಡಿದಾಗ, "ಲೋಕದಲ್ಲಿ ಹೆಂಗಸರ ಸ್ವಭಾವವೇ ಹೀಗೆ", "ಹೆಂಗಸಾದ್ದರಿಂದ ನಿನಗೆ ದುಷ್ಟಸ್ವಭಾವ ಸಹಜ" ಎಂದು ಸೀತೆಯ ದೌರ್ಬಲ್ಯವನ್ನು ಕಂಡುಕೊಳ್ಳುತ್ತಾನೆ. ಹೀಗೆ ಸೀತೆಯ ದೌರ್ಬಲ್ಯದ ಅಭಿವ್ಯಕ್ತಿಯ ಜೊತೆಗೆ ಸೀತಾಲಕ್ಷ್ಮಣರಿಬ್ಬರೂ ಆ ದೌರ್ಬಲ್ಯವನ್ನು ಮಾನವೀಯವಾಗಿ ಕಂಡುಕೊಳ್ಳುವುದರಿಂದ, ಸೀತಾಲಕ್ಷ್ಮಣರ ಈ ಸಂದರ್ಭದಲ್ಲಿ ನಾವು ಅತ್ಯಂತ ಗುರುತರವಾಗಿ ಕಂಡುಕೊಳ್ಳಬೇಕಾದ್ದು ಅವರ ಮಾನವೀಯತೆಯನ್ನು; ಆ ಮಾನವೀಯತೆಯನ್ನೇ ಕಾವ್ಯ ಈ ಮಾನವೀಯ ಸಂದರ್ಭದಲ್ಲಿ ಪ್ರಶಸ್ತವಾಗಿ ಅಭಿವ್ಯಕ್ತಿಗೊಳಿಸಿರುವುದು.

(ಮುಂದುವರೆಯುತ್ತದೆ)

ನಾನು ಒಂದಿಷ್ಟು ದೂರ ವಾಕ್ ಹೋಗಿದ್ರೆ ಕವನ ಪೂರ್ತಿಯಾಗದೇನೊ, ವಾಪಸ್ ಬಂದೆ ಕಂಡ್ರಿ" ಎಂದರು. ಉಕ್ಕಿಬರುತ್ತಿದ್ದ ನಗು ತಡೆದುಕೊಂಡು "ಸಾರ್ ಈ ಕವನ ಕಂಪ್ಲೀಟ್ ಆಗೋವರಿಗೂ ನೀವು ವಾಕ್ ಬಿಡಬೇಡಿ ಸಾರ್" ಎಂದೆ. "ಜೊತೆಲಿ ಹೆಂಡತಿನೂ ಬರತೀ ಕಂಡ್ರೀ, ಅವ್ರುಳಿಗೂ ಸುಗರ್ರುದೆ. ಅದೇ ತೊಂದ್ರೆ" ಎಂದರು ಡಲ್ಲಾಗಿ. "ನಿಜವಾಗ್ಲೂ ಕಾವ್ಯಕ್ರಿಯೆಗೆ ಸುಗುರ್ರು ತೊಂದ್ರೆನೆ ಕಂಡ್ರಿ" ಎಂದು ಜಾರಿಕೊಂಡೆ.

* * * * * *



ಮತ್ತೊಬ್ಬ ಗಂಭೀರ ಸಾಹಿತ್ಯಜೀವಿ ಕಾರ್ಯಕ್ರಮ ನಿರೂಪಣೆಗೆಂದೇ ತಾಲೀಮು ನಡೆಸುತ್ತ, ಇನ್ನೂ ತಯಾರಾಗದ ವ್ಯಕ್ತಿ. ಸಾಹಿತ್ಯ ಸಮ್ಮೇಳನ ಉದ್ಘಾಟನೆ ಸಮಯದಲ್ಲಿ ನಾಡಗೀತೆ ಹಾಡುವ ಮಕ್ಕಳು ಬಂದು ತಾಲೀಮು ನಡೆಸುತ್ತಿದ್ದರು. ಅವ್ರುಗಳಿಗಾಗಿ ತಿಂದಿ ಹೇಳಲಾಗಿತ್ತು. ಆದರಂತೆ ಬಹುದೂರದ ಹೋಟೆಲಿನಿಂದ ಹುಡುಗನೊಬ್ಬ ಇಡ್ಲಿ ತಟ್ಟೆಗಳೊಂದಿಗೆ ಬಂದು "ಸಾರ್, ತಿಂಡಿ" ಎಂದ. ಆಗಲೇ ಉಂಡು ಕುಳಿತಿದ್ದ ಈ ವ್ಯಕ್ತಿ "ಏ ಇಲ್ಯಾರು ತಿಂಡಿ ಹೇಳಿಲ್ಲ, ನಮ್ಮದೆಲ್ಲಾ ಊಟ ಆಗಿದೆ. ತಗಂಡೋಗು..... ಕೇಳಲ್ಲ, ಮಾಡಲ್ಲ ತಂದು ಬಿಡದಿಲ್ಲಿ" ಎಂದು ಮುಖ ಸಿಂಡರಿಸಿದ. ಆ ಹುಡುಗ ಬೇಸರದಿಂದ ಮಣಭಾರದ ಇಡ್ಲಿ, ಸಾರು ಹೊತ್ತು ಹೋಗುವಾಗ ಯಾವನೋ ಬೈಕಿನವನು ಬಂದು ಗುದ್ದಿದ. ಕೆಳಕ್ಕುರುಳಿದ್ದ ಇಡ್ಲಿ ಇತ್ಯಾದಿ ಹೋದವು. ಇತ್ತ ತಾಲೀಮು ಮುಗಿಸಿದ ಮಕ್ಕಳು ಬಂದು ತಿಂಡಿ ಕೇಳಿದವು. ಆಗ ಈ ಗಂಭೀರ ವ್ಯಕ್ತಿ ಸದ್ದಿಲ್ಲದೆ ಜಾಗ ಖಾಲಿ ಮಾಡಿತು.

* * * * * *

ಹೀಗೆ ಶಿವಮೊಗ್ಗದ ಸಾಹಿತ್ಯ ಪರಿಷತ್ ಆಫೀಸಿನ ಸುತ್ತ ಅಪರೂಪದ ವ್ಯಕ್ತಿಗಳು ಹೇರಳವಾಗಿ ಸಿಗುತ್ತಾರೆ. ಇವರುಗಳ ಜೊತೆ, ಸಂಘಟಕರುಗಳಿಗೂ, ಸಾಹಿತ್ಯ ಲೋಕಕ್ಕೂ, ಯಾವ ಸಂಬಂಧವೂ ಗೋಚರಿಸುವುದಿಲ್ಲ, ಹೇಳಿದ್ದನ್ನು ಸರಿಯಾಗಿ ಮಾಡುವುದಿಲ್ಲ, ತಮಗೆ ತಿಳಿದುದನ್ನು ಮಾಡಿದಾಗಲೂ ಅದು ಸರಿಯಾಗಿರುವುದಿಲ್ಲ. ಇಂತಹ ಕೆಲವರು ಮನೆಯಲ್ಲೇ ಉಳಿದುಬಿಟ್ಟಿದ್ದಾರೆ. ಏಕೆಂದರೆ ಅವುಗಳನ್ನು ಹೋಗಿ ಕರೆದಿಲ್ಲವಂತೆ. ಈ ಸಾಹಿತ್ಯ ಸಮ್ಮೇಳನವು ಪರಿಷತ್ ಅಧ್ಯಕ್ಷನ ಮನೆ ಮದುವೆಯಾಗಿದ್ದರೆ ಹೋಗಿ ಕರೆಯಬಹುದಿತ್ತು. ಆದರೆ ಇವರಿಗೆ ಅದೂ ಅರ್ಥವಾಗುವುದಿಲ್ಲ.

ಸಮ್ಮೇಳನಕ್ಕೆ ಸರಿಯಾಗಿ ಜಿಲ್ಲೆಯ ಸಮಗ್ರ ಚಿತ್ರಣದ ಒಂದು ಪುಸ್ತಕ ತರಬೇಕೆಂಬ ನಿಟ್ಟಿನಲ್ಲಿ ಜಿಲ್ಲೆಯ ಕೃಷಿ ಬಗ್ಗೆ ಒಂದು ಲೇಖನವನ್ನು ಸಂಬಂಧಿಸಿದ ಕೃಷಿ ಅಧಿಕಾರಿಯೊಬ್ಬನಿಗೆ ಕೇಳಲಾಯ್ತು. ಆತ ಸಾಹಿತ್ಯ ಸಮ್ಮೇಳನಕ್ಕಾಗಿ ಲೇಖನ ಬರೆಯುವುದೆಂದರೆ ಅದು ಖಂಡಕಾವ್ಯವೇ ಆಗಿರಬೇಕು ಎಂದು ಗ್ರಹಿಸಿ, ತನ್ನ ಇಲಾಖೆಯ ಸಾಧನೆ ಬಗ್ಗೆ ಹತ್ತು ಪೇಜಿನ ಕವನವನ್ನೇ ಕೆರೆದು ಬಿಸಾಡಿದ.

ಜಿಲ್ಲೆಯ ಕೃಷಿ ಬಗ್ಗೆ ಹೆಮ್ಮೆಯಿಂದ ಹೇಳುವೆ.
ಕಬ್ಬು ಬತ್ತ ತೆಂಗು, ಅಡಿಕೆ ತೂಗುತಿರುವುದು.
ಅಲ್ಲೊಬ್ಬನಿಹನು ಆಧುನಿಕ ಕೃಷಿ ತಜ್ಞ
ಹೆಸರು ಪ್ರಪುಲ್ಲಚಂದ್ರ ಕರೆದವರು ಪುಟ್ಟಣ್ಣ
ಅಬ್ಬಲಗೆರೆಯಲೊಬ್ಬ ರೈತನಿಹನೊಬ್ಬ
ಬೆಳೆದಿಹನು ಟಮೋಟ ಹೊಲದ ತುಂಬ
ಹಸಿರು ಕೆಂಪು ಟಮೋಟ ಮೋಹಕ ನೋಟ
ಜಿಲ್ಲೆಯ ಕೃಷಿ ಬಗ್ಗೆ ಹೆಮ್ಮೆಯಿಂದ ಹೇಳುವೆ....

ಹೀಗೆ ಹರಿಶ್ಚಂದ್ರ ಕಾವ್ಯ ಬರೆದ ಆ ಕೃಷಿ ಅಧಿಕಾರಿ ಸಿಕ್ಕರೆ, ಒಂದು ಈಡುಗಾಯಿ ಹೊಡೆದು ಆತನ ಕಾಲಿಗೆ ಬೀಳಬೇಕೆನಿಸಿತು. ಸದ್ಯ ಆತನಿನ್ನೂ ಸಿಕ್ಕಿಲ್ಲ!

* * * * * *

ಮತ್ತೆ ಕಡೆಯ ತಮಾಷೆಯೆಂದರೆ, ಜಿಲ್ಲೆಯ ಕುಸ್ತಿಪಟುಗಳ ಲೇಖನ ಬರೆಯುವ ಜವಾಬ್ದಾರಿ ಹೊತ್ತ ವ್ಯಕ್ತಿ, ಈ ಸಂಬಂಧ ವ್ಯಕ್ತಿಗಳು ಮತ್ತು ಫೋಟೋಗಳು ಬೇಕೆಂದು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟ. ಆ ಕೂಡಲೇ ಇದ್ದ ಬದ್ದ ಹಳೇ ಪೈಲ್ವಾನರೆಲ್ಲಾ ತಮ್ಮ ದಾಖಲೆಗಳು ಮತ್ತು ತಮ್ಮ ಹಳೆಕಾಲದ ಹಂದಿ ದೇಹದ ಫೋಟೋಗಳೊಂದಿಗೆ ಹಾಜರಾದರು. ಅವುಗಳನ್ನೆಲ್ಲಾ ತೆಗೆದುಕೊಂಡು ಪ್ರಕಟಿಸಿದ್ದರೆ ಅದೇ ಒಂದು ಎನ್‌ಸೈಕ್ಲೋಪಿಡಿಯಾ ಆಫ್ ಕುಸ್ತಿಯಾಗಬಹುದು. ಆ ಪೈಲ್ವಾನರಿಗೆ ಯಾವ ಸಮಜಾಯಿಸಿ ಹೇಳಿ ಕಳಿಸಿದರೂ ಏನೊ, ಅಂತೂ ಪೈಲ್ವಾನರ ಲೇಖನ ಬರೆವ ಜವಾಬ್ದಾರಿ ಹೊತ್ತವರಿಗೆ ಏನೊ ಕಾದಿದೆ!

* * * * * *

ಈ ಸಮ್ಮೇಳನ ಹಲವಾರು ವಿಶೇಷಣಗಳಿಂದಾಗಿ ಹಿಂದಿನ ಎಲ್ಲಾ ಸಾಹಿತ್ಯ ಸಮ್ಮೇಳನದ ದಾಖಲೆಗಳನ್ನು ಮುರಿಯಲಿದೆ. ಮೊದಲನೆಯದಾಗಿ ಧಾರ್ಮಿಕ ಗೋಷ್ಠಿಯೊಂದು ದೊಡ್ಡ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸಾಹಿತ್ಯದ ಶ್ರೇಷ್ಠ ಸ್ಥಾನದಲ್ಲಿ, ಜಾತಿಗಳ ತಲೆ ಮೇಲೆ ಕುಳಿತ ಸ್ವಾಮಿಗಳಿಗೆ ಸ್ಥಾನವಿರಬಾರದಿತ್ತು. ಆದರೆ, ಏನು ನಡೆಯಬಾರದಿತ್ತೋ ಅದು ನಡೆಯುತ್ತಿದೆ. ಇದು ಒಳ್ಳೆ ಬೆ[redacted]ಯಲ್ಲ.


–ಬಿ. ಚಂದ್ರೇಗೌಡ

ಅಪಸ್ವರಗಳು

ಶಿವಮೊಗ್ಗ ಸಮ್ಮೇಳನಕ್ಕೆ ವಿರುದ್ಧವಾಗಿ ಕೆಲವು ಅಪಸ್ವರಗಳು ಎದ್ದಿವೆ. ಇದು ಹಿಂದಿನಿಂದಲೂ ನಡೆದು ಬಂದ ಸಂಪ್ರದಾಯ. ಸಾಮಾನ್ಯವಾಗಿ ಸಾಹಿತ್ಯ ಸಮ್ಮೇಳನ ನಡೆಸುವವರು, ಅದರ ವಿರುದ್ಧ ಪ್ರತಿಭಟಿಸುವವರೆಲ್ಲಾ ಒಂದೇ ತರಹ ಇರುತ್ತಾರೆ. ಇಬ್ಬರೂ ಹಿಡಿದ ಜಾಡಿನಲ್ಲಿ ಹರಿಯಮುರಿಯ ಜಗಳಾಡುತ್ತ ಯಾರೂ ಸೋಲದೆ ಗೆಲ್ಲದೆ, ಸಮ್ಮೇಳನ ಎಲ್ಲರ ಕೈಮೀರಿ ಮುಕ್ತಾಯವಾಗುವುದು ಒಂದು ರೂಢಿಯಂತೆ ನಡೆದುಕೊಂಡು ಬಂದಿದೆ.

ಹಿಂದಿನ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷರಾದ ಕತ್ತಿಗೆ ಚನ್ನಪ್ಪನವರು, ತಮ್ಮನ್ನು ಕಡೆಗಣಿಸಲಾಗಿದೆ ಎಂದು ಪತ್ರಿಕಾ ಹೇಳಿಕೆ ಕೊಟ್ಟು, ಪ್ರತಿಭಟನೆಗೆ ಒಂದು ರೂಪ ಬರುವಂತೆ ಮಾಡಿದ್ದಾರೆ. ಈ ಕತ್ತಿಗೆ ಚನ್ನಪ್ಪ ಮಾಡಿದ್ದ ಒಂದು ತಮಾಷೆ ಇಲ್ಲಿ ದಾಖಲಿಸಲು ಯೋಗ್ಯ. ಈ ಹಿಂದೆ ಚನ್ನಪ್ಪ ಮಾಡಿದ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಸಭೆ ಆರಂಭವಾಗುವುಕ್ಕೆ ಮುನ್ನವೇ ಮನೋವೈದ್ಯ ಡಾ. ಅಶೋಕ ಪೈರವರಿಗೆ ಸನ್ಮಾನ ಮಾಡಿ ಸಭೆ ಚಾಲು ಮಾಡಿಸಿದ್ದರು. ಸಾಹಿತ್ಯ ಸಮ್ಮೇಳನದ ಆರಂಭದಲ್ಲಿ ಮನೋವೈದ್ಯರಿಗೆ ನಡೆದ ಸನ್ಮಾನ ತುಂಬಾ ಅರ್ಥಪೂರ್ಣವಾಗಿ ಸಾಹಿತ್ಯಚರಿತ್ರೆಯಲ್ಲಿ ದಾಖಲಾಗುವಂತದ್ದು. ಸದ್ಯಕ್ಕೆ ಈ ಬಾರಿ ಅಂತಹ ಅನಾಹುತಕ್ಕೆ ಬದಲು ಪೈ ಬೇರೆ ಗೋಷ್ಠಿ ನಡೆಸಲಿದ್ದಾರೆ.

ಅನಂತಮೂರ್ತಿ ಗೈರು!



ಅನಂತಮೂರ್ತಿಯವರು ಈ ಸಾಹಿತ್ಯ ಸಮ್ಮೇಳನಕ್ಕೆ ಬರುವುದಿಲ್ಲವೆಂದು ಘೋಷಿಸಿದ್ದಾರೆ. ಏಕೆಂದರೆ ಹಾಲಿ ಕಸಾಪ ಅಧ್ಯಕ್ಷ ಚಂಪಾ ಅನಂತಮೂರ್ತಿಯವರನ್ನು ಕನ್ನಡ ದ್ರೋಹಿಯಾಗಿ ಬಿಂಬಿಸಲು ಯತ್ನಿಸಿದ್ದರು. ಶಂಕರಮೂರ್ತಿ ಟಿಪ್ಪುವನ್ನು ಟೀಕೆ ಮಾಡಿದಾಗ ಚಂಪಾ ವಿನಾಕಾರಣ ಅನಂತಮೂರ್ತಿಯವರ ಪ್ರಸ್ತಾಪ ಮಾಡಿದ್ದು ತಪ್ಪು. ಅದಕ್ಕಿಂತ ಮೊದಲು, ಅನಂತಮೂರ್ತಿಯವರು ಎಂ.ಪಿ. ಚುನಾವಣೆಗೆ ನಿಂತಿದ್ದಾಗ, ಕುಮಾರಸ್ವಾಮಿ "ಯಾರ್ರಿ ಅನಂತಮೂರ್ತಿ?" ಎಂದಿದ್ದರು. ಇದನ್ನು ಅನಂತಮೂರ್ತಿ ಹಾಸ್ಯಮಯವಾಗಿ ಗ್ರಹಿಸಿದ್ದರೂ, ಮುಖ್ಯಮಂತ್ರಿಯಾದವನ ಅಜ್ಞಾನಕ್ಕೆ ಈ ನಾಡು ಮರುಗಿತ್ತು. ಆದಾದ ಕೆಲ ದಿನಗಳ ನಂತರ ಗಣಿ ಲಂಚ ಹಗರಣ ಹೊರಬಿದ್ದಾಗ ಅನಂತಮೂರ್ತಿಯವರು "ಈ ಸರ್ಕಾರದ ಮಂತ್ರಿಗಳು ಭಾಗವಹಿಸುವ ಯಾವುದೇ ಸಭೆಗಳಿಗೆ ನಾನು ಹೋಗುವುದಿಲ್ಲ" ಎಂದಿದ್ದರು. ಅದರಂತೆ ಅವರು ಶಿವಮೊಗ್ಗ ಸಮ್ಮೇಳನಕ್ಕೆ ಬರುವುದಿಲ್ಲ, ಈ ವಿಷಯದಲ್ಲಾದರೂ ಅವರ ಮಾತಿಗೆ ಬದ್ಧರಾಗುವುದ

ನಾಯಿಬಾಲ

ದೇವೇಗೌಡರು ಇನ್ನು ಮುಂದೆ ಕಣ್ಣೀರು ಹಾಕುವು ದಿಲ್ಲವಂತೆ. ಖಡ್ಗ ಹಿಡಿದು ಬರುತ್ತಾರಂತೆ. ತಮ್ಮ ನಿಜವಾದ ಮಗ ಕುಮಾರಸ್ವಾಮಿಯವರಿಗೂ 'ಮಗನೆ ನೀನು ಇನ್ನು ಕಣ್ಣೀರು ಹಾಕಬೇಡ, ಖಡ್ಗ ಹಿಡಿದು ಹೋರಾಡು' ಎಂದು ಹುರಿದುಂಬಿಸಿದ್ದಾರಂತೆ. ಇದು ಕಾಲ ಮಹಿಮೆ ಇರಬೇಕು. 'ಹೊಡಿ ಮಗ ಹೊಡಿ ಮಗ ಬಿಡಬೇಡ ಅದನ್ನ' ಅನ್ನುವ ಧಾಟಿಯ ಮಾತು ಅವರ ಬಾಯಲ್ಲೂ ಬಂದಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಖಡ್ಗ ಹಿಡಿದು ಹೋರಾಡಲು ಹೊರಟು ಕಣ್ಣೀರು ಸುರಿಸುವಂತೆ ಆದದ್ದು ವಿಧಿವಿಲಾಸವೇ ಸರಿ!

ಇರಲಿ. ಈ ಪಿತ-ಸುತರ ಕ(ಖ)ಡು ವೈರಿ ಸಿದ್ದರಾಮಯ್ಯ ಇದಕ್ಕೆ ಉತ್ತರವೋ ಎಂಬಂತೆ ಖಡ್ಗ ಹಿಡಿದು ನಿಂತರೆ? ಇಲ್ಲ! ತಮ್ಮ ಸುತ್ತ ನೆರೆದಿರುವ ಅಭಿಮಾನಿಗಳ ಹುರಿಸ ಹೊಗಳು ಭಟ್ಟರ ಬಾಯಿಂದ ಹೊರಬಿದ್ದ ವೀರಾಧಿವೀರ ಹೋರಾಟಗಾರ ಎಂಬುದನ್ನು ಕೇಳುತ್ತಾ.. ಕರ್ಣಾನಂದ ಅನುಭವಿಸುತ್ತಾ ಏನು ಮಾಡಿದರಪ್ಪ ಅಂದರೆ.... ತಾಯಿ ಚಾಮುಂಡೇಶ್ವರಿ ದೇವಿಗೆ ಬೆಳ್ಳಿ ಖಡ್ಗವನ್ನು ಅರ್ಪಿಸಿ ಖಡ್ಗ-ಖಡ್ಗ ಮಿಲಾಯಿಸುವ ತಾಪತ್ರಯವನ್ನು ಆ ತಾಯಿಯ ಹೆಗಲಿಗೇರಿಸಿದರು!


ಇತ್ತ ಜನತೆಯನ್ನು ಆವರಿಸಿರುವ ಎಲ್ಲ ರೀತಿಯ ಮೌಢ್ಯಗಳನ್ನು ತಮ್ಮ ವೊನಚಾದ ಭಾಷೆಯಲ್ಲಿ ಹೀಯಾಳಿಸುತ್ತಿದ್ದ ಮಾಜಿ ಸಚಿವ ಎಚ್. ವಿಶ್ವನಾಥ್ ಎಸಗಿದ ಘನ ಕಾರ್ಯವೆಂದರೆ ಚಾಮುಂಡೇಶ್ವರಿ ತಾಯಿಯ ಸನ್ನಿಧಿಗೆ ಹೋಗಲು ಇರುವ ಒಂದು ಸಾವಿರ ಮೆಟ್ಟಿಲು ಗಳಿಗೆ ಒಂದು ಸಾವಿರ ತೆಂಗಿನಕಾಯಿ ಒಡೆದು ಕೃತಾರ್ಥ ರಾದದ್ದು! ಈ. ರೀತಿ ಸಂಪನ್ಮೂಲಗಳನ್ನು ಪೋಲು ಮಾಡುವುದು ಅನೈತಿಕ ಎಂದು ಕೆಲವರು ಗೊಣಗಲಾಗಿ ಚುನಾವಣೆಯಲ್ಲಿ ಗೆಲ್ಲಿಸಿದ ತಾಯಿಗೆ ತಮ್ಮ ಭಕ್ತಿಯನ್ನು ತೋರಿಸಿದರೆ ತಪ್ಪಿಲ್ಲ ಎಂಬ ಸಮಜಾಯಿಷಿಯನ್ನು ಭಕ್ತಗಣ ನೀಡಿತಂತೆ! ಈ ಭಕ್ತಗಣ ಈ ಪರಿಯಾಗಿ ಈಡುಗಾಯಿ ಸೇವೆ ಸಲ್ಲಿಸುತ್ತಿರುವಾಗ ಓರ್ವ ಭಕ್ತೆಯ ಮೇಲೆ ಸಾಕ್ಷಾತ್ ತಾಯಿ ಚಾಮುಂಡೇಶ್ವರಿಯೇ ಮೈದುಂಬಿದಳಂತೆ! ಹೀಗೆ ಮೈದುಂಬಿಕೊಂಡ ತಾಯಿ ಯಾವ ಭಾಷೆಯಲ್ಲಿ ಅದೇನು ಬಿತ್ತರಿಸಿದಳೋ, ಯಾವ ಭಕ್ತ ಆಕೆಯನ್ನು ಯಾವ ರೀತಿ, ಎಲ್ಲಿ ತೃಪ್ತಿಪಡಿಸಿದನೋ ವಿವರ ತಿಳಿದುಬಂದಿಲ್ಲ!

ದಕ್ಷಿಣ ಕರ್ನಾಟಕದಲ್ಲಿ ಈ ಪರಿ ಪ್ರಹಸನಗಳು ಜರುಗುತ್ತಲಿದ್ದು ಜನರ ಚರ್ಚೆಗೆ ವಿಷಯವನ್ನು ಧಾರಾಳವಾಗಿ ಒದಗಿಸುತ್ತಿರುವಾಗ ಅತ್ತ ಉತ್ತರ ಕರ್ನಾಟಕದಲ್ಲಿ ಗೃಹಮಂತ್ರಿ ಎಂ.ಪಿ. ಪ್ರಕಾಶ್ ಮತ್ತೊಂದು ರೀತಿಯಲ್ಲಿ ಚರ್ಚಾವಸ್ತುವನ್ನು ಒದಗಿಸುತ್ತಿರುವುದು ಸಮಾಧಾನದ ಸಂಗತಿ! ಸದಾ ದಾರ್ಶನಿಕರ ಮಾತನ್ನು ಹೇಳುತ್ತಾ ಜನರ ಚಪ್ಪಾಳೆಯ ಸದ್ದಿಗೆ ಮಾರುಹೋಗುತ್ತಿದ್ದ ಶ್ರೀಯುತರಿಗೆ ಗದಗ ಜಿಲ್ಲೆಯ ಸಿಂಗಟಲೂರು ಏತನೀರಾವರಿ ಯೋಜನೆಅಡಿ ಭೂಮಿ ಕಳೆದುಕೊಳ್ಳಲಿರುವ ರೈತರು ಹೆಚ್ಚುವರಿ ಪರಿಹಾರ ಕೋರಿ ಸತ್ಯಾಗ್ರಹ ನಡೆಸುತ್ತಿದ್ದು ಅವರು ಕೇಳಿದ ಪ್ರಶ್ನೆಗಳು ಮರ್ಮಾಘಾತದಂತೆ ಗೋಚರಿಸಿದವಂತೆ. ಚುನಾವಣೆಯಲ್ಲಿ ಒಮ್ಮೆಯೂ ಸೋಲಿಸದೆ ಗೆಲ್ಲಿಸಿದರೆ ಮಾತ್ರ ಹೆಚ್ಚುವರಿ ಪರಿಹಾರ ದೊರಕಿಸುವುದಾಗಿಯೂ ಈಗಾಗಲೇ ಎರಡು-ಮೂರು ಸಲ ತಮ್ಮನ್ನು ಮನೆಯಲ್ಲೇ ಕೂರಿಸಿದ ಅಪರಾಧಕ್ಕಾಗಿ ಅದನ್ನು ನೀಡಲು ಸಾಧ್ಯವಿಲ್ಲ ಎಂಬ ಮಾತುಗಳನ್ನು ಆಡಿ ಹೊಸ ಚುನಾವಣಾ ನೀತಿಯನ್ನು ಬೋಧಿಸಿದರಂತೆ!

ಹೇಳಿಕೆ ಮಾತ ಕೇಳಿ ಹೆಂಡಿರ ಬಿಟ್ಟನಂತೆ

ಅಂದರೆ ಅಧಿಕಾರದ ಮುಂಚೂಣಿಯಲ್ಲಿರುವವರೆಲ್ಲ ಪ್ರಕಾಶರ ಜಾಯಮಾನದವರೇ ಆದುದರಿಂದ ರೈತರ ಯಾವ ಬೇಡಿಕೆಗಳೂ ಈಡೇರುವುದಿಲ್ಲ ಎಂಬುದಾಗಿ ಪರೋಕ್ಷವಾಗಿ ಈ ರಾಜ್ಯದ ಜನತೆ ತಿಳಿಯಬೇಕಾಗಿದೆ! ಅಷ್ಟಕ್ಕೇ ಅವರು ನಿಲ್ಲಿಸಿಲ್ಲ, 'ಕೇಳಿದ್ದೆಲ್ಲ ಕೊಡಲು ನಾನೇನು ಕೃಷ್ಣದೇವರಾಯನೆ, ನನ್ನನ್ನು ಕೃಷ್ಣದೇವರಾಯ ನನ್ನಾಗಿ ಮಾಡಿ ಆನಂತರ ಕೇಳಿ' ಎಂದೂ ಹೇಳಿದ್ದಾರೆ. (ಕುಮಾರಸ್ವಾಮಿಯವರ ಕೇಳಿಸಿ ಕೊಂಡಿರಾ? ನೀವು ಮುಖ್ಯಮಂತ್ರಿಯಾಗಿ ಸದಾಕಾಲ ಮುಂದುವರಿಯಬೇಕು ಅಂತ ಅವರಿವರ ಮನೆಗೆ ಹೋಗಿ ಮಲಗಿದರೆ ಇವರು ಅದಾಗಲು ಜನರ ಎದುರು ರೋಪು ಹಾಕ್ತಾರೆ!) ಓರ್ವ ಸತ್ಯಾಗ್ರಹಿ ಮಹಿಳೆ ಮಾತನಾಡುತ್ತಾ ಅವರ ಕಡೆ ಬೆರಳು ತೋರಿಸಲಾಗಿ ಈ ಅತಿಮಾನುಷರು ಕೋಪೋದ್ರಿಕ್ತರಾಗಿ 'ಏನಮ್ಮಾ ನನ್ನ ಕಡೆಗೇ ಬೆರಳು ತೋರಿಸುತ್ತೀಯಾ? ನಾನ್ಯಾರು ಗೊತ್ತೆ? ಗೃಹಮಂತ್ರಿ' ಎಂದು ಗದರಿಸಿದರಂತೆ. ಅಂದರೇನಾಯಿತು? ಗೃಹಮಂತ್ರಿಯೊಡನೆ ಮಾತ ನಾಡುವಾಗ ಕೈಕಟ್ಟಿ, ತಲೆತಗ್ಗಿಸಿ ಮಾತನಾಡ ಬೇಕು! ಇದು ನಮ್ಮ ಪ್ರಜಾಪ್ರಭುತ್ವ. ಬಾಲವೇ ನಾಯಿಯನ್ನು ಆಡಿಸುವ ಪ್ರಜಾಪ್ರಭುತ್ವ!

ಎಂ.ಪಿ. ಪ್ರಕಾಶ್ ಅವರಿಗೆ ಒಂದು ಸಲಹೆ: ಅಮಾಯಕ ಹಳ್ಳಿಯವರಿಗೆ ತಮ್ಮ ಮುಖಾರವಿಂದವನ್ನು ನೋಡಿದ ತಕ್ಷಣ ತಾವು ಈ ರಾಜ್ಯದ ಗೃಹಮಂತ್ರಿಗಳು ಎಂದು ತಿಳಿಯುವ ಸಾಧ್ಯತೆ ಕಡಿಮೆ. ಹಿಂದಿನ ಕಾಲದ ರಾಜರ ತರಹ ವೇಷ ಧರಿಸಿಯೋ ಇಲ್ಲ ವಂಗಮಾಗಧರನ್ನು ಬಳಸಿ ಕೊಂಡೋ ಗೃಹಮಂತ್ರಿಗಳ ಪಾದ ಇತ್ತ ಬಿಜಂಗೈಯುತ್ತಿದೆ ಎಂಬುದನ್ನು ಸಾರಿದರೆ ಜನರಿಗೆ ತಮ್ಮ ಅಪೂರ್ವ ಆಗಮನದ ಸೂಚನೆ ದೊರೆಯಬಹುದು!



ಅಣಕ

ಹೇಳಿಕೆ ಮಾತು

ಹೇಳಿಕೆ ಮಾತು ಕೇಳಿ ಯಾರೋ ಹೆಂಡತಿ ಬಿಟ್ಟಂತೆ. ಹಂಗಾಗಿದೆ ನಮ್ಮ ಮುಖ್ಯಮಂತ್ರಿಗಳ ಪಾಡು. ಪಾಪ ಜನರ ದುಃಖ ದುಮ್ಮಾನ ಅರೀಬೇಕು ಅಂತಾವ ಹಳ್ಳಿಗಳಲ್ಲಿ ವಾಸ್ತವ್ಯ ಹೂಡಿದರು. ತಗಳಪ್ಪ ಶುರುವಾಯಿತು. ಲಿಂಗಾಯತರ ಮನೆಯಲ್ಲೇ ಮಲಗಬೇಕಾ? ಅಡಿಗೆ ಮಾಡಲು ಭಟ್ಟರನ್ನು ಪಟ್ಟಣದಿಂದಲೇ ಕರೆಸಬೇಕಾ ಅಂತ ಜರೆದರು. ಬೇರೆಯವರ ಮನೆಯಲ್ಲೂ ಮಲಗ್ತೀನಿ ಅಂತ ಒಕ್ಕಲಿಗರ ಮನೆ ಹಿಡುದ್ರು. ಅವರ ಮನೆಯಲ್ಲೇ ಮಾಡಿದ್ದ ಹಿಟ್ಟು, ಸೊಪ್ಪಿನ ಸಾರು ಉಂಡರು. ಅಷ್ಟಕ್ಕಾದರೂ ಹಾಳಾದ ಜನ ಸುಮ್ಮನಾದರಾ. ಹಂಗಿದ್ರೆ ಹೋಗಿ ದಲಿತರ ಮನೇಲಿ ಮಲಗ್ಲಿ ಅಂದ್ರು. ಥೂ ಇವರ ಮನೆ ಹಾಳಾಗ ಅಂತ ಮನಸ್ನಲೇ ಬೈಕೊಂಡು 'ದಲಿತರ ಮನೇಲೂ ಮಲಗ್ತೀನಿ' ಅಂದ್ರು ನಂ ಮುಖ್ಯಮಂತ್ರಿಗಳು. ಹಂಗೇನೆ ಮಲಗಿದ್ರು. ಅಲ್ಲಿ ವಿರೋಧ ಪಕ್ಷದವರು 'ಇಂತಹವರ ಮನೇಲಿ ಮಲಗಲಿ' ಅಂತ ಶರತ್ತು ಹಾಕೋರು, ಈ ವಯ್ಯ ಅಲ್ಲಿ ಗೋಗಿ ಮಲಗೋದು ಇದೇ ನಡೆದದ್ದಲ್ಲ... ನಮ್ಮಲ್ಲಿ ನೂರೆಂಟು ಜಾತಿ ಉಪಜಾತಿ ಗಳಿವೆ. ಅವನ್ನೆಲ್ಲ ಲಿಸ್ಟ್ ಮಾಡ್ಕೊಂಡು ಯಾವ್ಯಾವ ಜಾತಿಯೋರ ಮನೇಲಿ ಮಲಗಿದ್ನೆ ಅಂತ ಟಿಕ್‌ಮಾರ್ಕ್ ಹಾಕ್ತಾ ಕುಂತ್ಕಂಡ್ರೆ.... ಇವರು ಬೆಂಗಳೂರಲಿ ಮಲಗಿ ಕೆಲಸ ನಿಭಾಯಿಸೋದು ಯಾವಾಗ ಅಂತಾವ!

ಸ್ವಚ್ಛಾನೋ? ಲುಚ್ಚಾನೋ?

'ತಗಳಿ ಸಾ ಇವ್ನ.... ಹೊಡೀರಿ ಸಾ' ಅಂದ ಕ್ಯಾತೇಗೌಡ ಉರುಫ್ ಕ್ಯಾತ ಬಹಳ ಜಿಗುಪ್ಸೆಯಲ್ಲಿದ್ದ. ಸಮಾಧಾನ ಮಾಡಿ ಕುಳ್ಳಿರಿಸಿಕೊಂಡೆ. ವಿಷಯ ಏನು ಅಂತ ಹುಶಾರಾಗಿ ತಿಳಿದುಕೊಂಡೆ. ನಡೆದದ್ದು ಹೀಗಂತೆ: ನಮ್ಮ ಜಿಲ್ಲೆಯ ಎಲ್ಲಾ ಪಕ್ಷದ ಹಾಲಿ ಹಾಗೂ ಮಾಜಿ ಒಕ್ಕಲಿಗ ಶಾಸಕರು ಪತ್ರಿಕಾಗೋಷ್ಠಿ ನಡೆಸಿದ್ದರಂತೆ. ಅಂತಹ ತುರ್ತು ಏನಪ್ಪಾ ಅಂದರೆ ಲೋಕಸೇವಾ ಆಯೋಗದ ಅಧ್ಯಕ್ಷ ಕೃಷ್ಣ ಮೇಲೆ ದೈನಿಕ ಧಾರಾವಾಹಿ ಯಂತೆ ಪತ್ರಿಕೆಗಳಲ್ಲಿ ಆರೋಪಗಳ ಸುರಿಮಳೆ ಆಗಿದ್ದು ಎಲ್ಲರಿಗೂ ತಿಳಿದಿರುವ ವಿಷಯ. ಆ ಆರೋಪಗಳಲ್ಲಿ ಹುರುಳಿಲ್ಲ. ವರದಿಗಳಲ್ಲಿರುವಂತೆ ಅವರು ಕಾಗೆ ಬಂಗಾರ ಅಲ್ಲ ಅಪ್ಪಟ ಬಂಗಾರ. ಒಕ್ಕಲಿಗರಿಗೆ ಪ್ರತಿಭೆ ಆಧಾರದ ಮೇಲೆ ಹೆಚ್ಚು ಕೆಲಸ ಸಿಕ್ಕಿದೆ. ಇತರೆ ಜಾತಿಯವರಿಗೆ ಅನ್ಯಾಯ ಮಾಡಿಲ್ಲ ಅಂತ ಸಾರಲು ಇದನ್ನು ನಡೆಸಿದ್ದರಂತೆ.

ಇದರಲ್ಲಿ ತಪ್ಪೇನೂ ಕಾಣಿಸಲಿಲ್ಲ, ಅದನ್ನೇ ಅವ... ಹೇಳಿದೆ. ಇದನ್ನು ಅವನು ಒಪ್ಪುವ ಸ್ಥಿತಿಯಲ್ಲಿರಲಿ... ಪ್ರತಿಭಾವಂತ ಬಡ ಒಕ್ಕಲಿಗರಿಗೆ ಅವರು ಸಹಾ... ಮಾಡಿಲ್ಲ, ಕೇವಲ ಶ್ರೀಮಂತರ, ರಾಜಕಾರಣಿಗ... ಪ್ರಭಾವಶಾಲಿಗಳ ಸಂಬಂಧಿಕರ ಆಯ್ಕೆ ನಡೆದಿದೆ ಎನ್ನುವು... ಅವನ ವಾದ- ಮೀಸಲಾತಿಯನ್ನೇ ಬದಲಾಯಿಸಿರುವು... ಸಂವಿಧಾನಕ್ಕೆ ಎಸಗಿದ ಅಪಚಾರ ಎಂಬುದು ಅ... ವಿಚಾರ. ಇದರಿಂದಾಗಿ ಇತರೆ ಜಾತಿಯ ಪ್ರತಿಭಾವಂತ... ಅನ್ಯಾಯವಾಗಿದೆ ಎಂಬುದು ಅವನ ಅಳಲು.

'ಹೋಗ್ಲಿ ಬುಡೊ ನಿಮ್ಮೋರ್ಗೆ ಅಲ್ವ ಸಿಕ್ಕಿರೋದ... ಅಂದೆ.

'ಸಾ ನಂಗೆ ಜಾತಿ ಅದೆ, ಇಲ್ಲ ಅಂತ ಅಲ್ಲ, ... ಜಾತಿಯೋರಿಗೆ ಸಹಾಯಾನೂ ಮಾಡ್ತಿನಿ, ಆದ್ರೆ ಇನ್ನೊ... ಹೊಟ್ಟೆಮೇಲೆ ಹೊಡ್ದಲ್ಲ ಸಾ'

ಕ್ಯಾತನ ನೋವಿಗೂ ಕಾರಣ ಇತ್ತು, ಅವನ ಊ... ಬೇರೆ ಜಾತಿಯ ಪ್ರತಿಭಾವಂತ ಹುಡುಗನಿಗೆ ಕೆ... ಕೊಡಿಸಲು ಪ್ರಯತ್ನಿಸಿದ್ದನಂತೆ. ಮೀಸಲಾತಿ ವಿರುಪ... ಆಗಿರದಿದ್ದರೆ ಅವನಿಗೆ ಸಿಗುತ್ತಿತ್ತಂತೆ. ಹೀಗೆ ವಂಚಿತನಾ... ಅಭ್ಯರ್ಥಿ ಯಾವತ್ತೂ ಒಕ್ಕಲಿಗರ ನಂಬುವುದಿ... ಹಿಡಿಮುಷ್ಟಿ ಮೇಲ್ವರ್ಗದ ಒಕ್ಕಲಿಗರ ಏಳ್ಗೆಗಾಗಿ ಒಂ... ಜನಾಂಗಕ್ಕೇ ಅಪಕಾರ ಮಾಡಲಾಗಿದೆ ಎಂಬುದು ಅ... ವಿಚಾರ ಆಗಿತ್ತು.

'ಸಾ ನೀವೇ ಹೇಳಿ, ಓಟು ಕೇಳ್ವಾಗ ಆ ಜಾತಿಯೋ... ಬೇಕು, ಈ ಜಾತಿಯೋನು ಬೇಕು, ಎಲ್ಲಾ ಜಾತಿಯೋ... ಬೇಕು ಅಂತ ಕಾಲಿಡೀತಿದ್ರು. ಅವ್ರು ಓಟಾಕ್ದಿದ್ರೆ ಇವ... ಗೆಲ್ತಿದ್ರ ಸಾ. ಈಗ ಯಾವ್ರೋನು ಬ್ಯಾಡ ಅಂತಾವ ... ಬಿಸಾಕಿದ್ರು'

ಕುದಿಯುತ್ತಿದ್ದ ಕ್ಯಾತ. ಪತ್ರಿಕೆಗಳಲ್ಲಿ ಬಂದಿರುವ... ಸುಳ್ಳಾಗಿದ್ರೆ ಈ ಶಾಸಕರು ತನಿಖೆ ಮಾಡಿಸಲಿ, ತಪ್ಪಿತಸ್ಥ... ಶಿಕ್ಷೆ ಕೊಡಿಸಲಿ, ಅದನ್ನು ಬಿಟ್ಟು ಆರೋಪಗಳಿಗೆ ಉ... ಹೇಳದೆ ಎಲ್ಲ ಸರಿಯಾಗಿದೆ ಅಂತ ತಿಪ್ಪೆ ಸಾರಿಸುವ... ಹೇಯ ಕಾರ್ಯ ಎಂಬುದು ಅವನ ನಿಲುವು.

'ಅಲ್ಲ ಕ್ಯಾತ ನಾನು ಹೇಳೋದ್ನೂ ವಸಿ ಕೇ... ಅವರದ್ದು ಸ್ವಚ್ಛ ಕೈ ಅಂತಾರಲ್ಲಪ್ಪ'

'ಏನ್ಸಾ ಕೈ ಸ್ವಚ್ಛ ಅಂದ್ರಾ.... ಆ ಮಾತು ಬ... ಬಾಯಿ? ಅವನ ಬಾಯಿಂದ ಬರೋ ಮಾತು ಕೇಳಿದೀ... ಎಲ್ಲ ಸೊಂಟದ ಕೆಳಗಿನ ಮಾತೇಯ. ಅಧಿಕಾರದ ಧಿಮಾ... ಎಷ್ಟು ಜನಕ್ಕೆ ನೋಯಿಸವ್ನೆ ಗೊತ್ತೆ ಸಾ. ಅದೇನೋ... ಸ್ವಚ್ಛಾ ಅಂದ್ರಲ್ಲಾ... ಯಾಕೆ ಸ್ವಚ್ಛ ಗೊತ್ತೇಸಾ?'

'ಸ್ವಚ್ಛ ಅಂದ್ರೆ ಸ್ವಚ್ಛ ಅಷ್ಟೆ. ಯಾಕೆ ಅಂದ್ರೆ ಏನೇ...

'ತಿಳ್ಕಳಿ ಸಾ ನೀವೂವೆ. ಇದೊಂದು ತರ ಮಾಫಿ... ಗ್ಯಾಂಗ್ ಇದ್ದಂಗೆ. ಬ್ಯಾರೆಯೋರ್ನ ಹೆದರ್ಸಿ ತನ್ನ ಹಿಡಿತ... ಇಟ್ಕಳಾಕೆ'

ಮುಂದೆ ಇನ್ನೂ ಏನೇನು ಹೇಳುತ್ತಿದ್ದನೋ ಏನ...

'ದೊಡ್ಡೋರ ಸಮಾಚಾರ ನಮಗ್ಯಾಕೆ ಬುಡಪ್ಪ' ... ಹೇಳಿ ಸಾಗಾಕಿದೆ.

-ಎಚ್.ಎಲ್. ಕೇಶವಮೂ...


ಅರ್ಥಪೂರ್ಣ 'ಸಂಹಾರ'ದ ಚಿತ್ರಣ

"ಗೌಡಾಸುರ ಸಂಹಾರ" ಅನ್ನುವ ತಲೆಬರಹದಡಿ ದೇವೇಗೌಡ, ಕುಮಾರಸ್ವಾಮಿ ಹಾಗು ಅವರ ಓಡ್ಡೋ ಅಗದವರ ಅಳಿದುಳಿದ ಮಾನ ಮರ್ಯಾದೆಗಳನ್ನು ಚಾಮುಂಡೇಶ್ವರಿ ಕೈಕಾಲುಗಳ ಮುಖಾಂತರ ಸಂಹಾರ ಮಾಡುತ್ತಿರುವ ಚಿತ್ರವನ್ನು ಕಲ್ಪನೆಯಿಂದ ಚಿತ್ರರೂಪಕ್ಕೆ ಭಟ್ಟಿ ಇಳಿಸಿದ ನಿಮ್ಮ ಪತ್ರಿಕೆಯ ಸಿಬ್ಬಂದಿಗೆ ಹ್ಯಾಟ್ಸ್ ಆಫ್. ಆ ಚಿತ್ರ ಎಷ್ಟು ಚೆನ್ನಾಗಿ, ಅರ್ಥಪೂರ್ಣವಾಗಿ ಮೂಡಿಬಂದಿದೆಯೆಂದರೆ ವರ್ಣಿಸಲು ಅಸಾಧ್ಯ. ಅಷ್ಟು ಸೂಪರ್ ಆಗಿ ಹೊರಬಂದಿದೆ ಪತ್ರಿಕೆ.

'ಕಂಡಹಾಗೆ'ನಲ್ಲಿ ನೀವು ಕೇಳಿದ 'ಈ ಪ್ರಜಾಪ್ರಭುತ್ವ ದಲ್ಲಿ ದಲಿತರಿಗೆ ನ್ಯಾಯವಿದೆಯೇ?' ಆತ್ಮಸಾಕ್ಷಿಯುಳ್ಳ ಪ್ರತಿಯೊಬ್ಬ 'ಹಿಂದೂ'ಗಳು ಕೇಳಿಕೊಳ್ಳಬೇಕಾದ ಪ್ರಶ್ನೆಯಿದು. ಆದರೆ ಸಾಕ್ಷಿಪ್ರಜ್ಞೆ ಭೂತಕಾಲದಲ್ಲಿ ಇರಲಿಲ್ಲ, ವರ್ತಮಾನದಲ್ಲೂ ಇಲ್ಲ ಹಾಗು ಭವಿಷ್ಯದಲ್ಲೂ ಇರುವ ಸಾಧ್ಯತೆಗಳಿಲ್ಲದಿರುವುದು ಈ ದೇಶದ ಅತಿದೊಡ್ಡ ಸಾಮಾಜಿಕ ದುರಂತವಾಗಿದೆ. ಮಹಾರಾಷ್ಟ್ರದ ಖೈರ್ಲಾಂಜಿ ಯಲ್ಲಿ ದಲಿತರ ಮೇಲೆ ನಡೆದ ಅಮಾನುಷ ಘಟನೆ ನೆನೆದರೆ, ಅದು ಯಾವುದೇ ಭಯೋತ್ಪಾದಕ ಕೃತ್ಯಕ್ಕಿಂತ ಕಡಿಮೆಯಿಲ್ಲದ ಕಾರ್ಯ ಎನಿಸುತ್ತದೆ. ಈ ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಸುಧಾರಣೆಯಾದ ಹೊರತು ನೀವು ಅನುಮಾನಿಸಿರುವ ಹಾಗೆ ಖೈರ್ಲಾಂಜಿ ಘಟನೆಯಲ್ಲಿ ನೊಂದವರಿಗೆ ನ್ಯಾಯ ದೊರಕುವುದು ಪರೀಕ್ಷೆಯಾಗಿದೆ.

-ಬಿ.ಮೂರ್ತಿ, ಗಂಗಾವತಿ

'ಲಂಕೇಶ್' ವಾರ ಪತ್ರಿಕೆಯ ಕಳೆದ ಸಂಚಿಕೆಯ ಮುಖಪುಟದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆ ಎಂಬ ರೌದ್ರ ಕಾಳಿಯ ನರ್ತನದಲ್ಲಿ 'ಗೌಡಾಸುರ ಸಂಹಾರ' ಆದ್ದದ್ದನ್ನು ಚೆನ್ನಾಗಿ ಬಿಂಬಿಸಲಾಗಿತ್ತು. ಅದರಲ್ಲೂ ಕಾಳಿಯ ಪಾದದಡಿ ಬಿದ್ದಿದ್ದ ದೇವೇಗೌಡ, ಮುಂಡವಿಲ್ಲದೆ ಕಾಳಿಯ ಕೈಗೆ ಸಿಕ್ಕಿಹಾಕಿಕೊಂಡಿದ್ದ ಕುಮಾರಸ್ವಾಮಿ, ರುಂಡಗಳ ಮಾಲೆಯಲ್ಲಿ ತೂಗಾಡುತ್ತಿದ್ದ ಜೆಡಿಎಸ್ ನಾಯಕರು..... ಪ್ರಸ್ತುತ ರಾಜ್ಯ ರಾಜಕೀಯಕ್ಕೆ ಹಿಡಿದ ಕನ್ನಡಿಯಂತಿತ್ತು.



ಈ ದೇವೇಗೌಡ ಯಾವ ಮಟ್ಟಕ್ಕಿಳಿದಿದ್ದಾರೆಂದರೆ, ಒಂದೆಡೆ ಕಪಟ ಪುರೋಹಿತರಿಂದ ಹೋಮ, ಹವನ, ಯಜ್ಞ ಇತ್ಯಾದಿಗಳೆಂದು ಲೋಡುಗಟ್ಟಲೆ ತುಪ್ಪ ಸುರಿಸುವುದು, ಇನ್ನೊಂದೆಡೆ ಕಡೆ ಜೈನ್ ಎಂಬ ಕಪಟ ಜ್ಯೋತಿಷಿಯಿಂದ ತಾನು ಗೆಲ್ಲುತ್ತೇನೆ ಎಂದು ಭವಿಷ್ಯ ನುಡಿಸುವುದು. ಇವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ಮನುಷ್ಯನ ಗುಣಲಕ್ಷಣಗಳೇ? ಮುಂದಿನ ಚುನಾವಣೆಯಲ್ಲಿ ಸೋತ ನಂತರ ಇದೆಲ್ಲದರ ಬಗ್ಗೆ ದೇವೇಗೌಡರು ಕೂತು ಯೋಚಿಸುವಂತಾಗಲಿ.

-.ಮುತ್ತಣ್ಣ ಪೂಜಾರ್, ಕದಲಬಾಳು

37ನೇ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಸ್ವರ್ಣ ಮಯೂರ ಪಡೆದ 'ದಿ ಓಲ್ಡ್ ಬಾರ್ಬರ್' ಚಿತ್ರ ಆ ಪ್ರಶಸ್ತಿಗೆ ನಿಜಕ್ಕೂ ಅರ್ಹ ಅನ್ನಿಸಿತು ರಾಸೋಮನಾಥ್ ರವರ ಲೇಖನವನ್ನು ಓದಿದನಂತರ. ಕಾಲಕ್ಕೆ ತಕ್ಕ ಹಾಗೆ ಪರಿವರ್ತನೆ ಎಲ್ಲ ರಂಗಕ್ಕೂ ಅಗತ್ಯ. ಹಾಗೆಯೇ ಮನುಷ್ಯನಾದವನಿಗೆ ದುಡಿಮೆ ಎಲ್ಲ ಕಾಲಕ್ಕೂ ಅಭಿಮಾನ ಮತ್ತು ಸ್ವಾಭಿಮಾನ ತಂದು ಕೊಡುವುದು. ಆದ್ದರಿಂದ ಪ್ರಾಮಾಣಿಕ ದುಡಿಮೆಗೆ ಎಂದೂ ಮಾನ ಅಡ್ಡ ಬಾರದು. ಈ ನೈಜ ಸತ್ಯವನ್ನು ಆ ಚಿತ್ರದ ನಿರ್ದೇಶಕ ಹುಸಿ ಚಾವ್ನ ಅರ್ಥಪೂರ್ಣವಾಗಿ ಹಿಡಿದಿಟ್ಟಿದ್ದಾರೆ ಅನ್ನಿಸಿತು.

ಹಲವಾರು ಅರ್ಥವಿಲ್ಲದ ಚಿತ್ರಗಳನ್ನು ತೆಗೆಯುವ ನಮ್ಮ ಕನ್ನಡ ಚಿತ್ರರಂಗದವರು ಇಂತಹ ಅರ್ಥಪೂರ್ಣ ಸಿನಿಮಾ ಮಾಡುವುದೆಂದು?

- ಕುಬೇರಪ್ಪ ಎಂ. ವಿಭೂತಿ, ಹರಿಹರ


ಡಿಸೆಂಬರ್ 6 ರ ತಮ್ಮ ಪತ್ರಿಕೆಯಲ್ಲಿ 'ಕಿಂಬಾವುಟ ನಾಯಕರ ದೆಹಲಿ ಚಲೋ ಪೈಸಾ ಲಾವೊ' ಎಂಬ ಲೇಖನ ಪ್ರಕಟಿಸಿದ್ದೀರಿ. ಅದರಲ್ಲಿ ಎಐಟಿಯುಸಿ ಸಂಘಟನೆ ಹಾಗೂ ನಾಂಯಕರ ವಿರುದ್ಧ ಅವಮಾನಕಾರಿ ರೀತಿಂಯಲ್ಲಿ ಬರೆದಿದ್ದೀರಿ. ಕಾರ್ಮಿಕರ ದೆಹಲಿ ಚಲೋ ಕಾರ್ಯಕ್ರಮ ದೇಶದಾದ್ಯಂತ ನಡೆದಿದೆ. ನವೆಂಬರ್ 23 ರಂದು ರಾಷ್ಟ್ರ ಮಟ್ಟದಲ್ಲಿ ನಡೆದ ಬೃಹತ್ ರ್‍ಯಾಲಿಯನ್ನು ತಾವೂ ಗಮನಿಸಿರಬಹುದು. ಸಾಮಾನ್ಯವಾಗಿ ಜಾಥಾ ಹೋಗುವ ಸಂದರ್ಭದಲ್ಲಿ ಅಲ್ಲಿನ ಖರ್ಚುವೆಚ್ಚಗಳಿಗೆ ಹಣ ಸಂಗ್ರಹಿಸಲಾಗುತ್ತದೆ.

ಅದು ಯಾವುದೇ ಒಬ್ಬ ವ್ಯಕ್ತಿಯ ತೀರ್ಮಾನವಾಗದೇ ಸಮಿತಿಯ ತೀರ್ಮಾನವಾಗಿರುತ್ತದೆ. ಈ ರೀತಿ ಸಂಗ್ರಹವಾದ ಹಣಕ್ಕೆ ಲೆಕ್ಕಪತ್ರವಿರುತ್ತದೆ. ಈ ತೀರ್ಮಾ... ಕಾರ್ಮಿಕ ಸಂಘಟನೆಯ ರಾಜ್ಯ ಸಮಿತಿಯಲ್ಲೇ ಆಗುತ್ತ... ಹೀಗಾಗಿ ತಮ್ಮ ಪತ್ರಿಕೆಯಲ್ಲಿ ಬರೆದಂತೆ ಯಾವುದ... ರೀತಿಯ ಅವ್ಯವಹಾರ ನಡೆದಿಲ್ಲವೆಂದು ಈ ಮೂಲ... ಸ್ಪಷ್ಟಪಡಿಸುತ್ತಿರುವೆ. ಇನ್ನು ರಾಮಚಂದ್ರಪ್ಪ, ಶಿವ... ನಂಥವರು ಸಿದ್ಧನಗೌಡ ಪಾಟೀಲ ಹಾಗೂ ಅನ... ಸುಬ್ಬರಾವ್ ವಿರುದ್ಧವೇ ತಯಾರಾಗಿ ನಿಂತಿದ್ದಾರೆ ಎಂದ... ಬರೆದಿದ್ದೀರಿ. ನಮ್ಮ ಪಕ್ಷದಲ್ಲಿ ಅಂಥ ಯಾವುದ... ಬೆಳವಣಿಗೆ ಇಲ್ಲ. ಇಂಥ ಪ್ರಕಟಣೆಯಿಂದ ಪಕ್ಷದ ಕಾಯ... ಕರ್ತರಲ್ಲಿ ಹಾಗೂ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ... ಮೂಡುತ್ತದೆ. ಕಾರಣ ಅಂಥ ತಪ್ಪು ಗ್ರಹಿಕೆಗೆ ತಮ... ಪತ್ರಿಕೆ ಕಾರಣವಾಗಬಾರದೆಂಬುದು ನಮ್ಮ ಅಭಿಪ್ರಾಯ... ಕಾರಣ ತಪ್ಪು ಕಲ್ಪನೆಯಿಂದಾದ ಆ ವರದಿಗೆ ... ಸ್ಪಷ್ಟೀಕರಣವನ್ನು ಪ್ರಕಟಿಸಬೇಕೆಂದು ಕೋರುವೆ.

- ಡಾ. ಸಿದ್ಧನಗೌಡ ಪಾಟೀ...
ಕಾರ್ಯದರ್ಶಿ, ಭಾರತ ಕಮ್ಯೂನಿಸ್ಟ್ ಪ...
ಕರ್ನಾಟಕ ರಾಜ್ಯ ಮಂಡ...

ಹೊಗ ತೆಗ


ಕಳೆದವಾರದ 'ಮುರುಘಾನ ಹ್ಯಾ... ಬರ್ತ್‌ಡೇ' ವರದಿಯಲ್ಲಿ ಮುರುಘಾ... ಹೆಸರಲ್ಲಿದ್ದ ಫೋಟೋ ಮುರುಘಾನದ... ಸ್ವಲ್ಪ ಪ್ರಗತಿಪರರಾಗಿರುವ ಮಹಾಂತಸ್ವಾಮಿ... ಗಳ ಫೋಟೋಗೆ ಕಣ್ತಪ್ಪಿನಿಂದ ಮುರುಘಾನ ಹೆಸರ... ಹಾಕಲಾಯ್ತು. ಮುರುಘಾನ ಬರ್ತ್‌ಡೇಯಲ್ಲಿ ಪಾಲ್ಗೊಂ... ದ್ದಕ್ಕೆ ಮಹಾಂತಸ್ವಾಮಿಗೂ ಬೇಸರವಾಗಿದೆಯಂತೆ. ಇಲ್ಲಿದ್ದಾನೆ ನೋಡಿ ನಿಜವಾದ ಮುರುಘಾ! ಕಣ್ತಪ್ಪಿನಿಂದಾದ ತಪ್ಪಿಗೆ ನಮ್ಮ ವಿಷಾದವಿದೆ.



-ಸಂ.

ಆವತ್ತು ಸ್ವಲ್ಪ ಹೆಚ್ಚುಕಮ್ಮಿಯಾಗಿದ್ದರೂ ಅಪ್ಪಾಜಿ, ಅಮ್ಮ, ಚಿಕ್ಕಪ್ಪ, ನಾನು, ಸೆಟ್‌ನಲ್ಲಿದ್ದ ಹುಡುಗರು ಎಲ್ಲರೂ ಬೆಂಕಿಗೆ ಆಹುತಿಯಾಗುತ್ತಿದ್ದೆವು. ಆದರೆ ದೇವರ ದಯೆಯಿಂದ ನಾವೆಲ್ಲರೂ ಸುರಕ್ಷಿತವಾಗಿ ಬದುಕುಳಿದೆವು.

ಬೆಂಕಿಯಿಂದ ಬದುಕಿಗೆ



ನಾನು ಸುತ್ತಲೂ ನೋಡುತ್ತೇನೆ..... ಎಲ್ಲೆಲ್ಲೂ ಬೆಂಕಿಯ ಜ್ವಾಲೆ. ಆ ಜ್ವಾಲೆಯ ಆ ಕಡೆ ಇದ್ದ ಕ್ಯಾಮೆರಾಮನ್ ಮತ್ತು ಲೈಟ್ ಬಾಯ್‌ಗಳು ಏನನ್ನೋ ಹೇಳುತ್ತಾ ಕೈಸನ್ನೆ ಮಾಡಿ ನನ್ನನ್ನು ಕರೆಯುತ್ತಿದ್ದದ್ದು ಕಾಣಿಸುತ್ತಿತ್ತು. ದೂರದಿಂದ "ಶಿವಣ್ಣ ಓಡಿ ಬಾ" ಎಂದು ಇನ್ಯಾರೋ ಬೊಬ್ಬೆ ಹಾಕುತ್ತಿದ್ದದ್ದು ಕೇಳಿಸುತ್ತಿತ್ತು.

ಇದೆಲ್ಲ ಕೆಲವೇ ಕೆಲವು ಕ್ಷಣಗಳಲ್ಲಿ ನಡೆದು ಹೋಯಿತು. ನಾನು ಬರಿ ಮೈಯಲ್ಲಿದ್ದೆ. ಹೆಗಲಮೇಲೆ ಪದ್ಮಾ ಕುಮಟಾ ಅವರನ್ನು ಹೊತ್ತುಕೊಂಡಿದ್ದೆ. ಆಕೆಯೂ ಆತಂಕಗೊಂಡಿದ್ದರು. "ನನ್ನ ಮೈ ಸುಡುತ್ತಿದೆ, ಬೇಗ ಹೋಗು ಶಿವಣ್ಣಾ" ಎಂದು ಚೀರುತ್ತಿದ್ದರು. ಆ ಸಂದರ್ಭದಲ್ಲಿ ಏನು ಮಾಡಬೇಕೆಂದೇ ನನಗೆ ತೋಚಲಿಲ್ಲ.

ಆ ಕ್ಷಣ ದೇವರೇ ನನಗೆ ಶಕ್ತಿಕೊಟ್ಟ. ಹೇಗಾದರೂ ಮಾಡಿ ಈ ಬೆಂಕಿಯ ಜ್ವಾಲೆಗಳಿಂದ ಪಾರಾಗಬೇಕು ಎಂದು ನಿರ್ಧರಿಸಿದೆ. ಧೈರ್ಯ ಮಾಡಿ ಬೆಂಕಿಯಿದ್ದಡೆಗೇ ಮುನ್ನುಗ್ಗಿದೆ. ನಾನು ಹೇಗೆ ಹೋದೆ, ಹೇಗೆ ಹೊರಗೆ ಬಂದೆ, ಎಲ್ಲಿ ಬಿದ್ದೆ ಎಂಬುದು ಯಾವುದೂ ನನಗೆ ಅಂದೂ ಗೊತ್ತಾಗಲಿಲ್ಲ, ಇಂದೂ ಗೊತ್ತಿಲ್ಲ. ಆದರೆ ಪದ್ಮಾ ಕುಮಟಾ ಅವರನ್ನು ಹೊತ್ತುಕೊಂಡು ಬೆಂಕಿಯಿಂದ ಹೊರ ಬಿದ್ದಾಕ್ಷಣ ಎಲ್ಲರೂ ಜೋರಾಗಿ ಚಪ್ಪಾಳೆ ತಟ್ಟಿದ್ದು ನನ್ನ ಕಿವಿಗೆ ಬಿತ್ತು. ಇನ್ನು ಕೆಲವರು ನನ್ನ ಬೆನ್ನುತಟ್ಟಿದರು. ಎಂಥ ವೈರುಧ್ಯ ನೋಡಿ! ನಾನು ಆ ಕ್ಷಣ ಬೆಂಕಿಯಿಂದ ಪಾರಾಗಬೇಕಿತ್ತು, ಜೊತೆಗೆ ಪದ್ಮಾ ಕುಮಟಾ ಅವರನ್ನೂ ಸುರಕ್ಷಿತವಾಗಿ ಹೊರತರುವ ಜವಾಬ್ದಾರಿ ನನ್ನ ಮೇಲಿತ್ತು. ನಾನು ಆತಂಕದಿಂದ ಆ ಕೆಲಸವನ್ನು ನಿರ್ವಹಿಸಿದ್ದರೆ ಸೆಟ್‌ನಲ್ಲಿದ್ದ ಹುಡುಗರೆಲ್ಲಾ ಇದೊಂದು ಅದ್ಭುತ ನಟನೆ ಎಂಬಂತೆ ಚಪ್ಪಾಳೆ ತಟ್ಟುತ್ತಿದ್ದರು. ಆಗ "ಕಲಾವಿದರ ಬದುಕೇ ಹೀಗೆ. ನಾವು ನೋವುಂಡರೂ ಪ್ರೇಕ್ಷಕರನ್ನು, ಜನರನ್ನು ರಂಜಿಸುತ್ತಿರಬೇಕು..." ಎಂದು ಅಪ್ಪಾಜಿ ಹೇಳಿದ್ದ ಮಾತು ನೆನಪಿಗೆ ಬಂತು.


ಆದರೆ ಆ ದುರ್ಘಟನೆಯಿಂದ ನನ್ನನ್ನು ಪಾರು ಮಾಡಿದ ನನ್ನ ಇಷ್ಟ ದೇವರಿಗೆ ಮನಸ್ಸಿನಲ್ಲೇ ಪ್ರಾರ್ಥನೆ ಸಲ್ಲಿಸಿದೆ. ಈ ಬೆಂಕಿಯ ಬಿಸಿಯಿಂದ ಚೇತರಿಸಿಕೊಳ್ಳುವ ಮುನ್ನವೇ 'ಶಿವಮೆಚ್ಚಿದ ಕಣ್ಣಪ್ಪ' ಸೆಟ್ಟಿನಲ್ಲಿ ಮತ್ತೊಂದು ಬೆಂಕಿಯ ದುರ್ಘಟನೆ ನಡೆಯಿತು.

ಈ ಎರಡನೆ ದುರ್ಘಟನೆ ನಡೆದದ್ದು ಬೆಂಗಳೂರಿನ ಹೃದಯಭಾಗದಲ್ಲಿರುವ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ. ಅವತ್ತು ದೊಡ್ಡ ಸೆಟ್ಟನ್ನು ಹಾಕಿದ್ದರು. ನಾನು ಒಂದೇ ಕಣ್ಣಿನಲ್ಲಿ ನಟಿಸುವ ದೃಶ್ಯ ಅದಾಗಿದ್ದರಿಂದ ನನ್ನ ಒಂದು ಕಣ್ಣನ್ನು ಸಂಪೂರ್ಣವಾಗಿ ಮುಚ್ಚಲಾಗಿತ್ತು. ಆ ದೃಶ್ಯವನ್ನು ನಾನು ಹೇಗೆ ನಿಭಾಯಿಸುತ್ತೇನೆ ಎಂದು ನೋಡಲು ಅವತ್ತು ಅಪ್ಪಾಜಿ, ಅಪ್ಪಣ್ಣ, ಅಮ್ಮ ಮತ್ತು ಚಿ. ಉದಯಶಂಕರ್ ಎಲ್ಲರೂ ಬಂದಿದ್ದರು.

ಒಂದೆರಡು ಬಾರಿ ರಿಹರ್ಸಲ್ ನಡೆದ ನಂತರ ಫೈನಲ್ ಟೇಕ್ ತೆಗೆದುಕೊಳ್ಳಲು ನಿರ್ದೇಶಕರು ತಯಾರಾದರು. ಆಕ್ಷನ್ ಎಂದು ಅವರು ಹೇಳಿದ ಕೂಡಲೆ ನಾನು ಒಂದೇ ಕಣ್ಣಿನಲ್ಲಿ ಕ್ಯಾಮೆರಾ ಎದುರು ನಟಿಸಲಾರಂಭಿಸಿದೆ.

ಆದರೆ ಮರುಕ್ಷಣವೇ ಕೆಲವದು ದೂರದಿಂದ "ಶಿವಣ್ಣ... ಓಡು... ಓಡು...." ಎಂದು ಬೊಬ್ಬೆ ಹಾಕಿದ್ದು ಕೇಳಿಸಿತು. ನಟನೆಯಲ್ಲಿ ತಲ್ಲೀನನಾಗಿದ್ದ ನಾನು ಅದರತ್ತ ಅಷ್ಟು ಗಮನ ಹರಿಸಲಿಲ್ಲ. ಅಷ್ಟೇ ಅಲ್ಲ, ನನ್ನ ಒಂದು ಕಣ್ಣನ್ನು ಮುಚ್ಚಿದ್ದರಿಂದ ನನಗೆ ನನ್ನ ಸುತ್ತಲೂ ಸ್ಟುಡಿಯೋದಲ್ಲಿ ಏನಾಗುತ್ತಿದೆ ಎಂದು ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ.

ಆಗ, ದೂರದಲ್ಲಿ ಅಪ್ಪಾಜಿಯಿಂದ ಹಿಡಿದು ಸೆಟ್‌ನಲ್ಲಿದ್ದ ಎಲ್ಲರೂ ಓಡುತ್ತಿದ್ದದ್ದು ನನಗೆ ಅಸ್ಪಷ್ಟವಾಗಿ ಕಾಣಿಸಿತು. ಅಪ್ಪಾಜಿ ಯಾಕೆ ಓಡುತ್ತಿದ್ದಾರೆ? ಎಂದು ನಾನು ಸ್ವಲ್ಪ ಗಾಬರಿಗೊಂಡೆ. ಆದರೆ ದೂರ ನಿಂತ ಅಪ್ಪಾಜಿ ಅಲ್ಲಿಂದಲೇ ನನ್ನತ್ತ ಕೈಸನ್ನೆ ಮಾಡುತ್ತಾ "ಕಂದಾ.... ಆ ಕಡೆ ಓಡು, ಬೇಗ ಆ ಕಡೆ ಓಡು" ಎಂದು ಹೇಳಿದ್ದು ಕೇಳಿಸಿತು. ಅಪ್ಪಾಜಿ ಹಾಗೆ ಹೇಳಿದ ಮರುಕ್ಷಣ ನಾನು ಹಿಂದೆಮುಂದೆ ನೋಡದೆ, ಅವರು ಹೇಳಿದ್ದ ದಿಕ್ಕಿನತ್ತ ಓಡಿದೆ. ಹಾಗೆ ಓಡುತ್ತಿರುವಾಗಲೇ ನನ್ನ ಕಣ್ಣಿಗೆ ಹಾಕಿದ್ದ ಮಾಸ್ಕ್‌ಅನ್ನು ತೆಗೆದೆ.



ಆಗಲೇ ನನಗೆ ಗೊತ್ತಾಗಿದ್ದು: ಸ್ಟುಡಿಯೋದಲ್ಲಿದ್ದ ಸೆಟ್ಟಿಗೆ ಬೆಂಕಿ ಬಿದ್ದಿತ್ತು, ಹೀಗಾಗಿ ಮೇಲಿನಿಂದ ಬೆಂಕಿಯ ಕಿಡಿ ಮತ್ತು ಸೆಟ್‌ನ ಅವಶೇಷಗಳು ಉರಿದು ಕೆಳಗೆ ಬೀಳುತ್ತಿದ್ದವು.

ದೇವರು ದೊಡ್ಡವನು. ಯಾರಿಗೂ ಏನೂ ಆಗಲಿಲ್ಲ. ಆವತ್ತು ಸ್ವಲ್ಪ ಹೆಚ್ಚುಕಮ್ಮಿಯಾಗಿದ್ದರೂ ಅಪ್ಪಾಜಿ, ಅಮ್ಮ, ಚಿಕ್ಕಪ್ಪ ನಾನು, ಸೆಟ್‌ನಲ್ಲಿದ್ದ ಹುಡುಗರು ಎಲ್ಲರೂ ಬೆಂಕಿಗೆ ಆಹುತಿಯಾಗುತ್ತಿದ್ದೆವು. ಆದರೆ ದೇವರ ದಯೆಯಿಂದ ನಾವೆಲ್ಲರೂ ಸುರಕ್ಷಿತವಾಗಿ ಬದುಕುಳಿದೆವು.

ಈ ದುರ್ಘಟನೆಯಿಂದ ಸುಧಾರಿಸಿಕೊಂಡ ನಂತರ ನಾವು ಮತ್ತೆ ಚಿತ್ರೀಕರಣಕ್ಕೆ ರೆಡಿಯಾದೆವು. ಆದರೆ ಆ ದೃಶ್ಯದ ಚಿತ್ರೀಕರಣಕ್ಕಾಗಿ ಬೇರೊಂದು ಸ್ಥಳದಲ್ಲಿ ಭವ್ಯವಾದ ಸೆಟ್ ಹಾಕಲಾಯಿತು. ಮಾರನೆಯ ದಿನ ಚಿತ್ರೀಕರಣ ಪುನರಾರಂಭವಾಗಬೇಕಿತ್ತು, ಆದರೆ ಅದರ ಹಿಂದಿನ ರಾತ್ರಿ ಶಾರ್ಟ್ ಸರ್ಕ್ಯೂಟ್ ಆಗಿ ಇಡೀ ಸೆಟ್ ಬೆಂಕಿಗೆ ಆಹುತಿಯಾಯಿತು.

ಹೀಗೆ 'ಶಿವಮೆಚ್ಚಿದ ಕಣ್ಣಪ್ಪ' ಚಿತ್ರವನ್ನು ತಯಾರಿಸುವ ಸಂದರ್ಭದಲ್ಲಿ ಒಟ್ಟು ಮೂರು ಬಾರಿ ಬೆಂಕಿ ಅನಾಹುತದಿಂದ ಪಾರಾದೆವು. ಕೆಲವರು ಇದೆಲ್ಲವೂ ಅಪಶಕುನ ಎಂದು ಹೇಳಿದರು. ನಾನು ಆ ಶಕುನಗಳನ್ನು ನಂಬಲ್ಲವಾದ್ದರಿಂದ ಅದರ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ. ಆದರೂ ಇದೆಲ್ಲ ಯಾಕೆ ಆಯಿತು ಎಂದು ನಾನು ಚಿಂತಿಸಿದ್ದು ನಿಜ.

ಆಗಲೂ ಅಪ್ಪಾಜಿ ನನ್ನಲ್ಲಿ ಧೈರ್ಯ ತುಂಬಿದರು. "ನೋಡು ಕಂದಾ ಚಿತ್ರೀಕರಣವೆಂದರೆ ಇಂತಹ ಕೆಲವು ಚಿಕ್ಕಪುಟ್ಟ ಘಟನೆಗಳು ಸಂಭವಿಸುತ್ತಲೇ ಇರುತ್ತವೆ. ಅದನ್ನೆಲ್ಲಾ ಎದುರಿಸಿ ನಾವು ಮುನ್ನಡೆಯಬೇಕು. ಇಂತಹ ಪ್ರಕರಣಗಳಿಂದ ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು" ಎಂದು ಅವರು ಹೇಳಿದಾಗ ನನ್ನ ದುಗುಡ ಕಡಿಮೆ ಆಯಿತು.

ಕೊನೆಗೂ 'ಶಿವಮೆಚ್ಚಿದ ಕಣ್ಣಪ್ಪ' ಮುಗಿದು ರಿಲೀಸ್ ಆಯಿತು. ಆದರೆ ನನ್ನ ಮೊದಲ ಮೂರು ಚಿತ್ರಗಳನ್ನು ಜನ ರಿಸೀವ್ ಮಾಡಿದ ಹಾಗೆ ಇದನ್ನು ಸ್ವೀಕರಿಸಲಿಲ್ಲ. ಅದೆಲ್ಲ ಸಿಲ್ವರ್ ಜ್ಯೂಬಿಲಿ ಆಚರಿಸಿದ್ದರೂ ಈ ಚಿತ್ರ ನೂರು ದಿನಗಳ ಪ್ರದರ್ಶನವನ್ನೂ ಕಾಣಲಿಲ್ಲ. ಪ್ರೇಕ್ಷಕರು ನೀಡಿದ್ದ ಈ ಫಲಿತಾಂಶದಿಂದ ಬೇಸರವಾಗಲಿಲ್ಲ. ಯಾಕೆಂದರೆ ಈ ಚಿತ್ರ ಮಾಡಲು ಆರಂಭದಲ್ಲೇ ಹಿಂಜರಿದಿದ್ದೆ. ಆದರೂ ಕೆಲವರಿಗೆ ಈ ಚಿತ್ರ ಹಿಡಿಸಿತ್ತು. ಉದಾಹರಣೆಗೆ ಇದನ್ನು ನೋಡಿ ಫೋನ್ ಮಾಡಿದ ಶ್ರೀನಾಥ್ ಅಂಕಲ್ "ಶಿವಣ್ಣ, ನಿಮ್ಮ ವಯಸ್ಸಿಗೆ ಮೀರಿ ನೀವು ಈ ಪಾತ್ರವನ್ನು ನಿರ್ವಹಿಸಿದ್ದೀರಾ.... ಹಿಂದೆ ಈ ಪಾತ್ರದಲ್ಲಿ ನಾವು ರಾಜಣ್ಣನನ್ನು ನೋಡಿದ್ದೆವು. ಈಗ ಈ ಪಾತ್ರದಲ್ಲಿ ಶಿವಣ್ಣನನ್ನು ನೋಡುವ ಸಂತೋಷ ನಮ್ಮದು" ಎಂದು ಹೇಳಿದ್ದು ನನಗಿನ್ನೂ ನೆನಪಿದೆ.

ಪತ್ರಕರ್ತರು ಕೂಡಾ ಈ ಚಿತ್ರದ ಬಗ್ಗೆ ಚೆನ್ನಾಗಿಯೇ ಬರೆದರು. ಶಿವರಾಜ್ ಕುಮಾರ್ ಈ ಪಾತ್ರದ ಮುಖಾಂತರ ರಾಜ್‌ಕುಮಾರ್ ಎತ್ತರಕ್ಕೆ ಬೆಳೆಯದಿದ್ದರೂ, ರಾಜ್‌ಕುಮಾರ್ ಹೆಸರನ್ನು ಕೆಡಿಸಿಲ್ಲ ಎಂಬ ಅರ್ಥದಲ್ಲಿ ಬರೆದರು.

ಎಲ್ಲರ ಅಭಿಪ್ರಾಯಕ್ಕಿಂತ ನಾನು ಅಪ್ಪಾಜಿಯವರ ವಿಮರ್ಶೆಗಾಗಿ ಕಾಯುತ್ತಿದ್ದೆ. ಸಿನಿಮಾ ನೋಡಿದ ನಂತರ ನಾವೆಲ್ಲರೂ ರಾತ್ರಿ ಊಟಕ್ಕೆ ಕೂತಿದ್ದಾಗ ಅಪ್ಪಾಜಿ ಬಂದು ನನ್ನ ಬೆನ್ನಿಗೊಂದು ಪ್ರೀತಿಯ ಗುದ್ದು ನೀಡಿದರು. "ಕಂದಾ... ತುಂಬ ಚೆನ್ನಾಗಿ ಮಾಡಿದ್ದೀಯ... ನೀನು ಶ್ರಮವಹಿಸಿ ಪಾತ್ರ ಮಾಡಿದ್ದು ಕಾಣಿಸುತ್ತದೆ" ಎಂದು ನನ್ನ ಹುರಿದುಂಬಿಸಿದರು.

ರಾಜ್‌ಕುಮಾರ್ ಮಗ ಕೂಡ ಥೇಟ್ ರಾಜ್‌ಕುಮಾರ್ ಥರಾನೇ ಮಾಡಬೇಕೆಂದು ಪ್ರೇಕ್ಷಕರು ನಿರೀಕ್ಷೆ ಮಾಡದಿದ್ದದ್ದು ನನ್ನ ಆತ್ಮವಿಶ್ವಾಸಕ್ಕೆ ಪುಷ್ಟಿ ನೀಡಿತ್ತು. ಅಪ್ಪಾಜಿ ನಿರ್ವಹಿಸಿದ ಪಾತ್ರವನ್ನು ನಾನು ನಿರ್ವಹಿಸುವಾಗ ಅದರ ಚೌಕಟ್ಟನ್ನು ಮೀರದಂತೆ, ಆದರೂ ಹೊಸತನವನ್ನು ನೀಡಲು ಪ್ರಯತ್ನಿಸಿದ್ದನ್ನು ಎಲ್ಲರೂ ಗುರುತಿಸಿದ್ದು ನನಗೆ ಇಷ್ಟವಾಯಿತು. ಒಬ್ಬ ಕಲಾವಿದನಿಗೆ ಇದಕ್ಕಿಂತ ಇನ್ನೇನು ಬೇಕು?

ಬಹುಶಃ 'ಶಿವಮೆಚ್ಚಿದ ಕಣ್ಣಪ್ಪ' ಚಿತ್ರವನ್ನು ಅಪ್ಪಾಜಿಯ ಚಿತ್ರದಂತೆಯೇ ಮಾಡಿದ್ದರೆ ಜನ ಅದನ್ನು ಸ್ವೀಕರಿಸುತ್ತಿದ್ದರೋ ಏನೋ? ಆದರೆ ಈಗಿನ ಜನ ಕೆಲವು ರೊಮ್ಯಾನ್ಸ್ ದೃಶ್ಯಗಳು ಇದ್ದರೆ ಇಷ್ಟಪಡುತ್ತಾರೆ ಎಂದು ಅಂತಹ ಹಲವು ದೃಶ್ಯಗಳನ್ನು ಸೇರ್ಪಡಿಸಿದ್ದೇ ಎಡವಟ್ಟಾಗಿತೇನೋ?

ನನ್ನ ಪಾಲಿಗೆ 'ಶಿವಮೆಚ್ಚಿದ ಕಣ್ಣಪ್ಪ' ಮರೆಯಲಾಗದ ಚಿತ್ರ. ಅಪ್ಪಾಜಿಯವರೊಂದಿಗೆ ನಟಿಸಿದ ಥ್ರಿಲ್ ಒಂದೆಡೆಯಾದರೆ, ಬೆಂಕಿ ಅನಾಹುತದಿಂದ ಪಾರಾದ ಸಮಾಧಾನ ಮತ್ತೊಂದೆಡೆ. ಈ ಚಿತ್ರ ಹ್ಯಾಟ್ರಿಕ್ ಸರಪಳಿಯನ್ನು ಮುಂದುವರೆಸದಿದ್ದರೂ ಜನ ನನ್ನ ಅಭಿನಯವನ್ನು ಮೆಚ್ಚಿದ್ದರ ಬಗ್ಗೆ ಸಂತಸ ಇನ್ನೊಂದೆಡೆ.......

'ಶಿವಮೆಚ್ಚಿದ ಕಣ್ಣಪ್ಪ'ನ ನಂತರ 'ಸಂಯುಕ್ತ' ಚಿತ್ರಕ್ಕೆ ಕಾಲಿಟ್ಟೆವು. 'ಕಣ್ಣಪ್ಪ'ನ ದುಮ್ಮಾನ, ಟೆನ್ಷನ್‌ಗಳ ನಂತರ ಈ ಚಿತ್ರೀಕರಣದುದ್ದಕ್ಕೂ ನಾವು ಸಖತ್ ಮಜಾ ಮಾಡಿದೆವು. ಹೇಳಿ ಕೇಳಿ ಇದು ದೆವ್ವದ ಸಬ್ಜೆಕ್ಟ್. ಚಿತ್ರೀಕರಣ ನಡೆದದ್ದೆಲ್ಲಾ ರಾತ್ರಿ ಹೊತ್ತು. ನಾನು, ಬಾಲು ಮತ್ತು ಗುರು ನಾಯಕರು. ರಾಜ್‌ಶೇಖರ್ ಮೂರ್ತಿಯವರ ಮೊಮ್ಮಗಳು ವೀಣಾ ನಾಯಕಿ. ನಾವೆಲ್ಲಾ ಏನೇನು ಮಾಡಿದ್ವಿ ಗೊತ್ತಾ....?!

(ಮುಂದುವರೆಯುತ್ತದೆ...)

ಲೀಲಾಬಾಯಿಗೆ 'ಶಿವಾಜಿ' ಅಪ್ಪುಗೆ!



ಅನುಕಂಪದ ಅಲೆ ಲೀಲಾವತಿಯತ್ತ ಬೀಸುತ್ತಿರುವಂತಿದೆ. ಲೀಲಾವತಿಗೆ ಒಳ್ಳೆಯದಾಗಲಿ ಎಂದು ಕನ್ನಡದ ಕಂದ ರಜನೀಕಾಂತ್ 'ಶಿವಾಜಿ' ಚಿತ್ರದ ಕರ್ನಾಟಕದ ಡಿಸ್ಟ್ರಿಬ್ಯೂಷನ್ ಹಕ್ಕನ್ನು ಹಿರಿಯ ನಟಿಗೆ ನೀಡಿರುವ ಸುದ್ದಿ ಬಂದಿದೆ. ಲೀಲಾವತಿಗೆ ಲಾಸ್ ಆಗದಿರಲಿ ಎಂಬ ಅನುಕಂಪದಲ್ಲಿ 'ಕನ್ನಡದ ಕಂದ'ನೂ ...ಲೇ ಕಲೆಕ್ಷನ್ ಮಾಡಿದ ಸುದ್ದಿಗಳಿವೆ.

ಕಂದಮ್ಮನ ತಾಯಿ ಲೀಲಾವತಿ ನಗುನಗುತ್ತಿರಲಿ.

ಹಿಂಗೂ ಕಾಮಿಡಿನಾ?

'ನಗೆಹಬ್ಬ' ಕಾಮಿಡಿ ಚಿತ್ರವೆಂದ ಆದರ್ಶ. ಪೋಸ್ಟರ್ ನೋಡಿದರೆ ಕಾಮಿಡಿ 'ಭಯಂಕರ'ವಾಗಿದೆ ಎನಿಸುತ್ತಿದೆ.



ಇಲ್ಲೊಂದು ಕಾಮಿಡಿ ನೋಡಿ: ರಿಲೀಸ್‌ಗೆ ಹಿಂದಿನ ದಿನವೇ, ಅಂದರೆ ಗುರುವಾರದ ಸಂಜೆ ಪೇಪರಲ್ಲಿ 'ನಗೆ ಹಬ್ಬ' ಸೂಪರ್‌ಹಿಟ್ ಎಂಬ ಜಾಹೀರಾತು! ಹಿಂಗೂ ಕಾಮಿಡಿ ಮಾಡೋದು ಅದ್ಯಾವ ಆದರ್ಶ?

ಗಣೇಶನೋ, ಗಣಪತಿಯೋ?



'ಮುಂಗಾರಿನ ಮಳೆ' ಭರಪೂರ ಮೂಡಿಸುತ್ತಿರುವುದಕ್ಕೆ ಕಾರಣ ಕಾಮಿಡಿ ಟೈಮ್ ಗಣೇಶ್. ಕಾಮಿಡಿ ಟೈಮ್ ಮೂಲಕ ಜನಪ್ರಿಯನಾಗಿದ್ದ ಈ ಹುಡುಗನಿಗೆ ಗಾಯಬ್ ಆಗಿರುವ ಸುನೀಲ್ ರಾವ್‌ನ ಸ್ಥಾನ ತುಂಬುವ ಸಾಮರ್ಥ್ಯವಿದೆ. ಆದರೇನು ಮಾಡುವುದು? ಫಿಟ್‌ನೆಸ್ ಬಗ್ಗೆ ಒಂದಿಷ್ಟೂ ಕಾಳಜಿಯಿಲ್ಲದ ಗಣೇಶ್ ಉಬ್ಬುತ್ತಲೇ ಇದ್ದಾನೆ. ಮುಖ ಎಷ್ಟಿದ್ದರೂ ಗಡಿಗೆಯಂತಾಗಿ ಗಣಪತಿಯಂತಾಗುತ್ತಿದ್ದಾನೆ.

ಇದು ಕಾಮಿಡಿಯಲ್ಲ, ಸೀರಿಯಸ್ ವಿಷಯ ಎಂಬುದು ಗಣೇಶ್‌ಗೆ ನೆನಪಿರಲಿ.

ಬಂದ್‌ನಲ್ಲಿ ಬೆಳದಿಂಗಳು

ಗಾಂಧಿನಗರದ ಹಲವರು ಬಂದ್ ಆಚರಿಸುತ್ತಿದ್ದರೂ ಎರಡು ಚಿತ್ರಗಳು ಸೆಟ್ಟೇರಿವೆ. ರಾಮದಾಸ್ ನಾಯ್ಡು ನಿರ್ದೇಶನದ 'ಮೊಗ್ಗಿನ ಜಡೆ' ಮೊನ್ನೆ ಆರಂಭವಾದರೆ, ಲಿಂಗದೇವರು ನಿರ್ದೇಶನದ 'ಕಾಡಬೆಳದಿಂಗಳು' ಈಗಾಗಲೇ ಗುಟ್ಟಾಗಿ ಚಿತ್ರೀಕರಣ ಮುಗಿಸಿಬಿಟ್ಟಿದೆ.


ಸಿನಿಮಾರಂಗವನ್ನು ಗುತ್ತಿಗೆ ಪಡೆದವರಂತೆ ವರ್ತಿಸುತ್ತಿದ್ದ ಸಂದೇಶ್ ನಾಗರಾಜ್ ಅವರ ಆಜ್ಞೆಯನ್ನು ಕಲಾತ್ಮಕ ವಲಯದ ಇಬ್ಬರು ನಿರ್ದೇಶಕರು ಧಿಕ್ಕರಿಸಿರುವುದು ಸಂತೋಷದ ವಿಷಯ.

ಜಿಮ್ ಹುಡುಗನ 'ದುನಿಯಾ'

'ದುನಿಯಾ' ಚಿತ್ರದ ಹೀರೋ ವಿಜಯ್ ಸಖತ್ ಸ್ಟಂಟ್ಸ್ ಮಾಡಿದ್ದಾನಂತೆ. ಚಿತ್ರದ ಸ್ಟಿಲ್‌ಗಳೂ ಭರವಸೆ ಹುಟ್ಟಿಸಿವೆ.



ಜಿಮ್‌ನಲ್ಲಿ ತರಬೇತುದಾರನಾಗಿ, ಟೆಂಟ್ ಸಿನಿಮಾಗಳನ್ನು ಕದ್ದು ನೋಡುತ್ತಾ ಸಿನಿಮಾ ಹುಚ್ಚು ಹತ್ತಿಸಿಕೊಂಡ ಜಿಮ್ ಬಾಯ್ ವಿಜಯ್ ಮಿಂಚುವಂತಾಗಲಿ.



ಲಾಂಗು, ಮಚ್ಚು: too long, too much

ಶುಕ್ರವಾರದ ಸಿನಿಮಾ ಜಾಹೀರಾತುಗಳನ್ನು ನೋಡಲು ಹೆದರಿಕೆ ಆಗುತ್ತಿದೆ. ಏಕೆಂದರೆ ಬರೀ ಲಾಂಗುಗಳು, ಮಚ್ಚುಗಳದೇ ದರ್ಬಾರು! 'ಪ್ರಭಾರಿ' ಯೊಬ್ಬ 'ಲಾಂಗ್' ಲೈಫ್ ಎಂದರೆ, 'ಮಸಿ' ಮಾಡುವವನೂ `love ಲಾಂಗ್ life' ಎನ್ನುತ್ತಿದ್ದಾನೆ. ಯಾವ ಲಾಂಗೋ? ಯಾವ ಲವ್ವೋ? ಯಾವ ಲೈಫೋ? ಬಲ್ಲವರ್‍ಯಾರು?

ಹೇಡಿ ರೌಡಿಗಳು!

ಇತ್ತೀಚೆಗಂತೂ ನಮ್ಮ ಕನ್ನಡ ಚಿತ್ರರಂಗದಲ್ಲಿ ರೌಡಿಗಳದ್ದೇ ರಾಜ್ಯಭಾರ ಎನ್ನುವಂತಾಗಿದೆ. ಮಚ್ಚಿನ ಮೋಜು, ಲವ್ಲಿಂಗ್ ಲಾಂಗು, ಒಡಿ ಮಗನ ರೋಮ್ಯಾನ್ಸು.... ಆದರೆ ಈ ಚಿತ್ರಗಳು ನಿಜವಾಗಲೂ ವಾಸ್ತವದ ಚಿತ್ರಣವನ್ನು ನೀಡುತ್ತಿವೆಯೇ?

ಈ ಪ್ರಶ್ನೆ ಯಾಕೆಂದರೆ, ಮೊನ್ನೆ 'ಈ ರಾಜೀವ್ ಗಾಂಧಿ ಅಲ್ಲ' ಚಿತ್ರದ ಕೆಸೆಟ್ ಬಿಡುಗಡೆ ಸಮಾರಂಭದಲ್ಲಿ



ಎಸಿಪಿ ಬಿ.ಕೆ. ಶಿವರಾಮ್‌ರವರು ತೆರೆಯ ಮೇಲೆ ಹೀರೊಗಳಾಗಿ ವಿಜೃಂಭಿಸುವ ರೌಡಿಗಳು ನಿಜಜೀವನದಲ್ಲಿ ದೊಡ್ಡ ಪುಕ್ಕಲುಗಳಾಗಿರುತ್ತಾರೆ ಎಂದು ಹೇಳಿದರು.

"ಈ ರೌಡಿಗಳು ಜನಸಾಮಾನ್ಯರಿಗಿಂತ ಇವರು ಪುಕ್ಕಲುಗಳಾಗಿರುತ್ತಾರೆ. ಯಾರಾದರೂ ಸಿನಿಮಾ ಮಾಡುವುದಾದರೆ, ಅಥವಾ ಮೆಗಾ ಸೀರಿಯಲ್ ಮಾಡುವುದಾದರೆ ಇವರ ಪುಕ್ಕಲುತನದ ಬಗ್ಗೆ ನಾನು ಕನಿಷ್ಠ ಒಂದು ಸಾವಿರ ಉದಾಹರಣೆಗಳನ್ನು ಕೊಡಬಲ್ಲೆ" ಎಂದರು ಶಿವರಾಂ.

ಆದರೆ ರೌಡಿಗಳನ್ನು ಪುಕ್ಕಲುಗಳಂತೆ ತೋರಿಸಲು ಯಾವ ನಿರ್ದೇಶಕ ಮುಂದೆ ಬರುತ್ತಾನೆ? ಅಷ್ಟೇ ಅಲ್ಲ ಆ ಪಾತ್ರಗಳಲ್ಲಿ ನಟಿಸಲು ಯಾವ ನಟ ಸಿದ್ಧನಿರುತ್ತಾನೆ?!



ಫಸ್ಟ್ ಮ್ಯಾಚ್‌ಗೆ 'ಸಿಕ್ಸರ್'?

'ಸಿಕ್ಸರ್' ಎಂಬ ಚಿತ್ರದಲ್ಲಿ ನಟಿಸಿರುವ ನಟ ದೇವರಾಜ್‌ರವರ ಹತ್ತೊಂಬತ್ತರ ಹರೆಯದ ಪುತ್ರ ಪ್ರಜ್ವಲ್ ಬಗ್ಗೆ ಇಲ್ಲೊಂದು ತಮಾಷೆಯ ಸಂಗತಿ ಇದೆ. ಈ ಚಿತ್ರ ಪ್ರಾರಂಭವಾದಾಗ "ನಾನು ಹೊಸಬ. ದಯವಿಟ್ಟು ಸ್ವಲ್ಪ ಅಡ್ಜೆಸ್ಟ್ ಮಾಡಿಕೊಳ್ಳಿ" ಎಂದು ಪ್ರಜ್ವಲ್ ನಿರ್ದೇಶಕರನ್ನು ಕೇಳಿಕೊಂಡರಂತೆ. ಅದಕ್ಕೆ ನಿರ್ದೇಶಕ ಶಶಾಂಕ್ "ನಾನೇನು ಅಡ್ಜೆಸ್ಟ್ ಮಾಡಿಕೊಳ್ಳಲಿ? ನಾನೇ ಹೊಸಬ. ನನಗೂ ಇದು ಮೊದಲ ಚಿತ್ರ. ಪ್ರೇಕ್ಷಕರೇ ನಮ್ಮಿಬ್ಬರನ್ನು ಅಡ್ಜೆಸ್ಟ್ ಮಾಡ್ಕೋತಾರೆ ಬಿಡು" ಎಂದರಂತೆ.

'ಸಿಕ್ಸರ್' ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಸಿಕ್ಸರ್ ಬಾರಿಸಿದರೆ ಮಾತ್ರ ಪ್ರೇಕ್ಷಕ ಅಡ್ಜೆಸ್ಟ್ ಮಾಡಿಕೊಂಡಿದ್ದಾನೆಂದು ಅರ್ಥ!



ಮಠದಿಂದ ಎದ್ದ ಮಂಜುನಾಥ



ಪತ್ರಕರ್ತ ಬಿ.ವಿ. ವೈಕುಂಠರಾಜು ಅವರ ಪುತ್ರ ಸನತ್ ಕುಮಾರ್ ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ. ಹಲವಾರು ಸಾಕ್ಷ್ಯ ಚಿತ್ರಗಳನ್ನು ನಿರ್ದೇಶಿಸಿರುವ, ಸ್ವತಃ ಪತ್ರಕರ್ತರಾಗಿರುವ ಸನತ್ ಕುಮಾರ್ ಅರಂಗೇಟ್ರಂ ಮಾಡುತ್ತಿರುವುದು ನಿರ್ದೇಶಕನಾಗಿಯೂ ಅಲ್ಲ, ನಟನಾಗಿಯೂ ಅಲ್ಲ, ಬದಲಾಗಿ ನಿರ್ಮಾಪಕನಾಗಿ. ಇವರ ಚೊಚ್ಚಲ ಚಿತ್ರವನ್ನು ನಿರ್ದೇಶಿಸುತ್ತಿರುವವರು 'ಮಠ' ಖ್ಯಾತಿಯ ಗುರುಪ್ರಸಾದ್. ಅಂದಹಾಗೆ, ಜಗ್ಗೇಶ್ ಅಭಿನಯಿಸುತ್ತಿರುವ ಈ ಚಿತ್ರದ ಹೆಸರು 'ಎದ್ದೇಳು ಮಂಜುನಾಥ'.

ಈ ಚಿತ್ರದ ಕಥೆ ಬೆಂಗಳೂರಿನ ಶ್ರೀರಾಂಪುರದ ಸುತ್ತಮುತ್ತ ನಡೆಯುತ್ತದೆಯಂತೆ. ಹೇಳಿಕೇಳಿ ಶ್ರೀರಾಂಪುರ ರೌಡಿಗಳ ತವರುಮನೆಯೆಂದೇ ಹೆಸರುವಾಸಿ. ಇನ್ನೊಂದು ವಿಚಿತ್ರ ಯಾವುದೆಂದರೆ, ಜಗ್ಗೇಶ್ ಮತ್ತು ಸನತ್ ಇಬ್ಬರೂ ಶ್ರೀರಾಂಪುರದ ಪ್ರಾಡಕ್ಟ್‌ಗಳೇ. "ಶ್ರೀರಾಂಪುರ ರೌಡಿಗಳ ರಾಜ್ಯವಲ್ಲವೇ? ಹಾಗಾದರೆ ಅದನ್ನೇ ಚಿತ್ರದಲ್ಲಿ ತೋರಿಸುತ್ತೀರಾ?" ಎಂದು ಕೇಳಿದಾಕ್ಷಣ ಜಗ್ಗೇಶ್ ಚುರುಕಾದರು. "ನಾನೇನು ರೌಡೀನಾ?" ಎಂದು ಹೇಳಿ, ಮರುಕ್ಷಣವೇ "ಈಗ ಅಲ್ಲಿನ ರೌಡಿಗಳೆಲ್ಲ ನಾಶವಾಗಿದ್ದಾರೆ. ಹೀಗಾಗಿ ಈಗ ಶ್ರೀರಾಂಪುರ ರಾಮರಾಜ್ಯವಾಗಿದೆ" ಎಂದರು.

ಅದೆಲ್ಲ ಬದಿಗಿರಲಿ, "ಇದು ಜಗ್ಗೇಶ್‌ರವರ ವೃತ್ತಿಜೀವನದ ಇಪ್ಪತ್ತೈದನೇ ವರ್ಷಕ್ಕಾಗಿ ವಿಶೇಷವಾಗಿ ಹೆಣೆದ ಕಥಾವಸ್ತು ಎಂದರು" ನಿರ್ದೇಶಕ ಗುರುಪ್ರಸಾದ್.

ಅಂದರೆ ಈ ವರ್ಷ ತಪ್ಪಿದ ರಾಜ್ಯ ಪ್ರಶಸ್ತಿ ಮುಂದಿನ ವರ್ಷ ಜಗ್ಗೇಶ್‌ಗೆ ಸಿಗಬಹುದಾ?

ಮನೆಗೇ ಬೇಡವಾದ ಆದಿತ್ಯ!

ಪಾಪ, ಫ್ಲಾಪ್ ನಟ ಆದಿತ್ಯ ಈಗ ತನ್ನ ಮನೆಯವರಿಗೂ ಬೇಡವಾದನೆ?

ಈ ಪ್ರಶ್ನೆ ಯಾಕೆಂದರೆ, ಅಪ್ಪ ರಾಜೇಂದ್ರ ಸಿಂಗ್ ಬಾಬು ಆದಿತ್ಯನನ್ನು ಹಾಕಿಕೊಂಡ 'ಲವ್' ಮಾಡಿದ್ದು, ಅದು ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದ್ದು ಇತಿಹಾಸ. ಇತ್ತೀಚೆಗೆ ಆದಿತ್ಯನ ಮಾವ ಜೈಜಗದೀಶ್ ಇದೇ ಆದಿತ್ಯನನ್ನು ಹಾಕಿಕೊಂಡು 'ಮದನ' ಎಂಬ ಚಿತ್ರವನ್ನು ನಿರ್ಮಿಸಿ-ನಿರ್ದೇಶಿಸಿದ್ದರು. ಆದರೆ ದುರದೃಷ್ಟವಶಾತ್ 'ಲವ್'ಗೆ ಆಗಿದ್ದೇ 'ಮದನ'ನಿಗೂ ಆಗಿದೆ.

ಈಗ ಬಾಬು ಮತ್ತು ಜೈಜಗದೀಶ್ ಇಬ್ಬರೂ ಮನೆಯ ಹೀರೋ ಬಿಟ್ಟು ಗಾಂಧಿನಗರದ ಹೀರೋಗಳತ್ತ ನೋಡುತ್ತಿದ್ದಾರೆ ಎಂಬ ಸುದ್ದಿ ಹರಡಿರುವುದರಿಂದ ಪಾಪ ಆದಿತ್ಯ ಅಂದಿದ್ದು.



ಹಂಸ್ ಮ… ರಿದಮ…

ಈಗ ಮಾರುಕಟ್ಟೆಯ… 'ಸಿಕ್ಸರ್' ಚಿತ್ರದ ಐಟಮ್… ಕೇಳಿದವರಿಗೆ ಕನ್ನಡಕ್ಕೆ ಮತ್ತೆ… ಎಲ್.ಆರ್. … ಹುಟ್ಟಿಬಂದಿರಬಹುದೆ … ಅನ್ನಿಸದೇ ಇರಲಾ… ಕೈಕಾಲುಗಳು ಕುಲುಕು… ಹಾಡಿರುವ ಗಾಯಕಿಯ … ನಂದಿನಿ. ಈಕೆ ಹಂಸಲೇಖಾ… ಪ್ರೀತಿಯ ಮಗಳು. ಇದು ಈ…



ಚೊಚ್ಚಲ ಹಾ… "ನನ್ನ ಮ… ಅನಿವಾರ್ಯವಾಗಿ ಈ … ಸಾಂಗ್‌ಅನ್ನು ಹಾಡಬೇಕಾಯ… ನಿರ್ಮಾಪಕರು ಈಕೆ ಹಾ… ಹಾಡುಗಳಲ್ಲಿ ಇದನ್ನೇ … ಮಾಡಿರುವುದರಿಂದ ನನಗೆ … ದಾರಿ ಕಾಣಿಸಲಿಲ್ಲ. ನನ್ನ … ಈ ಹಾಡನ್ನು ಜನ ಸ್ವೀಕ… ಅಂತ ಆಶಿಸುವೆ" ಎಂದು … ಹೇಳಿ…

ಸಿನಿಮಾ ರಂಗಕ್ಕೆ ಕಾಲಿಟ… ಹಂಸಲೇಖಾ ಕುಟುಂಬದ … ಸದಸ್ಯೆ ಈಕೆ. ನಂದಿನಿ ಹಂಸಲೇ… ಧ್ವನಿ ಸ್ವಲ್ಪಮಟ್ಟಿಗೆ ಮ… ಶುಭಾ ತರಹ ಇರುವುದ… ಈಕೆಗೆ ಭವ್ಯವಾದ ಭವಿ… ಎಂದು ಹೇಳಬಹು…

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises